# ಅಖಿಲ-ಭಾರತ ೫೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ

## ಕಲಬುರ್ಗಿ (ಗುಲ್ಬರ್ಗಾ)

ಅಕ್ಟೋಬರ್ ೨೯ ರಿಂದ ನವೆಂಬರ್ ೧, ೧೯೮೭



ಸಮ್ಮೇಳನಾಧ್ಯಕ್ಷರಾದ

ಡಾ|| ಸಿದ್ಧಯ್ಯ ಪುರಾಣಿಕ

ಅವರು ಮಾಡಿದ

# ಅಧ್ಯಕ್ಷ ಭಾಷಣ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

## ಸಿರಿಗನ್ನಡಂ ಗೆಲ್ಗೆ

ಪೂಜ್ಯ ಶ್ರೀ ಶರಣ ಬಸವಪ್ಪಅಪ್ಪ ಅವರೇ, ವಾಜಿಬುಲ್ ತಾಜೀಮ್ ಹಜರತ್ ಸೈಯದ್ ಶಹಮುಮ್ಮದ ಮುಹಮ್ಮದುಲ್ ಹುಸೇನಿ ಅವರೇ, ಪರಿಷದಧ್ಯಕ್ಷರೇ, ಸ್ವಾಗತ ಸಮಿತಿಯ ಪದಾಧಿಕಾರಿಗಳೇ, ಉದ್ಘಾಟಕರಾದ ಮಾನ್ಯಶ್ರೀ ಎಂ. ಪಿ. ಪ್ರಕಾಶ್ ಅವರೇ ಮತ್ತು ಕನ್ನಡ ಕುಟುಂಬದ ಅಕ್ಕತಂಗಿಯರೆ, ಅಣ್ಣತಮ್ಮಂದಿರೆ,

ನನ್ನ ಪಾಲಿನ 'ಕರುಣಾಳು ಬೆಳಕು' ಶ್ರೀ ಶರಣ ಬಸವೇಶ್ವರರ ಹಾಗೂ ಹಜರತ್ ಬಂದೇ ನವಾಜರ ತಿರುನೆಲೆಯಾದ ಈ ಕಲಬುರಗಿ ನಗರದಲ್ಲಿ ಸೇರಿರುವ ೫೮ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪವಿತ್ರ ನಗರವೆಂದೇ ಹೆಸರಾಗಿರುವ ಕಲಬುರಗಿಯ, ಪವಿತ್ರತರವಾದ ಶರಣಬಸವ ಕ್ಷೇತ್ರದಲ್ಲಿ ಜರುಗುತ್ತಿದ್ದೂ ಕೆಲವು 'ಪವಿತ್ರಾತ್ಮರ' ದೃಷ್ಟಿಯಲ್ಲಿ ಪಾವಿತ್ರ್ಯವಿಲ್ಲದ ಈ ಸಮ್ಮೇಳನಕ್ಕೆ,ಅಧ್ಯಕ್ಷನಾಗಿ ನಾನು ಆಯ್ಕೆಗೊಂಡಿರುವುದು ಸೋಜಿಗಗಳಲ್ಲಿ ಸೋಜಿಗ. ತಾಯಿ ತನ್ನ ಕಿರಿಯ ಮಗನನ್ನು, ದಡ್ಡಮಗನನ್ನು, ಜಡ್ಡಿಗೀಡಾದ ಮಗನನ್ನು ಹೆಚ್ಚಿನ ಮಮತೆಯಿಂದ ಹೊರೆಯುವಳಂತೆ. ಕನ್ನಡ ತಾಯಿಯೂ ತನ್ನ ಈ ಕಿರಿಯ ಮಗನನ್ನು, ಅಪ್ರಬುದ್ಧ ಮಗನನ್ನು ಈ ಸಲ ತನ್ನ ತೋಳ ತೊಟ್ಟಿಲಲ್ಲಿಟ್ಟು ತೂಗಬಯಸಿದಳೆಂದು ತೋರುತ್ತಿದೆ. ಕಲಬುರಗಿ ತಾಯಿಯೂ ಸ್ವಾಗತ ಸಮಿತಿಯ ಮುಖಾಂತರ ನಾನೇ ಈ ಸಲ ಕನ್ನಡ ತಾಯಡಿಯ ತಮ್ಮಡಿಯಾಗಬೇಕೆಂದು ಹಟ ಹಿಡಿದ ಕಾರಣ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಸಮಿಯು ಅದಕ್ಕೆ ಮನ್ನಣೆಯ ಮುದ್ರೆಯನ್ನಿತ್ತ ಕಾರಣ ಈ ಪರಮಭಾಗ್ಯ ನನ್ನದಾಗಿದೆ. 'ಬಯಸಿ ಬಂದುದು ಅಂಗ ಭೋಗ, ಬಯಸದೆ ಬಂದುದು ಲಿಂಗ ಭೋಗ' ಎಂಬ ಶರಣರ ಸೂಳ್ನುಡಿಯನ್ನು ನಂಬಿರುವ ನಾನು ಈ ಗೌರವನನ್ನು ಕನ್ನಡ ತಾಯಿ, ಕಲಬುರಗಿ ತಾಯಿಯರ ಹಸಾದವೆಂದು ನತಮಸ್ತಕನಾಗಿ ಸ್ವೀಕರಿಸುವ ಸಾಹಸ ಮಾಡಿದ್ದೇನೆ.

"ಬಡವರೊಳಗೆ ಎನ್ನಿಂದಾರು ಬಡವರಿಲ್ಲ, ಕೊಡುವರೊಳಗೆ ನಿನ್ನಿಂದಾರು ಕೊಡುವರಿಲ್ಲ" ಎಂದಿದ್ದಾರೆ. ದಾಸವರೇಣ್ಯ ಪುರಂದರದಾಸರು. ಅವರ ಕ್ಷಮೆಕೋರಿ

ಅವರ ಈ ಹೊನ್ನುಡಿಗಳನ್ನು ಹೀಗೆ ಬಳಸಿಕೊಳ್ಳುತ್ತೇನೆ: "ಅರ್ಹತೆಯ ಬಡವರೊಳಗೆ ಎನ್ನಿಂದಾರು ಬಡವರಿಲ್ಲ! ಕೊಡುವರೊಳಗೆ ಕಲಬುರಗಿಯ ಕನ್ನಡ ಕುಲಬಾಂಧವರಿಂದಾದ ಕೊಡುವರಿಲ್ಲ!" ಹೌದು, ಈ ನೃಪತುಂಗನ ನಾಡಿನ, ಕಲ್ಯಾಣ ಕರ್ನಾಟಕದ ಕನ್ನಡ ಸೋದರ ಸೋದರಿಯರ ಔದಾರ್ಯ ದೊಡ್ಡದು, ಸ್ಥೈರ್ಯ ದೊಡ್ಡದು. ಇಲ್ಲದಿದ್ದರೆ ಘೋರ ಕ್ಷಾಮ ಸಂತ್ರಸ್ತರ ಗಿದ್ದೂ ಇಂಥ ಬೃಹತ್ ಸಮ್ಮೇಳನವೊಂದರ ಹೊಣೆ ಹೊರುತ್ತಿದ್ದರೆ? ಬರವೆಂದರೇನೆಂದರಿಯದಿದ್ದ ಈ ಭಾಗ ಬರದ ಬೇಗೆಗೆ ತುತ್ತಾದುದು ಕಾಲವೈಚಿತ್ರ್ಯ! ಇನ್ನು ಈ ಭಾಗಕ್ಕಾಗಲೀ, ಯಾವ ಭಾಗಕ್ಕಾಗಲಿ ಬರ ಬರದಿರಲೆಂದೂ ಬರ ಬರದಂತೆ ಮಾಡುವ ಬುದ್ಧಿ ರಾಜ್ಯ-ಕೇಂದ್ರ ಸರ್ಕಾರಗಳಿಗೆ ಬರಲೆಂದೂ ಪ್ರಾರ್ಥಿಸುತ್ತೇನೆ. ಜನರು ಮಸಾಲೆ ದೋಸೆ ತಿನ್ನುವುದನ್ನು ನಿಲ್ಲಿಸಿಲ್ಲ—ಎಂದು ಸಮರ್ಥಿಸಿಕೊಂಡು ಬರಗಾಲದಲ್ಲಿಯೇ ಸಮ್ಮೇಳನವನ್ನು ಜರುಗಿಸದೆ, ಬರವಿದ್ದಾಗ ಮುಂದೂಡಿ, ಮಳೆ ಬಂದಾಕ್ಷಣ ತಾವೇ ಮುಂದೆ ಬಂದು, ಈಗ ಈ ಸಮ್ಮೇಳನವನ್ನು ಅಭೂತಪೂರ್ವ ವೈಭವೋತ್ಸಾಹಗಳೊಡನೆ ಜರುಗಿಸುತ್ತಿರುವ ತಮಗೆ ತಲೆಬಾಗುತ್ತೇನೆ.

ರಾಯಚೂರು ನನಗೆ ಜನ್ಮವಿತ್ತ ಜಿಲ್ಲೆ; ಕಲಬುರಗಿ ನನ್ನನ್ನು ಕವಿಯನ್ನಾಗಿ, ಕನ್ನಡದ ಹೋರಾಟಗಾರನನ್ನಾಗಿ, ಆಡಳಿತಗಾರನನ್ನಾಗಿ ರೂಪಿಸಿದ ಜಿಲ್ಲೆ; ಬೀದರು ನನ್ನ ಕನ್ನಡ ಭಕ್ತಿಗೆ ಒರೆಗಲ್ಲಾಗಿ, ಕನ್ನಡ ಹೋರಾಟಕ್ಕೆ ಕಣವಾಗಿ ನಿಂತ ಜಿಲ್ಲೆ; ಬಳ್ಳಾರಿಯ ಹರಪನಹಳ್ಳಿಯಲ್ಲಿ ಜರುಗಿದ ೩೦ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯ ಗೋಷ್ಠಿಯ ಅಧ್ಯಕ್ಷ ಪೀಠಕ್ಕೆ ನನ್ನನ್ನೇರಿಸಿ ವಿಶಾಲ ಕರ್ನಾಟಕಕ್ಕೆ ನನ್ನನ್ನು ಪರಿಚಯಿಸಿದ ಜಿಲ್ಲೆ. ಈ ಸೃಷಿನ ಸೀಮೆಯ ಕೇಂದ್ರವಾದ ಕಲಬುರಗಿ ನಗರದಲ್ಲಿ ೧೯೪೯ರಲ್ಲಿ ಅಪೂರ್ವ ಸಂಭ್ರಮ ಉತ್ತುಂಗ ವ್ಯಕ್ತಿತ್ವದ ಪೂಜ್ಯ ಉತ್ತಂಗಿ ಚೆನ್ನಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿದ ೩೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತಾಧ್ಯಕ್ಷನನ್ನಾಗಿ ನನ್ನನ್ನು ಮಾಡಿದುದಲ್ಲದೆ ಈಗ ಸಮ್ಮೇಳನಾಧ್ಯಕ್ಷನನ್ನಾಗಿಯೂ ಕಲಬುರಗಿಯ ಕರುಳಿನ ಕನ್ನಡ ಬಾಂಧವರು ಮಾಡಿರುವಾಗ ಸಹಜವಾಗಿಯೇ ನನ್ನ ಹಿಗ್ಗು ಹೀಲಿಗೆದರಬೇಕಿತ್ತು. ಆದರೆ, ನನ್ನನ್ನು ಆಶೀರ್ವದಿಸಲು ನನ್ನ ಪೂಜ್ಯ ತಂದೆಯವರಾದ ಕವಿ, ಪುರಾಣ ಪ್ರವಚನ ಪಟು, ವೈದ್ಯಭೂಷಣ ಕಲ್ಲಿನಾಥಶಾಸ್ತ್ರಿಗಳವರಾಗಲಿ, ತಾಯಿ ದಾನಶೀಲೆ ದಾನಮ್ಮನವರಾಗಲಿ,ಹರಸಿ ಬೆಳೆಸಿ ಬೆಳಕಿಗೆ ತಂದ ಪ್ರಾತಃಸ್ಮರಣೀಯರಾದ ಪೂಜ್ಯ ದೊಡ್ಡಪ್ಪ ಶರಣಬಸವಪ್ಪ ಅಪ್ಪಾ ಅವರಾಗಲಿ ಈಗ ಇಲ್ಲವಲ್ಲ ಎಂಬ ಕಳವಳದ ಕಾರಂಜಿ ಪುಟಿಯುತ್ತಿದೆ ಒಳಗೊಳಗೆ! ಅಲ್ಲದೆ, ನನ್ನ ಪ್ರಗತಿಗೆ ನೆರವಾದ ಸರ್ವಶ್ರೀ ಅಣ್ಣಾರಾವ್ ಗಣಮುಖಿ ಅವರು, ಮಹಮ್ಮದಅಲಿ ಸಾಹೇಬರು, ವಾಯ್. ವಿರೂಪಾಕ್ಷಪ್ಪನವರು ಇಲ್ಲವಲ್ಲ-ಎಂಬ ತಳಮಳ ಬೇರೆ. ನ್ಯಾಯ ನಿಷ್ಠುರ ನಾಯಕ ಚಂದ್ರಶೇಖರ ಪಾಟೀಲರಿಲ್ಲ; ಶಿಕ್ಷಣ ಶಿಲ್ಪಿ ರಾಮಪುರೆ ಮಹಾದೇವಪ್ಪನವರಿಲ್ಲ; ಶ್ರೇಷ್ಠ ಸಂಶೋಧಕ



ಕಪಟರಾಳ ಕೃಷ್ಣರಾಯರಿಲ್ಲ, ವಿದ್ವಾನ್ ವೀರೇಶ್ವರ ಶಾಸ್ತ್ರಿಗಳಿಲ್ಲ, ರಾ. ಗು. ಜೋಶಿಯವರಿಲ್ಲ; ಪ್ರೊ|| ಪ್ರಭುಲಿಂಗಯ್ಯ ಮಲ್ಲಾಪುರ ಅವರಿಲ್ಲ ಇನ್ನೂ ಹಲವು ಗಣ್ಯರಿಲ್ಲ!

ಇವರಲ್ಲದೆ ಕನ್ನಡನಾಡು ಬೀದರ ಸಾಹಿತ್ಯ ಸಮ್ಮೇಳನದಿಂದೀಚೆಗೆ ಕಳೆದುಕೊಂಡ ಜೀವರತ್ನಗಳೆಷ್ಟು! ಮಹಾಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರರು, ಸಿದ್ಧರಾಮನ ಸಾಕ್ಷಾತ್ ಸುಪುತ್ರಿ ಜಯದೇವಿ ತಾಯಿ ಲಿಗಾಡೆ ಅವರು, ಸೋದರಿಯರಾದ ಗೀತಾ ಕುಲಕರ್ಣಿ, ಗೀತಾ ದೇಸಾಯಿ ಅವರು, ಹಿರಿಯ ವಿಮರ್ಶಕರಾದ ಎಸ್.ವಿ. ರಂಗಣ್ಣ ಅವರು ಹಾಗೂ ವಿ.ಎಂ. ಇನಾಮದಾರರು, ಶ್ರೇಷ್ಠ ಕಾದಂಬರೀಕಾರರಾದ ಕೃಷ್ಣಮೂರ್ತಿ ಪುರಾಣಿಕ, ಜಯತೀರ್ಥ ರಾಜಪುರೋಹಿತ ಹಾಗೂ ವಿಶುಕುಮಾರರು, ಹಿರಿಯ ವಿದ್ವಾಂಸರಾದ ಎಲ್. ಗುಂಡಪ್ಪನವರು, ಎನ್. ಅನಂತರಂಗಾಚಾರ್ ಅವರು, ಶ್ರೇಷ್ಠ ಅನುವಾದಕ ಗುರುನಾಥ ಜೋಶಿ ಅವರು, ಹಾಸ್ಯರಸಕ್ಕೆ ಇನ್ನೊಂದು ಹೆಸರೆನಿಸಿದ್ದ ನಾ. ಕಸ್ತೂರಿ ಅವರು, ದಾಶರಥಿ ದೀಕ್ಷಿತ ಅವರು, ಹಿರಿಯ ಕತೆಗಾರ ಬಾಗಲೋಡಿ ದೇವರಾಯರು, ಪ್ರಾಧ್ಯಾಪಕರಾದ ಎಂ. ಬಿ. ಕೊಟ್ರಶೆಟ್ಟಿ ಅವರು, ಎಸ್. ಎಸ್. ಬ್ಯಾತನಾಳ ಅವರು, ಕನ್ನಡ ಚಿತ್ರರಂಗವನ್ನು ಬೆಳಗಿದ ಉದಯಕುಮಾರ, ಪುಟ್ಟಣ್ಣ ಕಣಗಾಲ್, ಮಂಜುಳಾ ಅವರು, ಅಮರ ಶಿಲ್ಪಿ ರಂಜಾಳ ಗೋಪಾಲಕೃಷ್ಣ ಶಣೈ ಅವರು, ಹಿರಿಯ ಶಿಕ್ಷಣ ತಜ್ಞರಾದ ಎ. ಸಿ. ದೇವೇಗೌಡರು, ಎಚ್. ವಿ. ಶ್ರೀರಂಗರಾಜು ಅವರು, ಕನ್ನಡ ಬೆರಳಚ್ಚಿನ ರೂವಾರಿ ಕೆ. ಅನಂತಸುಬ್ಬರಾಯರು, ಹಿರಿಯ ಕವಿ ಗಂಗಾಧರ ಚಿತ್ತಾಲ ಅವರು, ಹಿರಿಯ ಸಾಹಿತಿ-ವಿದ್ವಾಂಸ-ವಿಮರ್ಶಕ ಸ. ಸ. ಮಾಳವಾಡರು, ಬ. ನ. ಸುಂದರರಾಯರು, ಕೆ. ಟಿ. ರಾಮಸ್ವಾಮಿ ಅಯ್ಯಂಗಾರ್ ಅವರು, ಹರಿದೇಶಪಾಂಡೆ ಅವರು, ಜೀರಿಗೆ ಕಟ್ಟಿ ಬಸವಪ್ಪನವರು, ಹೆಸರಿಸಲಾಗದೆ ಉಳಿದ ಇನ್ನೂ ಹಲವರು! ಈ ನಾಡಿನ ಎಷ್ಟು ಕ್ಷೇತ್ರಗಳು, ಎಷ್ಟು ರಂಗಗಳು ಬಡವಾಗಿವೆ ಈ ಅಲ್ಪಾವಧಿಯಲ್ಲಿ! ಚಕ್ಷುಗೋಚರರಾಗಿ ಅವರಿಂದು ಇಲ್ಲವಾದರೂ ಭಾವಗೋಚರವಾಗಿ ಅವರ ಪುಣ್ಯ ಚೈತನ್ಯಗಳು ಇಲ್ಲಿವೆಯೆಂದು ನಂಬಿ ಆ ಪಾವನ ಚೇತನಗಳಿಗೆ ತಲೆಬಾಗಿಯೇ ಮುಂದೆ ಸಾಗುತ್ತೇನೆ!

ಹಲವು ಸಾಮ್ರಾಜ್ಯಗಳಿಗೆ ತೊಟ್ಟಿಲಾದುದು ಈ ಭಾಗ; ಕರ್ನಾಟಕ ಇತಿಹಾಸದ ಅನೇಕ ಉಜ್ವಲ ಅಧ್ಯಾಯಗಳು ರಚಿತವಾದುದು ಈ ಭಾಗದಲ್ಲಿ; ಕನ್ನಡದ ಕಾವ್ಯಗಂಗೋತ್ರಿ ಇರುವುದು ಈ ಭಾಗದಲ್ಲಿ; ನೃಪತುಂಗ, ಆರನೆಯ ವಿಕ್ರಮಾದಿತ್ಯ, ಪ್ರೌಢದೇವರಾಯ, ಕೃಷ್ಣದೇವರಾಯರಂಥ ಸಾಮ್ರಾಟರು, ಸರ್ವಪ್ರಥಮ ಸಮಗ್ರ ಕ್ರಾಂತಿಯ ಶಿಲ್ಪಿಗಳಾದ ಬಸವಾದಿ ಪ್ರಮಥರು, ಬಡವರ ಗುಡಿಸಲುಗಳವರೆಗೂ ಭಕ್ತಿಗಂಗೆಯನ್ನು ಹರಸಿದ ಹರಿದಾಸರು, ಪೊನ್ನ, ಹರಿಹರ, ರಾಘವಾಂಕ, ಲಕ್ಷ್ಮೀಶರಂಥ ಮಹಾಕವಿಗಳು, ಶ್ರೀವಿಜಯ, ವಿದ್ಯಾರಣ್ಯ, ವ್ಯಾಸರಾಯ, ಜಯತೀರ್ಥರಂಥ ಜ್ಞಾನ ಮೇರುಗಳು, ಸುರಪುರದ ವೆಂಕಟಪ್ಪ

ನಾಯಕ, ಕೊಪ್ಪಳದ ಮುಂಡರಗಿ ಭೀಮರಾಯರಂಥ ಸ್ವಾತಂತ್ರ್ಯ ವೀರರು, ಇಟ್ಟಿಗೆಯ ಮಹಾದೇವ ದೇವಾಲಯದಿಂದ ವೇರೂಳಿನ ಕೈಲಾಸದೇವಾಲಯದವರೆಗೆ ಸೂರೆಯಾಗಿರುವ ಶಿಲ್ಪಕಲಾವೈಭವವನ್ನು ಸೃಜಿಸಿದ ಶಿಲ್ಪಿಗಳು ಈ ಭಾಗವನ್ನು ಕನ್ನಡಿಗರ ಹೆಮ್ಮೆಯ ಹೆಗ್ಗಳಿಕೆಯ ಭಾಗವನ್ನಾಗಿ ಮಾಡಿದ್ದಾರೆ. ಆಧ್ಯಾತ್ಮ ಶ್ರೀಗಂತೂ ಇದು ಆಡುಂಬೊಲ. ನೂರೊಂದು ವಿರತರು,ಪುರಂದರದಾಸ, ಕನಕದಾಸ, ವಿಜಯದಾಸ, ಗೋಪಾಲದಾಸ, ಜಗನ್ನಾಥದಾಸ, ಮನೋಹರ ವಿಠಲ, ವಸುದೇವ ವಿಠಲ, ಪ್ರಾಣೇಶ ವಿಠಲರು, ಕೊಂಡಗುಳಿ ಕೇಶಿರಾಜ, ಶಂಕರ ದಾಸಿಮಯ್ಯ, ಜೇಡರ ದಾಸಿಮಯ್ಯ, ಕೆಂಭಾವಿಯ ಭೋಗಣ್ಣ, ಆದ್ದಕ್ಕಿ ಮಾರಯ್ಯ-ಲಕ್ಷಮ್ಮರು, ಢಕ್ಕೆಯ ಮಾರಯ್ಯ,ಬಿಬ್ಬಿ ಚಾಚರಸ, ಸಗರದ ಬಹ್ಮಯ್ಯ, ಅಳಂದೆಯ ಏಕಾಂತ ರಾಮಯ್ಯ, ಭಾಲ್ಕಿಯ ಕುಂಬಾರ ಗುಂಡಯ್ಯ, ಬಿದರೆಯ ವೀರಸಂಗಯ್ಯ, ಕೋಳೂರಿನ ಕೊಡಗೂಸು,ಅಗ್ಗಣಿಯ ಹೊನ್ನಯ್ಯ,ದಿಗ್ಗಿಯ ಸಂಗಯ್ಯ,ಎಲೇರಿಯ ಏಲೇಶ ಕೇತಯ್ಯ,ನೀಲೂರಿನ ನಿಂಬೆಮ್ಮ, ಹೊನಗುಂಡೆಯ ಉಂಡು ಉಪವಾಸಿ, ಯನಗುಂಟಿಯ ಬಳಸಿ ಬ್ರಹ್ಮಚಾರಿ, ಮರಟದ ಬಂಕಯ್ಯ, ಜೇವರಗಿಯ ಷಣ್ಮುಖ ಶಿವಯೋಗಿ,ಸಂತೆಕೆಲ್ಲೂರಿನ ಘನಮಠದಾರ್ಯರು,ಮೈಲಾರದ ಬಸವಲಿಂಗ ಶರಣರು, ತಿಂಥಣಿಯ ಮೌನೇಶ್ವರ,ಕಡಕೋಳದ ಮಡಿವಾಳಪ್ಪ, ಬಳ್ಳಾರಿಯ ಬಳ್ಳೇಶಮಲ್ಲಯ್ಯ ಮರಿಸ್ವಾಮಿ-ಸಕ್ಕರೆ ಕರಡೆಪ್ಪರು, ಕುರಗೋಡಿನ ಶರಣೆ ನೀಲಮ್ಮ, ಕೂಡಲೂರ ಬಸವಲಿಂಗ ಶರಣರು, ಚೆಳ್ಳಕುರ್ಕಿಯ ಎರ್ರಿತಾತನವರು, ಕೊಟ್ಟೂರ ಬಸವೇಶ್ವರರು ಆಂದೇಲಿಯ ಕರುಣೇಶ್ವರ, ಶಹಾಪುರದ ಚರಬಸವೇಶ್ವರ, ಗಾಣಿಗಾಪುರದ ನರಸಿಂಹ ಸರಸ್ವತಿ, ರಾಮಪುರದ ಬೊಕ್ಕಪ್ಪ,ಹುಮನಾಬಾದಿನ ಮಾಣಿಕ ಪ್ರಭು, ಕೊಡೇಕಲ್ ಬಸವೇಶ, ಗೋಗಿಯ ಹಜರತ್ ಚಂದಾ ಹುಸೇನಿ, ಸಗರದ ಸೂಫಿ ಸರಮಸ್ತ್, ಕೊಪ್ಪಳದ ಗವಿಸಿದ್ಧೇಶ್ವರ ಇತ್ಯಾದಿ ಶರಣರು, ದಾಸರು, ಸಂತರು, ಮಹಾಂತರು ಇದನ್ನು ಪುಣ್ಯಭೂಮಿಯನ್ನಾಗಿಸಿದ್ದಾರೆ. ಇವೆಲ್ಲವನ್ನು ಗಮನಿಸಿಯೇ ಆಚಾರ್ಯಶ್ರೀ ಅವರು "ಈ ನಾಡು ಕನ್ನಡದ ಹೊಳೆಗೆ ತಲೆಮೂಡು; ಕಾಶಿ ಕನ್ನಡಿಗರಿಗೆ !" ಎಂದು ಉದ್ಗರಿಸಿದರು. ಆಚಾರ್ಯ ಎ. ಆರ್. ಕೃಷ್ಣಶಾಸ್ತ್ರಿಗಳವರು, "ಇದು ಕನ್ನಡಿಗರಿಗೆ ಹೆಮ್ಮೆಯ ಪ್ರಾಂತ; ಕನ್ನಡ ಸಾಹಿತ್ಯ ಗಂಗೆಯ ಗಂಗೋತ್ರಿ ; ತಿರುಳ್ಗನ್ನಡದ ಕನ್ನಡಿ ; ಕಲಾರತ್ನಗಳ ಖನಿ : ಭಕ್ತಶಿರೋಮಣಿಗಳ ತವರ್ಮನೆ" ಎಂದು ಕೈವಾರಿಸಿದರು. ಇನ್ನೇನು ಬೇಕು ? ಇದರ ಮಹಾಚೇತನವಿನ್ನು ಮೈಮುರಿದು ಮೇಲೇಳಬೇಕು ! ಆ ಚೇತನಕ್ಕೆ ನಮೋ ! ನಮೋ !

ಇಂಥ ಹಿರಿಮೆ ಗರಿಮೆಗಳ ಈ ಪ್ರದೇಶವು ವಿಪತ್ಪರಂಪರೆಗಳನ್ನೂ, ಪರಾಧೀನತೆಯನ್ನೂ, ಪ್ರೋತ್ಸಾಹರಾಹಿತ್ಯವನ್ನೂ, ಪರಭಾಷೆಗಳ ಆಕ್ರಮಣವನ್ನೂ, ಪ್ರತಿಕೂಲ ಪರಿಸ್ಥಿತಿಯನ್ನೂ ಎದುರಿಸುತ್ತಲೇ ಕನ್ನಡವನ್ನು, ಕನ್ನಡತನವನ್ನು ಉಳಿಸಿಕೊಂಡು ಬಂದಿರುವುದು ಅಭಿನಂದನೀಯವಾದುದು. ಇಲ್ಲಿ ಕನ್ನಡದ ಉಳಿವಿಗಾಗಿ



ಬೆಳವಿಗಾಗಿ ನಡೆದ ಕೆಚ್ಚೆದೆಯ ಹೋರಾಟದ ಕಥೆ ಕನ್ನಡದ ಪುನರುಜ್ಜೀವನದ ಆಂದೋಲನದ ಇತಿಹಾಸದಲ್ಲಿ ಸೇರಬೇಕಾದ ಸುವರ್ಣಾಧ್ಯಾಯ. ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ, ಪೋಲಿಸ್ ಕಾರ್ಯಾಚರಣೆಯ ಪೂರ್ವದಲ್ಲಿ ಈ ಭಾಗದ ಕನ್ನಡಿಗರು ತೋರಿದ ದೇಶಭಕ್ತಿ,ಸ್ವಾತಂತ್ರ್ಯ ಪ್ರೇಮಗಳು, ನೀಡಿದ ತ್ಯಾಗ ಬಲಿದಾನಗಳು ಅವಿಸ್ಮರಣೀಯವಾದುವುಗಳು. ಇವುಗಳ ಬಗ್ಗೆ ಅಧಿಕೃತ ಪ್ರಕಟಣೆಯೊಂದರ ಅಗತ್ಯವಿದೆ.

ನಾನಿಲ್ಲಿ ವಿದ್ಯಾರ್ಥಿಯಾಗಿದ್ದಾಗ ಕೀರ್ತಿಶೇಷ ನಾಟಕರತ್ನ ಗುಬ್ಬಿ ವೀರಣ್ಣನವರಿಂದ ಒಂದು ಧರ್ಮಾರ್ಥ ನಾಟಕ ಪ್ರದರ್ಶನವನ್ನು ಪಡೆದುಕೊಂಡು 'ಶರಣ ಬಸವೇಶ್ವರ ಶಾಲೆ' ಎಂಬ ಕನ್ನಡ ಶಾಲೆಯೊಂದನ್ನು ಸ್ಥಾಪಿಸಬೇಕಾದರೆ ಎಷ್ಟು ಜನರು ಎಷ್ಟು ಕಷ್ಟಪಡಬೇಕಾಯಿತು ! ಈಗ ಇಲ್ಲಿಯೇ ವಿಶ್ವವಿದ್ಯಾಲಯವೊಂದು ತಲೆಯೆತ್ತಿರುವುದೂ, ಶ್ರೀ ಶರಣ ಬಸವೇಶ್ವರ ವಿದ್ಯಾವರ್ಧಕಸಂಘ, ಹೈದರಾಬಾದು ಕರ್ನಾಟಕ ಶಿಕ್ಷಣ ಸಂಸ್ಥೆ, ಖಾಜಾ ಬಂದಾನವಾಜ ಶಿಕ್ಷಣ ಸಂಸ್ಥೆಗಳಂಥ ಬೃಹತ್ ಶಿಕ್ಷಣ ಸಂಸ್ಥೆಗಳು ಈ ವಿಭಾಗದ ನಾಲ್ಕು ಜಿಲ್ಲೆಗಳಲ್ಲಿ ಮೈದಾಳಿರುವುದೂ ಇಲ್ಲಿಯ ಮಣ್ಣಿನಲ್ಲಿಯೇ ಮೂಡಿ ಬೆಳೆದ ನನಗೆ ರೋಮಾಂಚನಕಾರಕ ಬೆಳವಣಿಗೆಯಾಗಿ ತೋರುತ್ತಿದೆ. ಈ ಎಲ್ಲ ಸಂಸ್ಥೆಗಳ ಶಿಕ್ಷಣ ಕೇಂದ್ರಗಳಲ್ಲಿ ಕನ್ನಡವೇ ಬೋಧಭಾಷೆ, ಆಡಳಿತ ಭಾಷೆಯಾಗಿ ಬೇರೆ ಭಾಗಗಳಿಗೆ ಮಾದರಿಯಾಗಲೆಂದು ಹಾರೈಸುತ್ತೇನೆ.

ಹೀಗಾದರೆ ಹಿಂದಿನಂತೆ ಈಗಲೂ ಸಾಹಿತ್ಯ ಸಂಸ್ಕೃತಿಗಳ ಹೊಂಬೆಳೆಯಿಲ್ಲಿ ಬಂದೇ ತೀರುವುದು. ಗಣ್ಯರು ಗಮನಿಸದಿದ್ದರೂ ಇದಾಗಲೇ ಬಂಗಾರದ ಬೆಳೆಯಿಲ್ಲಿ ಬಂದಿದೆ, ಭರದಿಂದ ಬರುತ್ತಿದೆ. ಸಂಗವಿಭು, ಐನಾಪುರ ಕರಿಬಸವ, ದ್ಯಾಂಪುರ ಚೆನ್ನಕವಿ-ಕಲ್ಲಿನಾಥಶಾಸ್ತ್ರಿ ಪುರಾಣಿಕ-ಮಹಾಲಿಂಗಯ್ಯನವರು, ಚೌದಾಪುರಿ ಹಿರೇಮಠದ ಶ್ರೀ ಶಾಂತವೀರಸ್ವಾಮಿಗಳು, . ಮಸ್ಕಿ ಬಸಪ್ಪಶಾಸ್ತ್ರಿಗಳು, ಗುರುಲಿಂಗ ಸಿದ್ಧರು, ರಸ್ತಾಪುರ ಭೀಮಕವಿಗಳು, ಮಾವನೂರ ಚೆನ್ನಬಸವಕವಿಗಳು, ಸರ್ವದರ್ಶನ ತೀರ್ಥ ವೈ. ನಾಗೇಶ ಶಾಸ್ತ್ರಿಗಳು, ವಿದ್ವಾನ್ ಚಂದ್ರಶೇಖರಶಾಸ್ತ್ರಿಗಳು ಇತ್ಯಾದಿ ಷಟ್ಪದೀಕವಿಗಳನ್ನೂ ಸರ್ವಶ್ರೀ ಶರಣಕವಿಗಳು, ಶಾಂತರಸರು, ಚೆನ್ನಣ್ಣ ವಾಲೀಕಾರ, ದೇವೇಂದ್ರಕುಮಾರ ಹಕಾರಿ, ಇಟಗಿ ರಾಘವೇಂದ್ರ, ಪಂಚಾಕ್ಷರಿ ಹಿರೇಮಠ, ಚಂದ್ರಕಾಂತ ಕುಸನೂರು, ವಸಂತ ಕುಷ್ಟಗಿ, ಅಲ್ಲಮಪ್ರಭು ಬೆಟ್ಟದೂರು, ಬಸವರಾಜ ಸಬರದ, ಡಾ|| ಕೆ. ಮುದ್ದಣ್ಣ, ಸಗರ ಕೃಷ್ಣಾಚಾರ್ಯ, ಬಸವಪ್ರಭು ಪಾಟೀಲ, ಹಿ. ಮ. ನಾಗಯ್ಯ, ಶಿವಶರಣ ಜಾವಳಿ, ಗವೀಶ ಹಿರೇಮಠ, ಶೈಲಜಾ ಉಡಚಣ, ವಿಜಯಶ್ರೀ ಸಬರದ, ಎಚ್. ಎಸ್. ಮುಕ್ತಾಯಕ್ಕ, ಅಮರಚಿಂತ ಜಂಬಣ್ಣರಂಥ ಖ್ಯಾತ ಕವಿ ಕವಯಿತ್ರಿಯರನ್ನೂ, ಸರ್ವಶ್ರೀ ರವೀಂದ್ರ ಕರ್ಜಗಿ, ಸರಸ್ವತಿ ಚಿಮ್ಮಲಗಿ, ಸಿರ್ಸೇ ಪ್ರಮೀಳಾ, ಮೋಹನಚಂದ ಕಿರಣಗಿ, ಪ್ರಭುರಾಜ ಅರುಣಕಲ್, ಅಮ್ಮಾಪುರ ಗುರುಬಸವಯ್ಯ, ವೇದವ್ಯಾಸ ಜೋಶಿ, ಕೆರಳ್ಳಿ

ಗುರುನಾಥರೆಡ್ಡಿ,ಕೃಷ್ಣ ಎ.,ಸುರಪುರ, ಕಂಠಿ ಚಿತ್ರಶೇಖರ, ಕುಲಕರ್ಣಿ ಆರ್.ಎಚ್. ನರಸಿಂಹಗುಪ್ತ, ಸಿದ್ಧರಾಮ ಪೋಲೀಸ ಪಾಟೀಲ, ಮಲ್ಲಿಕಾರ್ಜುನ ಬಿ. ಪಿ., ರಾಜ ಕೆ.ಎಸ್., ವಿರೂಪಾಕ್ಷಗೌಡ ಕೆ., ಎ. ಬಿ. ಮುತ್ತಾಳ, ಧನಶ್ರೀ ಮಾಣಿಕರಾವ್, ತಾಳೀಕೋಟೆ ನಾರಾಯಣರಾವ್, ಶರಭೇಂದ್ರ ತುರಕಾಣಿ, ಅಂಬಲಗಿ ಕಾಶೀನಾಥ, ಲಕ್ಷ್ಮಣಗಂಟಿ, ಶ್ರೀರಾಮ ಇಟ್ಟಣ್ಣನವರ, ಬಿ. ಬಿ. ಪೂಜಾರಿ, ರಂಗನಾಥ ನಿಡಗುಂದಿ, ಸಂಗಣ್ಣ ಹೋತಪೇಟೆ, ಬಸವರಾಜ ಸಾವಿಯ್ಮೀರ್, ವೀರೇಶ ಹಿರೇಮಠ, ಇತ್ಯಾದಿ ಉದಿಕೋದಿತ ಕವಿಗಳನ್ನೂ, ಜಯತೀರ್ಥರಾಜ ಪುರೋಹಿತರು, ಗೀತಾ ನಾಗಭೂಷಣ, ಸರಿತಾ ಕುಸುಮಾಕರ ದೇಸಾಯಿ, ಕುಂ. ವೀರಭದ್ರಪ್ಪ, ಬಿ. ಟಿ. ಲಲಿತಾನಾಯಕ್, ನೀರಮಾನ್ವಿ ರಾಜಶೇಖರ, ವಾಗ್ದೇವಿ ಪಾಟೀಲ ಮುಂತಾದ ಕಥೆ ಕಾದಂಬರಿಗಳ ಸೃಸ್ಟಾರರನ್ನೂ, ಮನಸಬದಾರ, ಎಂ. ಪಿ. ಪ್ರಕಾಶ್, ತೆಲಗಿ ಬಸವರಾಜ, ಎಸ್. ವ್ಹಿ. ಪಾಟೀಲ, ಬೆಳ್ದಾಲ ಶರಣರು, ಜಂಗಮಶ್ರೀ ಮೊದಲಾದ ನಾಟಕಕಾರರನ್ನೂ, ವಿಸಾಜಿ, ಎ. ಕೆ. ರಾಮೇಶ್ವರ, ಬಿ. ಶೇಖರಪ್ಪ ಮೊದಲಾದ ಮಕ್ಕಳ ಸಾಹಿತಿಗಳನ್ನೂ, ಪದ್ಮನಾಭ, ಪುರಾಣಿಕರಂಥ ವಿಜ್ಞಾನಿಗಳನ್ನೂ. ಡಾ|| ಪಾ. ಭೀ. ದೇಸಾಯಿ, ಕಪಟರಾಳ ಕೃಷ್ಣರಾಯರಂಥ ಇತಿಹಾಸಕಾರರನ್ನೂ, ಕುರುಡಿ ಹನುಮಂತಾಚಾರ್ಯ, ಸೀತಾರಾಮ ಜಾಗೀರದಾರರಂಥ ಸಂಶೋಧಕರನ್ನೂ, ಪ್ರೊ|| ಡಿ. ಕೆ. ಭೀಮಸೇನರಾಯರು, ವಿದ್ವಾನ್ ಮಾನ್ವಿ ನರಸಿಂಗರಾಯರು, ಟಿ. ಎಚ್. ಎಂ. ಸದಾಶಿವಯ್ಯನವರು, ತವಗ ಭೀಮಸೇನರಾಯರು, ಡಾ|| ಎಸ್. ಎಂ. ವೃಷಭೇಂದ್ರಸ್ವಾಮಿಗಳು, ಜಿ. ಎಂ. ಗುರುಸಿದ್ಧಶಾಸ್ತ್ರಿಗಳು, ವ್ಯಾಕರಣತೀರ್ಥ ಚಂದ್ರಶೇಖರಶಾಸ್ತ್ರಿಗಳು ಹೊಳಲು, ನಾಗಭೂಷಣ ಶಾಸ್ತ್ರಿಗಳು ಸಂಗನಾಳ ಇತ್ಯಾದಿ ಪಂಡಿತ ಪ್ರವರರನ್ನೂ, ಡಾ|| ಜೋಳದರಾಶಿ ದೊಡ್ಡನಗೌಡರು, ಬೀಚಿ, ಕೋ. ಚನ್ನಬಸಪ್ಪನವರು, ಮುದೇನೂರ ಸಂಗಣ್ಣನವರು ಮೊದಲಾದ ಸಿದ್ಧ ಸಾಹಿತಿಗಳನ್ನೂ, ವೀರಣ್ಣ ರಾಜೂರ, ವ್ಹಿ. ಶಿವಾನಂದ, ಎಂ. ಎಸ್. ಮಹಾಂತಯ್ಯ, ಶಶಿಕಲಾ ಮೊಳದಿ, ತವಗ ಮಂದಾಕಿನಿ, ಶಕುಂತಲಾ ದುರಗಿ, ಹನುಮಾಕ್ಷಿ ಗೋಗಿ, ನೀಲಮ್ಮ ಕತ್ನಳ್ಳಿ, ಸರ್ವಮಂಗಳಾ ಕಟ್ಟಿ, ಆರ್. ಎಲ್. ಬಡಿಗೇರ, ಬಸವರಾಜ ಶಿರೂರ, ಮೊದಲಾದ ಪ್ರಾಧ್ಯಾಪಕರನ್ನೂ, ನಾಯಕ ವೆಂಕಟರಾಯರು, ಕೆ. ಶಾಂತಯ್ಯನವರು, ಪಿ. ಎಂ. ಗಲಗಲಿ, ಶ್ರೀಪತಿರಾವ್ ಸರ್ನಾಡ ಮೊದಲಾದ ಶಿಕ್ಷಣ ತಜ್ಞರನ್ನೂ, ಬಿ. ಮಹದೇವಪ್ಪ, ಬುದ್ಧಿವಂತಶೆಟ್ಟಿ, ಲಿಂಗಣ್ಣ ಸತ್ಯಂಪೇಟೆ, ಷಡಕ್ಷರಯ್ಯ ಪಲ್ಲಾಪುರಮಠ, ಎಂ. ದಸ್ತಗೀರ, ಎಂ. ಜೀವನ, ಅನ್ನದಾನಯ್ಯ ಮತ್ತು ಬಸವರಾಜ ಪುರಾಣಿಕ, ಚೆನ್ನಬಸಪ್ಪ ಬೆಟ್ಟದೂರು, ಬಿ. ಎಂ. ಸಿದ್ಧವೀರಯ್ಯ, ಲೋಖಂಡೆ ಶ್ರೀನಿವಾಸರಾವ್, ಎಂ. ಧ್ರುವನಾರಾಯಣ, ಸೀಮಾಮಾ, ಪುಣ್ಯಶೆಟ್ಟಿ ಪಂಚಾಕ್ಷರಿ, ವಿ. ಸಿದ್ಧರಾಮಣ್ಣ ಇತ್ಯಾದಿ ಸಾಹಿತ್ಯೋಪಾಸಕರನ್ನೂ ನೀಡಿರುವ ಈ ಭಾಗ ಇನ್ನೂ ಮಹೋನ್ನತ ಕವಿ-



ಸಾಹಿತಿಗಳನ್ನು ನೀಡಲೇಬೇಕು. ನೀಡಿಯೇ ನೀಡುವುದು. ಆ ದಿನ ಬೇಗ ಬರಲಿ; ನಾನಿಲ್ಲಿ ಯಾರನ್ನಾದರೂ ಮರೆತಿದ್ದರೆ ಅವರ ಕ್ಷಮೆ ನನಗಿರಲಿ.

ಏಕೀಕರಣದಿಂದ ಕನ್ನಡೀಕರಣದತ್ತ

ಮನುಷ್ಯನಿಂದ ಹುಟ್ಟಿದುದು ಮಾತು; ಆದರೆ ನರನನ್ನು ಮಾನವನನ್ನಾಗಿ ಮಾಡಿದುದು ಮಾತು. ಯಾಕೆಂದರೆ ಮಾನವ ಸಂಸ್ಕೃತಿಯನ್ನು ರೂಪಿಸುವ ಜ್ಞಾನ-ವಿಜ್ಞಾನ ಕಲೆಗಳೆಲ್ಲ ಮಾತಿನಲ್ಲಿಯೇ ಮೈದಾಳಬೇಕು. ಮಾತುಗಳಲ್ಲೆಲ್ಲ ಮಾತೆ ಕಲಿಸಿದ ಮಾತೇ ಅವರವರಿಗೆ ಜೀವಾತು. ಅಂತೆಯೇ ಮಾತೃಭಾಷೆ ಅವರವರ ಶಕ್ತಿ ವಿಕಾಸಕ್ಕೆ, ಅಂತರಂಗ ಪ್ರಕಾಶಕ್ಕೆ ಮಾತೃಕೆ. ಆದುದರಿಂದ ನಮ್ಮ ಮಾತೃಭಾಷೆಯಾದ ಕನ್ನಡ ನಮ್ಮೆಲ್ಲರ ಪೂರ್ಣಾಭ್ಯುದಯಕ್ಕೆ, ಸರ್ವಾಂಗೀಣ ಪ್ರಗತಿಗೆ ಮೂಲಾಧಾರ. ಪ್ರಯತ್ನ ಬಲದಿಂದ ಮಾನವನ ಬುದ್ಧಿಯ ಭಾಷೆ ಯಾವುದಾದರೂ ಆಗಬಹುದು, ಅದೂ ಅಪೂರ್ಣವಾಗಿ! ಆದರೆ ಅವನ ಹೃದಯದ ಭಾಷೆಯಾಗಲ್ಲದು ಒಂದೇ ಒಂದು: ಅದೇ ಅವನ ಮಾತೃಭಾಷೆ. ಇಷ್ಟೇ ಅಲ್ಲ, ಬೇರೆ ಭಾಷೆಯನ್ನು ಕಲಿಯಲು ಪಡಬೇಕಾದ ಕಷ್ಟದ ನೂರರಲ್ಲೊಂದು ಪಾಲು ಕಷ್ಟಪಟ್ಟರೂ ಅದು ಹೃದಯದ ಭಾಷೆಯ ಜೊತೆಗೆ ಬುದ್ಧಿಯ ಭಾಷೆಯೂ ಆಗುವುದು.

ಆದುದರಿಂದಲೇ ಕನ್ನಡೀಕರಣವೇ ಕನ್ನಡಿಗರ ಸಮುದ್ಧರಣಕ್ಕೆ ಸಂಜೀವಿನೀ ಶಕ್ತಿ. ಕನ್ನಡೀಕರಣಕ್ಕಾಗಿಯಲ್ಲವೆ ಕರ್ನಾಟಕದ ಏಕೀಕರಣವಾದುದು? ವರ್ಷಕ್ಕೊಮ್ಮೆ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿ, ತನುಕನ್ನಡ, ಮನಕನ್ನಡ, ಪ್ರಾಣ ಕನ್ನಡವೆಂದು ಘೋಷಿಸಿ, ಭುವನೇಶ್ವರಿಯ ಪ್ರಸಾದ ಪಡೆದುಕೊಂಡು ಹೋಗಲಿಕ್ಕಾಗಿ ಆಗಲಿಲ್ಲ ಕರ್ನಾಟಕದ ಏಕೀಕರಣ. ಈ ನಾಡಿನ ರೈತರ, ಕಾರ್ಮಿಕರ, ದಲಿತರ, ದುರ್ಬಲರ ಏಳಿಗೆ ಕನ್ನಡ ಮಾಧ್ಯಮದಲ್ಲಿ ಎಲ್ಲ ಶಿಕ್ಷಣ, ಕನ್ನಡದಲ್ಲಿ ಎಲ್ಲ ಹಂತಗಳ ಆಡಳಿತ, ಕನ್ನಡದಲ್ಲಿ ಎಲ್ಲ ಸ್ತರಗಳಲ್ಲಿ ನ್ಯಾಯ ನಿರ್ಣಯ ನಡೆದಾಗ ಮಾತ್ರ ಸಾಧ್ಯವೆಂಬ ಸತ್ಯಸ್ಯಸತ್ಯ ಏಕೀಕರಣ ಚಳುವಳಿಯ ಚಾಲಕ ಶಕ್ತಿಯಾಗಿದ್ದಿತು. ಈ ನೆಲದ ಉಪ್ಪಾದ ಇವರು ಇನ್ನು ಮುಂದೆಯೂ ಇಂಗ್ಲಿಷ್ ಬಲ್ಲವರನ್ನು ಅವಲಂಬಿಸಿ ಪರಾವಲಂಬನದ ನರಕದಲ್ಲಿರಬೇಕೆಂದು ವಾದಿಸುವವರಿದ್ದರೆ ಅವರು ಶ್ರೀಸಾಮಾನ್ಯರ ಹಗೆಗಳೆಂದೇ ಹೇಳಬೇಕಾಗುತ್ತದೆ. ಅವರ ನಿರಕ್ಷರತೆಯ ನಿರ್ಮೂಲನವಾದರೆ ತಮಗೆ ಹೋಳಿಗೆ ತುಪ್ಪ ತಪ್ಪುವುದೆಂದು ಅವರನ್ನಿನ್ನೂ ನಿರಕ್ಷರಿಗಳನ್ನಾಗಿ ಉಳಿಸಿದ ಶೋಷಕ ಶಕ್ತಿಗಳು ಅವರನ್ನು ಇನ್ನು ಮೇಲೂ ಇಂಗ್ಲಿಷ್ ಬಲ್ಲವರ ಕಪಿಮುಷ್ಠಿಯಲ್ಲಿ, ಒಂಟಿ ಹಿಡಿತದಲ್ಲಿ ಉಳಿಸಲು ಕೊನೆಯ ಪ್ರಯತ್ನ ಮಾಡುತ್ತಿದ್ದರೆ ಆಶ್ಚರ್ಯವೇನು?

ಈ ಹಿನ್ನೆಲೆಯಲ್ಲಿ ಕರ್ನಾಟಕದ ಸರ್ವ ಮಾನವ ವ್ಯವಹಾರಗಳ ಕನ್ನಡೀಕರಣವು ಈ ನಾಡಿನ ತುಳಿತಕ್ಕೆ ಒಳಗಾದ ಎಲ್ಲ ದಲಿತ ದುರ್ಬಲರ ಹೊಸ ಹುಟ್ಟಿನ ಹೋರಾ

ಟದ ಅವಿಭಾಜ್ಯ ಅಂಗವಾಗುತ್ತದೆ. ಇದನ್ನು ಮನಗಂಡು ಈ ನಾಡಿನ ರೈತರು, ದುಡಿಮೆಗಾರರು, ದಲಿತರು, ಕಸಬುದಾರರು, ಗ್ರಾಮ ಸಭೆಯಿಂದ ಶಾಸನ ಸಭೆಯವರೆಗೆ, ನ್ಯಾಯ ಪಂಚಾಯತಿಯಿಂದ ಉಚ್ಚ ನ್ಯಾಯಾಲಯದವರೆಗೆ, ಕುಟೀರ ಕೈಗಾರಿಕೆಯಿಂದ ಬೃಹತ್ ಕಾರ್ಯಾಗಾರಗಳವರೆಗೆ, ಮಾರುಕಟ್ಟೆಯಿಂದ ಅಂಚೆ-ತಂತಿ, ಬ್ಯಾಂಕು, ರೈಲು, ಅಂಗಡಿ, ಉಗ್ರಾಣಗಳವರೆಗೆ ಎಲ್ಲೆಲ್ಲಿಯೂ ಕನ್ನಡೀಕರಣವಾಗುವುದು ತಮ್ಮ ಅಭ್ಯುದಯದ ಮೊದಲ ಮೆಟ್ಟಿಲೆಂದು ತಿಳಿದು ಅದನ್ನು ತಂತಮ್ಮ ಹೋರಾಟದ ಮಹತ್ವದ ಅಂಗವನ್ನಾಗಿ ಮಾಡಿಕೊಳ್ಳಲಿ. ಇದುವರೆಗೆ ಅವರನ್ನು ಶೋಷಿಸಿದ ಭಾಷೆಗಳೀಗ ಪೋಷಕ ವೇಷ ಧರಿಸಿ ಅವರ ದಾಸ್ಯವಿಮೋಚನೆಯ ಹೋರಾಟದ ದಿಕ್ಕು ತಪ್ಪಿಸಲು ಹೆಣಗುತ್ತಿವೆ. ಇವುಗಳಿಗವರು ಮೋಸ ಹೋಗದಿರಲಿ. ಈ ಉತ್ಪೀಡಿತರೂ ಈಗ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಬೇಡುವಷ್ಟು ಇಂಗ್ಲಿಷ್ ಮೋಹವನ್ನು ಹರಡಿಸಿದವರಾರು, ಯಾವ ಉದ್ದೇಶಕ್ಕಾಗಿ ಎಂಬುದನ್ನು ಅವರು ಅರಿಯಲು ಪ್ರಯತ್ನಿಸಲಿ! ಹರ್ಡೇಕರ್ ಮಂಜಪ್ಪನಂಥವರು, ಕುವೆಂಪು ಅವರಂಥವರು ಸಂಸ್ಕೃತ ಕಲಿಯಲು ಹಂಬಲಿಸಿದಾಗ ಕಲಿಸಲು ನಿರಾಕರಿಸಿದವರೇ ಇಂದು ಹಳ್ಳಿಯಿಂದ ಡಿಳ್ಳಿಯವರೆಗೆ, ಧರ್ಮದ ಹೆಸರು ಬಳಸಿಕೊಳ್ಳುವುದರಿಂದ ಆಕಾಶವಾಣಿಯ ದುರುಪಯೋಗದವರೆಗೆ ಸಂಸ್ಕೃತದ ಪ್ರಸಾರಕ್ಕಾಗಿ ಶಕ್ತಿಮೀರಿ ಹೋರಾಡುತ್ತಿರಲು ಕಾರಣವೇನಿರಬಹುದೆಂಬುದನ್ನು ತಿಳಿದುಕೊಳ್ಳಲಿ! ಯಾರು ಎಷ್ಟು ಬೊಬ್ಬೆ ಹೊಡೆದರೂ ಬೇಕಾದವರಿಗಷ್ಟೇ ಅಲ್ಲ, ಬೇಡವಾದವರಿಗೂ ಹಿಂದೀ ಕಲಿಸಿಯೇ ತೀರುವೆವೆಂದು ಹಟದಿಂದ ಹೊರಟವರ ಇಂಗಿತವೇನಿರಬಹುದೆಂಬುದನ್ನು ನಮ್ಮ ರೈತ ಬಾಂಧವರು, ಕಾರ್ಮಿಕ ಬಾಂಧವರು, ದಲಿತ ಬಾಂಧವರು ವಿಚಾರಿಸಿ ನೋಡಲಿ; ಕನ್ನಡೀಕರಣಕ್ಕಾಗಿ ಕಂಕಣ ಕಟ್ಟಲಿ; ನಾನಿದನ್ನು ಇಷ್ಟೊಂದು ನಿಷ್ಠುರವಾಗಿ, ನಿರ್ದಾಕ್ಷಿಣ್ಯವಾಗಿ ಒತ್ತಿಹೇಳಲು ಕಾರಣವಿಲ್ಲದಿಲ್ಲ. ಮೊದಲನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದ ಆರಂಭದಲ್ಲಿಯೇ-೧೯೧೫ರಷ್ಟು ಹಿಂದೆಯೇ—ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರಲ್ಲಿ ಒಬ್ಬರೂ, ಆ ಕಾಲಕ್ಕೇ ಅರ್ಥಶಾಸ್ತ್ರ, ಲೇಖ್ಯಬೋಧಿನಿ, ವ್ಯವಹಾರ ದೀಪಿಕೆಯಂಥ ಉಪಯುಕ್ತ ಗ್ರಂಥಗಳನ್ನು ಕನ್ನಡಿಗರಿಗೆ ಕೊಟ್ಟವರೂ ಆದ ರಾಜಮಂತ್ರ ಪ್ರವೀಣ ಎಚ್. ವಿ. ನಂಜುಂಡಯ್ಯನವರು ಹೇಳಿದುದು ಹೀಗಿದೆ:

"ಈ ಸಂಸ್ಥಾನದಲ್ಲಿ ಕನ್ನಡವೇ ಪ್ರಮುಖವಾದ ಭಾಷೆಯಾಗಿದೆ. ಇದೇ ರಾಜರೂ ಪ್ರಜೆಗಳೂ ಮನೆಯಲ್ಲಿ ಆಡುವ ಮಾತಾಗಿರುವುದಲ್ಲದೆ, ಸರಕಾರಿ ಕಾಗದ ಪತ್ರಗಳಲ್ಲಿಯೂ, ವಾಣಿಜ್ಯದಲ್ಲಿಯೂ ಬಳಕೆಯಲ್ಲಿರತಕ್ಕ ಭಾಷೆಯಾಗಿದೆ. ಈ ದೇಶದಲ್ಲಿ ಕನ್ನಡವನ್ನು ಮಾತೃಭಾಷೆಯಾಗಿ ಮನೆಯಲ್ಲಿ ಮಾತನಾಡದಿರುವ ಅನೇಕ ಜನಗಳು ಇರುವುದೂ ನಿಶ್ಚಯವೇ; ಆದರೆ ಅವರೆಲ್ಲರೂ ಚಿಕ್ಕಂದಿನಿಂದಲೂ ದೇಶಭಾಷೆಯಾದ ಕನ್ನಡವನ್ನು ಕಲಿಯುವರು. ಪ್ರಾಯಶಃ ಮುಸಲ್ಮಾನರನ್ನು



ಬಿಟ್ಟರೆ ಮಿಕ್ಕ ಜನರೆಲ್ಲರೂ ಕನ್ನಡವನ್ನೇ ಮೊದಲು ಕಲಿತು, ತಮ್ಮ ಬಂಧುಗಳಿಗೆ ಕ್ಷೇಮ ಸಮಾಚಾರದ ಕಾಗದಗಳನ್ನು ಬರೆಯುವಾಗಲೂ ತೆಲುಗು ತಮಿಳುಗಳಿಗೆ ಬದಲಾಗಿ ಕನ್ನಡವನ್ನೇ ಬಳಸುವರು."

೧೯೧೫ರಲ್ಲಿ ಇದ್ದ ಈ ಸುಸ್ಥಿತಿ ಕನ್ನಡಕ್ಕೆ ಈಗ ಇದೆಯೆಂದು-ಸಾಹಿತ್ಯ ಸೃಷ್ಟಿಯ ದೃಷ್ಟಿಯಿಂದಲ್ಲ, ಜನಬಳಕೆಯ ದೃಷ್ಟಿಯಿಂದ ಇದೆಯೆಂದು—ನಮ್ಮ ಸರಕಾರದ ಸೂತ್ರಧಾರಿಗಳು ಎದೆ ತಟ್ಟಿ ಹೇಳಬಲ್ಲರೆ? ಹೊಸಗನ್ನಡ ಸಾಹಿತ್ಯ ಸೃಷ್ಟಿ ಅದ್ಭುತವಾಗಿ ಆಗಿದೆ. ನಿಜ. ಅದರ ಬಗ್ಗೆ ಮುಂದೆ ಪ್ರಸ್ತಾಪಿಸುವೆನು. ಆದರೆ ಜನಬಳಕೆಯ ದೃಷ್ಟಿಯಿಂದ, ಕನ್ನಡ ರಾಜ್ಯೋದಯವಾಗಿ ಮೂರು ದಶಕಗಳು ಕಳೆದ ಮೇಲೂ, ಕನ್ನಡದ ತೇರು ೧೯೧೫ಕ್ಕೂ ಹಿಂದೇ ಹೋಗಿದೆಯೆಂಬುದು ಎಂಥ ಲಜ್ಜಾಸ್ಪದವಾದ ವಿಷಯ! ಸರಕಾರದ ಕಾಗದ ಪತ್ರಗಳಲ್ಲಿ, ವಾಣಿಜ್ಯದಲ್ಲಿ ಬಳಕೆಯಲ್ಲಿರತಕ್ಕ ಭಾಷೆಯಾಗಿ ಉಳಿದಿದೆಯೆ ಕನ್ನಡವಿಂದು? ಇಲ್ಲಿಯ ತೆಲುಗರೂ, ತಮಿಳರೂ ತಮ್ಮ ಬಂಧುಗಳಿಗೆ ಕ್ಷೇಮ ಸಮಾಚಾರದ ಕಾಗದಗಳನ್ನು ಬರೆಯುವಾಗ ತೆಲುಗು ತಮಿಳುಗಳಿಗೆ ಬದಲಾಗಿ ಕನ್ನಡವನ್ನೇ ಬಳಸುತ್ತಿದ್ದಾರೆಯೆ? ಆಗ ಹೊರತಾಗಿದ್ದ ಮುಸಲ್ಮಾನ ಬಾಂಧವರು ಉರ್ದು ಶಾಲೆಗಳಲ್ಲಿಯೂ ಕನ್ನಡದ ಕಲಿಕೆ ಮೊದಲನೆಯ ತರಗತಿಯಿಂದಲೇ ಪ್ರಾರಂಭವಾಗಲೆಂದು ಕೋರಿ ಕನ್ನಡಕ್ಕೆ ಹತ್ತಿರವಾಗುತ್ತಲಿದ್ದಾರೆ: ಹತ್ತಿರವಿದ್ದ ಉಳಿದವರು 'ದೂರ, ದೂರ, ಬಹುದೂರ' ಹೋಗುತ್ತಲಿದ್ದಾರೆ; ಕನ್ನಡಿಗರಲ್ಲಿಯೇ ಕೆಲವರು ಕನ್ನಡಕ್ಕೆ ಎರವಾಗುತ್ತಿದ್ದಾರೆ! ವಾಣಿಜ್ಯ ಉದ್ಯಮಗಳು ಕನ್ನಡಿಗರ ಕೈಗಳಲ್ಲಿ ಉಳಿದಿದ್ದರೆ ತಾನೆ ಅಲ್ಲಿ ಕನ್ನಡ ಉಳಿಯುವುದು? ಕನ್ನಡದ ಬಗ್ಗೆ ನಮ್ಮ ಶಾಸನಕಾರರಿಗೆ ತುಸು ಬಿಸಿಯಾಗಿ ಬರೆದರೆ ಅದು ಹಕ್ಕುಚ್ಯುತಿಯೆನ್ನುವ ಪರಿಸ್ಥಿತಿಯಲ್ಲಿಂದು ನಾವಿದ್ದೇವೆ.

ಕನ್ನಡ ನಾಡಿನ ಗಡಿಗಳು ಅಸ್ಥಿರತೆಯಿಂದ ನಡುಗುತ್ತಿವೆ; ಕನ್ನಡಿಗರ ರಾಜಧಾನಿಯಲ್ಲಿ ಕನ್ನಡೇತರರ ಮೇಜವಾನಿ ನಡೆದಿದೆ; ಕನ್ನಡ ನಾಡಿನ ಕಾರಖಾನೆಗಳಲ್ಲಿ, ಅಚ್ಚುಕಟ್ಟು ಪ್ರದೇಶಗಳಲ್ಲಿ, ಕೇಂದ್ರ ಸರಕಾರದ ಕಾರ್ಯಾಲಯಗಳಲ್ಲಿ ಕನ್ನಡೇತರರ ಕೈ ಮೇಲಾಗಿದೆ; ಕನ್ನಡ ನಾಡಿಗೆ ಬರಬೇಕಾಗಿದ್ದು ಹೊರಗೆ ಉಳಿದಿರುವ ಕನ್ನಡ ಭಾಗಗಳ ಕನ್ನಡಿಗರು ತ್ರಿಶಂಕು ಸ್ವರ್ಗದಲ್ಲಿದ್ದಾರೆ. ಮೂವತ್ತು ವರ್ಷಗಳವರೆಗೆ ಇವೆಲ್ಲವನ್ನೂ ಕಣ್ಣೆತ್ತಿ ನೋಡದೆ, ತಡೆಯಲು ಯತ್ನಿಸದೆ ಕಣ್ಮುಚ್ಚಿ ಕೈಕಟ್ಟಿಕೊಂಡು ಕುಳಿತ ಕರ್ನಾಟಕದ ಸರಕಾರ ಇನ್ನಾದರೂ ಗಟ್ಟಿ ಮನಸ್ಸು ಮಾಡಿ, ಕೆಳಗಣ ವಿಷಯಗಳ ಬಗ್ಗೆ ದಿಟ್ಟನಿರ್ಣಯಗಳನ್ನು ಕೈಗೊಂಡು, ಪಟ್ಟು ಹಿಡಿದು ಅವುಗಳನ್ನು ಕಾರ್ಯರೂಪಕ್ಕೆ ತರುವುದೆಂದು ಆಶಿಸುತ್ತೇನೆ.

೧. ಮಹಾಜನ ಆಯೋಗದ ನಿರ್ಣಾಯಕ ವರದಿಯನ್ನು ಇದುವರೆಗೂ ಅನುಷ್ಠಾನಕ್ಕೆ ತರದಿದ್ದುದು ಕೇಂದ್ರದ ಡೋಲಾಯಮಾನ ಧೋರಣೆಯ ದ್ಯೋತಕ. ಆ ವರದಿ ಅಂತಿಮವಾದುದೆಂದು ನ್ಯಾಯವಾಗಿಯೇ ಸಾರಿದ ನಮ್ಮ

ನೆಚ್ಚಿನ ಪ್ರಧಾನಿ ರಾಜೀವ ಗಾಂಧಿಯವರು ತಮ್ಮ ಮಾತಿಗೆ ತಾವೇ ತಿರುಗಿ ಬೀಳದಿರಲಿ : ಗಾಯ ಹಳೆಯದಾದಷ್ಟೂ ಮಾಯುವ ಸಾಧ್ಯತೆ ಕಡಮೆಯಾಗಿ ನಂಜೇರುವ ಸಾಧ್ಯತೆ ಹೆಚ್ಚುತ್ತದೆ. ಎಲ್ಲ ಗಡಿವಾದಗಳ ಗಾಯಗಳನ್ನೂ ಮುತ್ಸದ್ದಿತನದ ಮುಲಾಮು ಹಚ್ಚಿ ಮಾಯಿಸಿ ಬಿಡಲಿ ಅವರು. ಆ ಪಕ್ಷ ಈ ಪಕ್ಷವೆನ್ನದೆ, ನಮ್ಮ ಎಲ್ಲ ರಾಜಕೀಯ ಧುರೀಣರೂ ಇದಕ್ಕಾಗಿ ಒಮ್ಮತದಿಂದ ಹೋರಾಡಲಿ ; ಕರ್ನಾಟಕದ ಸರಕಾರ ಈ ಬಗ್ಗೆ ತನ್ನ ಅಚಲ ನಿಲುವನ್ನು ಯಾವ ಕಾರಣಕ್ಕೂ ಕೈಬಿಡದಿರಲಿ.

೨. ಕನ್ನಡಿಗರು ವಾಣಿಜ್ಯೋದ್ಯಮಗಳಲ್ಲಿ ಮತ್ತೆ ಮುಂದಾಗುವಂತೆ ಕರ್ನಾಟಕ ಸರಕಾರ ಅವರಿಗೆ ವಿಶೇಷ ಪ್ರೋತ್ಸಾಹ ಹಾಗೂ ವಿಪುಲ ಸೌಕರ್ಯಗಳನ್ನು ನೀಡಲಿ. ಸಾವಿರಾರು ಸಂಖ್ಯೆಯಲ್ಲಿ ಅಲ್ಲ, ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಹೊಸ ಉದ್ಯೋಗಾವಕಾಶಗಳನ್ನು ಹುಟ್ಟಿಸಿ, ಕನ್ನಡಿಗರಿಗೇ ಅವುಗಳು ದೊರೆಯುವಂತೆ ಮಾಡಿ, ಕನ್ನಡಿಗರ ನಿರುದ್ಯೋಗ ನಿವಾರಿಸಲಿ.

೩. ನಮ್ಮ ಅಚ್ಚುಕಟ್ಟು ಪ್ರದೇಶಗಳಲ್ಲಿ ಕನ್ನಡ ಬೇಸಾಯಗಾರರ ಕೈಯಲ್ಲಿ ಈಗುಳಿದಿರುವಷ್ಟು ಭೂಮಿಯೂ ಅವರ ಕೈಬಿಟ್ಟು ಹೋಗದಂತೆ ಕ್ರಮ ಕೈಗೊಳ್ಳಲಿ; ಅವರಿಗೆ ನೀರಾವರಿ ವ್ಯವಸಾಯದಲ್ಲಿ ರುಚಿ ಹುಟ್ಟಿಸಲಿ ; ಹಾಗೂ ನೀರಾವರಿ ವ್ಯವಸಾಯಕ್ಕಾಗಿ ಅವರಿಗೆ ಸರ್ವಸೌಲಭ್ಯಗಳನ್ನು, ಸರ್ವಸಹಾಯವನ್ನು ನೀಡಲಿ.

೪. ಇದಾಗಲೇ ಸರಕಾರದ ಕೈಸೇರಿರುವ ಡಾ|| ಸರೋಜಿನಿ ಮಹಿಷಿ ಸಮಿತಿಯ ವರದಿಯನ್ನು ವಿಲಂಬವಿಲ್ಲದೆ ಸ್ವೀಕರಿಸಿ ಸದ್ದುಗದ್ದಲವಿಲ್ಲದೆ ಕಾರ್ಯಗತಗೊಳಿಸಬೇಕು ! ನೆರೆಹೊರೆಯ ರಾಜ್ಯಗಳು ಮಾಡಿದಂತೆ ಮಾತಿಲ್ಲದೆ ಕೃತಿ ಮಾಡಿ ತೋರಿಸಬೇಕು. ಆಡಳಿತದ ಯಂತ್ರವನ್ನು ಆಮೂಲಾಗ್ರವಾಗಿ ಉಪಯೋಗಿಸಿಕೊಂಡು ಈ ಮಹತ್ವದ ವರದಿಯನ್ನು ಮೌನವಾಗಿ ಅನುಷ್ಠಾನಕ್ಕೆ ತರಬೇಕು. ಇದಕ್ಕೊಂದು ಕಾವಲು ಸಮಿತಿಯನ್ನು ರಚಿಸಿ ಕೈತೊಳೆದುಕೊಂಡುಬಿಡದೆ ಮಾತಿಗಿಂತ ಕೃತಿಗಳು ಹೆಚ್ಚು ವಾಗ್ವಿಭವಶಾಲಿಗಳೆಂದು ನಂಬಿ ಕೃತಿವೀರರಾಗಲಿ ! ಈ ವರದಿಗೆ ಕನ್ನಡಿಗರ ಸಾರ್ವತ್ರಿಕ ಸ್ವಾಗತ ದೊರಕಿದೆ. ಕೆಲವು ಅಪಶಕುನದ ಹಕ್ಕಿಗಳು ಒಡಕು ಸ್ವರ ಎತ್ತಿವೆ. ಸರಕಾರವು ಅವುಗಳಿಗೆ ಕಿವಿಗೊಡದಿರಲಿ.

೫. ಈ ರಾಜ್ಯದಲ್ಲಿ ಇದುವರೆಗೆ ನಿರಕ್ಷರರಾಗಿ ಉಳಿದಿರುವರೆಲ್ಲರಿಗೂ ಮುಂಬರುವ ಜನಗಣತಿಯೊಳಗಾಗಿ ಕನ್ನಡ ಅಕ್ಷರ ಕಲಿಸಿ ಅವರು ಕನ್ನಡ ಕುಲದೊಳಗೇ ಉಳಿಯುವಂತೆ ಮಾಡಬೇಕು. ಅಕ್ಷರಕ್ರಾಂತಿಯೇ ಅ–ಕ್ಷರ ಕ್ರಾಂತಿಗೆ ಆಧಾರ, ಉಳಿದೆಲ್ಲ ಕ್ರಾಂತಿಗಳಿಗೆ ಪ್ರೇರಕ ಶಕ್ತಿ. ಈ ಕ್ರಾಂತಿಯನ್ನು ಕನ್ನಡ ಸಂಘ ಸಂಸ್ಥೆಗಳ ಸಹಕಾರ ಪಡೆದು, ಗ್ರಾಮಸಭೆ, ಮಂಡಲ ಪಂಚಾಯತಿಗಳನ್ನೂ ತೊಡಗಿಸಿಕೊಂಡು ಆದಷ್ಟು ಬೇಗ ಸಾಧ್ಯವಾಗಿಸಬೇಕು.



೬. ೧೯೯೧ರ ಜನಗಣತಿಯನ್ನು ಎದುರಿಸಲು ಈಗಿನಿಂದಲೇ ಸಿದ್ಧತೆಗಳು ಪ್ರಾರಂಭವಾಗಬೇಕು. ಬೆಳಗಾವಿಯಂಥ ನಗರಗಳಲ್ಲಿ, ಗಡಿಪ್ರದೇಶಗಳಲ್ಲಿ ಕನ್ನಡದ, ಕನ್ನಡತನದ ಪ್ರಚಾರ ಅಹರ್ನಿಶಿ ನಡೆದು ಈ ಸ್ಥಳಗಳೆಲ್ಲ ಕನ್ನಡಕ್ಕೆ ಸುರಕ್ಷಿತ ಸ್ಥಳವಾಗುವಂತೆ ಮಾಡಬೇಕು. ಈ ಕಾರ್ಯಕ್ಕೆ 'ಕೃಷ್ಣಪಾರಿಜಾತ'ದಂಥ ಜಾನಪದ ಆಟಗಳ, ಇನ್ನಿತರ ಜಾನಪದ ಕಲಾಮೇಳಗಳ ಪ್ರಯೋಜನವನ್ನು ಪಡೆಯಬೇಕು. ನಮ್ಮ ಗಡಿಭಾಗಗಳಲ್ಲಿ ಸಾಧ್ಯವಿರುವಷ್ಟು ಕನ್ನಡಿಗರ ಸಂಖ್ಯೆಯನ್ನು ಹೆಚ್ಚಿಸಬೇಕು. ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸಬೇಕು; ವೈದ್ಯಕೀಯ ವಿಶ್ವವಿದ್ಯಾಲಯವನ್ನು ಬೆಳಗಾವಿಯಲ್ಲಿ ಬೇಗ ಸ್ಥಾಪಿಸಬೇಕು. ಒಟ್ಟಿನಲ್ಲಿ ಈ ಕಾರ್ಯವನ್ನು ಸಮರ ಸಿದ್ಧತೆಯೋಪಾದಿಯಲ್ಲಿ ಮೊದಲ ಆದ್ಯತೆಯೊಡನೆ ಮಾಡಬೇಕು.

೭. ಕನ್ನಡ ಆಡಳಿತದ ಕನ್ನಡೀಕರಣವನ್ನು ಕಟ್ಟುನಿಟ್ಟಾಗಿ ಸಾಧಿಸಿ, ಲೋಕಸೇವಾ ಆಯೋಗದ ಮೂಲಕ, ವಿವಿಧ ನೇಮಕಾತಿ ಸಮಿತಿಗಳ ಮೂಲಕ ಕನ್ನಡ ಕಲಿತವರು ಮಾತ್ರ ಆಡಳಿತರಂಗ ಪ್ರವೇಶಿಸುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು. ಕನ್ನಡಿಗರಲ್ಲದವರಿಗೆ ಮನ ಒಲಿಸಿ ಕನ್ನಡ ಕಲಿಸುವ ವ್ಯವಸ್ಥೆ ರಾಜ್ಯದಾದ್ಯಂತವೂ ಆಗಬೇಕು. ಒಲಿದು ಅವರನ್ನು ಒಲಿಸಿಕೊಳ್ಳಬೇಕು. ತಕ್ಕ ಜನರು ಸೂಕ್ತರೀತಿಯಲ್ಲಿ ಪ್ರಯತ್ನಿಸಿದರೆ ಇದು ಸಾಧ್ಯವಿದೆ.

೮. ಈ ನಾಡಿಗೆ ವಲಸೆ ಬರುವವರ ಸಂಖ್ಯೆ ಹೀಗೆಯೇ ಬೆಳೆಯುತ್ತ ಹೋದರೆ ಇದು ಹೆಸರಿಗೆ ಮಾತ್ರ ಕನ್ನಡ ನಾಡಾಗಿ ಉಳಿದು ಕನ್ನಡಿಗರಿಲ್ಲಿ ಅಸಹಾಯಕ ಅಲ್ಪ ಸಂಖ್ಯಾತರಾಗಿ ಉಳಿದಾರು ; ಕನ್ನಡನಾಡು ಭಾರತದ ಗೋಮಾಳವಾದೀತು ; ಅನಾಹ್ವಾನಿತ ಆಕ್ರಮಣಶೀಲ ಅತಿಥಿಗಳ ಧರ್ಮಶಾಲೆಯಾದೀತು ; ಹೊರಗಿನ ಸೂರೆಗಾರರ ವಸಾಹತು ಆದೀತು ! ಇದನ್ನು ತಡೆಯಲು ರಾಜ್ಯ ಸರಕಾರಗಳಿಗೆ ಈಗಿರುವ ಸಂವಿಧಾನ ವ್ಯವಸ್ಥೆಯಲ್ಲಿ ಯಾವ ಅಧಿಕಾರವೂ ಇಲ್ಲ. ಇದನ್ನು ತಡೆಯದೆ ಹೋದರೆ ಅಸ್ಸಾಮ್, ಗೋರ್ಖಾಲ್ಯಾಂಡ್‌ಗಳಂಥ ಸಮಸ್ಯೆಗಳು ಹೆಚ್ಚುತ್ತ ಹೋಗುವುದೇ ಹೊರತು ಕಡಮೆಯಾಗುವುದಿಲ್ಲ. ಆದುದರಿಂದ ಈ ಸಮಸ್ಯೆಯನ್ನು ಕೇಂದ್ರವೂ ಗಂಭೀರವಾಗಿ ಗಮನಿಸಬೇಕು ; ಈ ಸಮಸ್ಯೆಯ ಸುಳಿಗೆ ಸಿಕ್ಕಿದ ರಾಜ್ಯಗಳೂ ಗಂಭೀರವಾಗಿ ಗಮನಿಸಬೇಕಿದೆ. ಇದಾಗಲೇ ದ್ವಿಪೌರತ್ವ ಪದ್ಧತಿ ಬರಲೆಂಬ, ಫೆಡರಲ್ ಪದ್ಧತಿ ಹೋಗಿ ಸಂಯುಕ್ತ ರಾಜ್ಯ ವ್ಯವಸ್ಥೆ ಬರಲೆಂಬ ಬೇಡಿಕೆಗಳು ಬರತೊಡಗಿವೆ. ಸಂವಿಧಾನವನ್ನು ತಿದ್ದಿ ದ್ವಿಪೌರತ್ವ ಪದ್ಧತಿಯನ್ನು ತರದಿದ್ದರೂ ಜಮ್ಮೂ ಮತ್ತು ಕಾಶ್ಮೀರ ರಾಜ್ಯಕ್ಕೆ ಈಗ ನೀಡಲಾಗಿರುವ ಎಲ್ಲ ವಿಶೇಷಾಧಿಕಾರಗಳನ್ನು ಉಳಿದೆಲ್ಲ ರಾಜ್ಯಗಳಿಗೂ ನೀಡಬೇಕು ; ಈಗ ಸಂವಿಧಾನದ ೩೦೧ನೆಯ ಅನುಚ್ಛೇದದ ಪ್ರಕಾರ ಕೇಂದ್ರಕ್ಕೆ ಮಾತ್ರವಿರುವ ಅಂತರ್‌ಪ್ರಾಂತೀಯ ವಲಸೆಯನ್ನು ನಿಯಂತ್ರಿಸುವ ಅಧಿಕಾರವನ್ನು ಎಲ್ಲ ರಾಜ್ಯಗಳಿಗೂ ಕೊಡಬೇಕು. ಈ ದಿಶೆಯಲ್ಲಿ ಕರ್ನಾಟಕ ಸರಕಾರವು ಇದನ್ನೊಪ್ಪುವ

ಉಳಿದ ರಾಜ್ಯ ಸರಕಾರಗಳೊಡನೆ ಸಮಾಲೋಚಿಸಿ ಮುಂದಿನ ಕ್ರಮವನ್ನು ತ್ವರಿತ ಗತಿಯಲ್ಲಿ ಕೈಗೊಳ್ಳಬೇಕು.

೯. ಏಕಸ್ವಾಮ್ಯವನ್ನು ತತ್ತ್ವತಃ ವಿರೋಧಿಸುವ ಕೇಂದ್ರ ಸರಕಾರ ಆಕಾಶವಾಣಿ ದೂರದರ್ಶನಗಳ ಮೇಲೆ ತನ್ನ ಏಕಸ್ವಾಮ್ಯವನ್ನು ಉಳಿಸಿಕೊಂಡಿರುವುದು ಅಸಮರ್ಥನೀಯ. ಕೇಳಿದ ಸುದ್ದಿಗಳನ್ನೇ ಆಕಾಶವಾಣಿಯಲ್ಲಿ ನಾಲ್ಕು ಭಾಷೆಗಳಲ್ಲಿ, ದೂರದರ್ಶನದಲ್ಲಿ ಮೂರು ಭಾಷೆಗಳಲ್ಲಿ ಕೇಳುವುದು, ಕೇಳಿದ ಸ್ವರಗಳನ್ನೇ ಮತ್ತೆ ಮತ್ತೆ ಕೇಳುವುದು, ನೋಡಿದ ಮುಖಗಳನ್ನೇ ಮತ್ತೆ ಮತ್ತೆ ನೋಡುವುದು ಶ್ರಾವಕ-ದರ್ಶಕರಿಗೆ ವಿಧಿಸಿರುವ ಶಿಕ್ಷೆಯೆಂದೇ ಹೇಳಬಹುದು. ಕೇಂದ್ರ ಇವುಗಳ ಮೇಲಿರುವ ಏಕಸ್ವಾಮ್ಯವನ್ನು ಬಿಟ್ಟುಕೊಡಲು ಸಿದ್ಧವಿಲ್ಲ. ಆದುದರಿಂದ ಕೇಂದ್ರವು ಎಲ್ಲ ರಾಜ್ಯಗಳಿಗೂ ಈ ಎರಡೂ ಸಮೂಹ ಮಾಧ್ಯಮಗಳ ದ್ವಿತೀಯ ಪಥಗಳನ್ನು ಕೊಟ್ಟು ಆಯಾ ರಾಜ್ಯಗಳು ತಂತಮ್ಮ ರಾಜ್ಯ ಭಾಷೆಗಳಲ್ಲಿಯೇ ತಂತಮ್ಮ ರಾಜ್ಯಗಳ ಪರಂಪರೆ, ಪ್ರತಿಭೆ, ಸಾಧನೆ, ಸಮಸ್ಯೆಗಳ ಪ್ರಸಾರ, ಪ್ರೋತ್ಸಾಹ, ಪ್ರಚಾರ, ಚರ್ಚೆಗಳಿಗಾಗಿ ಅವುಗಳನ್ನು ಉಪಯೋಗಿಸಿಕೊಳ್ಳುವ ಅಧಿಕಾರ ಕೊಡಲಿ. ನಮ್ಮ ಸರಕಾರ ಉಳಿದ ರಾಜ್ಯ ಸರಕಾರಗಳೊಡನೆ ಇದಕ್ಕಾಗಿ ಪ್ರಯತ್ನಿಸಲಿ. ಈಗಿರುವ ವ್ಯವಸ್ಥೆ ಹೀಗೆಯೆ ಮುಂದುವರಿದರೆ ಭಾರತೀಯರ ಭಾವೈಕ್ಯ ಗಗನಕುಸುಮ ಪರಿಮಳದಿಂದತ್ತತ್ತ ಕಾಣಾ, ಗುಹೇಶ್ವರಾ !

೧೦. ಕನ್ನಡ ನಾಡಿನ ಗಡಿಯೀಚೆ ಇರುವ ಗ್ರಾಮಗಳಲ್ಲಿ, ತಾಲ್ಲೂಕುಗಳಲ್ಲಿ ಕನ್ನಡದ ಕಳಕಳಿ ಇರುವ, ದಕ್ಷತೆಗೆ ಹೆಸರಾದ ಅಧಿಕಾರಿಗಳನ್ನೇ, ಶಿಕ್ಷಕರನ್ನೇ ನಿಯಮಿಸಬೇಕು. ಕನ್ನಡದ ಶಾಲೆಗಳ ಗುಣಮಟ್ಟವನ್ನು ಮೇಲೆರಿಸಿ ಮರಾಠೀ ಪಾಲಕರೂ ಉತ್ತಮ ಶಿಕ್ಷಣದ ಆಸೆಯಿಂದ ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳಿಸುವಂತೆ ಮಾಡಬೇಕು. ಈಗ ಅದೇ ಆಸೆಯಿಂದ ಕನ್ನಡ ಪಾಲಕರು ತಮ್ಮ ಮಕ್ಕಳನ್ನು ಮರಾಠೀ ಶಾಲೆಗಳಿಗೆ ಕಳಿಸುತ್ತಿದ್ದಾರೆ! ಈಗ ಆತ್ಮ-ಘಾತುಕ ಅವ್ಯವಸ್ಥೆ ಹೋಗಿ ಗಡಿಭಾಗಗಳ ಕನ್ನಡ ಶಾಲೆಗಳು ಆದರ್ಶ ಶಾಲೆಗಳಾಗಬೇಕು. ಹೀಗಾದರೆ ಕನ್ನಡ ಗಡಿಗಳು ಭದ್ರವಾಗುತ್ತವೆ ; ಭದ್ರವಾಗಬೇಕು.

ಗಡಿಯಾಚೆಗಿರುವ ಗ್ರಾಮಗಳಲ್ಲಿ ವಾಸಿಸುವ ಕನ್ನಡಿಗರು ತಮ್ಮ ಕನ್ನಡತನವನ್ನು ಉಳಿಸಿಕೊಳ್ಳುವಂತೆ ಅವರಿಗೆ ಕನ್ನಡ ಕಲಿಯುವ, ಕನ್ನಡ ಸಾಹಿತ್ಯವನ್ನು ಓದುವ, ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೆಚ್ಚವಿಲ್ಲದೆ ನೋಡುವ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಈ ಮಾತು ಹೊರನಾಡ ಕನ್ನಡಿಗರಿಗೆಲ್ಲ ಅನ್ವಯಿಸುತ್ತದೆ. ಹೊರನಾಡ ಕನ್ನಡಿಗರು ಹೊರಡಿಸುತ್ತಿರುವಂಥ 'ತಾಯಿನುಡಿ'ಯಂಥ ಪತ್ರಿಕೆಗಳಿಗೆ, ಗಡಿಭಾಗಗಳ ಕನ್ನಡ ಪತ್ರಿಕೆಗಳಿಗೆ ಹೇರಳವಾದ ಜಾಹೀರಾತುಗಳನ್ನು ನೀಡಿ ಅವುಗಳನ್ನು ಬಲಪಡಿಸಬೇಕು.



ವಿದೇಶಗಳಲ್ಲಿರುವ ಕನ್ನಡಿಗರೂ ಕನ್ನಡ ಕೂಟಗಳನ್ನು ಕಟ್ಟಿಕೊಂಡು, 'ಅಮೇರಿಕನ್ನಡ'ದಂಥ ಪತ್ರಿಕೆಯನ್ನು ಪ್ರಾರಂಭಿಸಿ ತಮ್ಮ ಕನ್ನಡತನವನ್ನು ಉಳಿಸಿಕೊಳ್ಳಲು ಹೋರಾಡುತ್ತಲಿದ್ದಾರೆ. ಅವರ ಪ್ರಯತ್ನಗಳು ಫಲಿಸುವಂತೆ ಸರ್ವವಿಧವಾದ ಪ್ರೋತ್ಸಾಹವನ್ನು ಅವರಿಗೆ ನೀಡಬೇಕು.

ಹೊರನಾಡಿನ, ಹೊರದೇಶಗಳ ಕನ್ನಡಿಗರಿಗೆ ಪವಿತ್ರ ಯಾತ್ರಾ ಸ್ಥಳವಾಗುವಂತೆ ಈ ದೇಶದ ಎಲ್ಲ ರಾಜ್ಯಗಳ ಹಾಗೂ ಪ್ರಮುಖ ಪರದೇಶಗಳ ಒಂದೊಂದು ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗವನ್ನು ಪ್ರಾರಂಭಿಸಲು ಪ್ರಯತ್ನಿಸಬೇಕು. ಅದು ಬೋಧಕಾಂಗ ಪ್ರಸಾರಾಂಗಗಳೆರಡನ್ನೂ ಒಳಗೊಂಡು ವರ್ಷಕ್ಕೊಮ್ಮೆ ವಿಶೇಷೋತ್ಸವದ ಮೂಲಕ ಆಯಾ ರಾಜ್ಯದ, ಆಯಾ ದೇಶದ ಕನ್ನಡಿಗರನ್ನು ಆಕರ್ಷಿಸುವ ಕನ್ನಡ ಕೇಂದ್ರವಾಗಬೇಕು.

೧೧. ಹಂಪಿಯಲ್ಲಿ ಇದೇ ನವೆಂಬರ್ ತಿಂಗಳಲ್ಲಿ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯಾಗುವುದಾಗಿ ಸರಕಾರ ಸಾರಿದೆ. ಇದು ನಿಜವಾಗಲಿ ! ಆದರೆ ಅದರ ಸ್ವರೂಪವೇನೆಂಬುದು ಸಾರ್ವಜನಿಕರಿಗೆ ತಿಳಿದಿಲ್ಲ. ಇದು ಈಗಿರುವ ಇಲ್ಲಿಯ ವಿಶ್ವವಿದ್ಯಾಲಯಗಳ ಕನ್ನಡ ಅಧ್ಯಯನ ಸಂಸ್ಥೆಗಳ ವಿಸ್ತೃತ ಆವೃತ್ತಿಯಾಗಬಾರದೆಂಬುದಕ್ಕೆ ಇದಿರು ಮಾತಿರಲಾರದು. ಇದಾಗಲೇ ಕನ್ನಡ ಅಧ್ಯಯನ ಸಂಸ್ಥೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿದ್ಯಾವರ್ಧಕ ಸಂಘ, ಬಿ.ಎಂ.ಶ್ರೀ. ಪ್ರತಿಷ್ಠಾನ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ವಿವಿಧ ಗ್ರಂಥಮಾಲೆಗಳು, ಶ್ರೀ ಮಠಗಳಲ್ಲಿ ಕೆಲವು ಗ್ರಂಥ ಪ್ರಕಾಶನ ಸಂಸ್ಥೆಗಳು ಮಾಡುತ್ತಿರುವ ಗ್ರಂಥ ಸಂಪಾದನ-ಪ್ರಕಾಶನ ಕಾರ್ಯವನ್ನೇ ಇದೂ ಮಾಡಿಕೊಂಡು ಹೋಗಬಾರದು. ಒಂದೇ ಕಾರ್ಯ ಹಲವೆಡೆಗಳಲ್ಲಿ ಒಂದೇ ರೂಪದಲ್ಲಿ ನಡೆಯುವುದು ನಮ್ಮ ಸೀಮಿತ ಸಂಪನ್ಮೂಲಗಳ ಅಸದ್ವ್ಯಯ. ಆದುದರಿಂದ ನಮ್ಮ ಕನ್ನಡ ವಿಶ್ವವಿದ್ಯಾಲಯ ಇವೆಲ್ಲವುಗಳಿಗಿಂತ ಭಿನ್ನವಾಗಿ ಕರ್ನಾಟಕದ ಏಕಮೇವ ಸಾಂಸ್ಕೃತಿಕ ವಿಶ್ವವಿದ್ಯಾಲಯವಾಗಬೇಕು. ಅಲ್ಲಿ ಕರ್ನಾಟಕ ಸಂಸ್ಕೃತಿಯ ವಿವಿಧಾಂಗಗಳ ಅಧ್ಯಯನದ ಜೊತೆಗೆ ವಿಶ್ವಭಾರತಿಯ ವಿಶಾಲ ಸಂಸ್ಕೃತಿಯ ತುಲನಾತ್ಮಕ ಅಧ್ಯಯನವೂ ನಡೆಯಬೇಕು ; ಕನ್ನಡ ನುಡಿಯ ಸರ್ವಂಕುಷ ಅಧ್ಯಯನದ ಜೊತೆಗೆ ಸಂಸ್ಕೃತ ಪ್ರಾಕೃತಗಳ, ಎಲ್ಲ ದ್ರಾವಿಡ ಭಾಷೆಗಳ, ಕರ್ನಾಟಕದಲ್ಲಿರುವ ಇತರ ಭಾಷೆಗಳಾದ ತುಳು, ಕೊಡವ, ಕೊಂಕಣಿ, ಉರ್ದು, ಹಿಂದಿ, ಮರಾಠಿ, ಗುಜರಾಥಿ ಭಾಷೆಗಳ ಆಳವಾದ ಅಧ್ಯಯನವೂ ನಡೆಯಬೇಕು. ಈ ಎಲ್ಲ ಭಾಷೆಗಳವರಿಗೂ ಕನ್ನಡ ವಿಶ್ವವಿದ್ಯಾನಿಲಯವು ಅಭಿಮಾನದ ಕೇಂದ್ರವಾಗಬೇಕು.

ಇನ್ನೊಂದು ಅತ್ಯಗತ್ಯವಾದ ಕಾರ್ಯಕ್ಕೆ ಕನ್ನಡ ವಿಶ್ವವಿದ್ಯಾನಿಲಯವು ಕೇಂದ್ರವಾಗಬೇಕು. ಭಾರತದ ಬೇರಾವ ಭಾಷೆಯಲ್ಲಿಯೂ ಇರದಷ್ಟು ಗೌರವ ಗ್ರಂಥಗಳು ಕನ್ನಡದ ಪ್ರಾಚೀನ-ಅರ್ವಾಚೀನ ಸಾಹಿತ್ಯದಲ್ಲಿ ಇವೆ. ಆದರೆ ಭಾರತದ

ಬೇರೆ ಬೇರೆ ಭಾಷೆಗಳಲ್ಲಿ, ಪ್ರಪಂಚದ ಪ್ರಮುಖ ಭಾಷೆಗಳಲ್ಲಿ ಇವುಗಳ ಸರಿಯಾದ ಅನುವಾದಗಳು ಪ್ರಕಟವಾಗಿಲ್ಲವೆಂದೇ ನಮಗೆ ನ್ಯಾಯವಾಗಿ ಸಲ್ಲಬೇಕಾಗಿದ್ದ ಗೌರವ ನಮಗೆ ಸಂದಿಲ್ಲ; ನಾವು, "ಜೊತೆಯವರ ಕೂಟದಲಿ ಸೊಕ್ಕಿನಲಿ ತಲೆಯೆತ್ತಿ ನಾವು ಸರಿ ನಿಮಗೆ" ಎಂದು ಅಲ್ಲ, "ನಾವು ಹೆಚ್ಚು ನಿಮಗಿಂತಲೂ" ಎಂದು ನುಡಿವ ಬಲ ನಮಗೆ ಬಂದಿಲ್ಲ. ಆದುದರಿಂದ ಕನ್ನಡದ ಶ್ರೇಷ್ಠ ಶ್ರೇಣಿಯ ಸ್ನಾತಕೋತ್ತರ ಪದವೀಧರರು ಸ್ಥಾಪಿತವಾಗಲಿರುವ ಕನ್ನಡ ವಿಶ್ವವಿದ್ಯಾನಿಲಯದಲ್ಲಿ ತಮಗೆ ಇಷ್ಟವೆನಿಸುವ ಭಾರತದ ಬೇರೊಂದು ಭಾಷೆಯನ್ನೋ, ಪ್ರಪಂಚದ ಪ್ರಮುಖ ಭಾಷೆಗಳಲ್ಲಿ ಒಂದನ್ನೋ ಆರಿಸಿಕೊಂಡು, ಕನ್ನಡದ ಶ್ರೇಷ್ಠ ಕೃತಿಗಳಲ್ಲಿ ಕೆಲವನ್ನು ಆ ಭಾಷೆಗೆ ಚೆನ್ನಾಗಿ ಅನುವಾದಿಸುವಷ್ಟು ಆ ಭಾಷೆಯ ಮೇಲೆ ಪ್ರಭುತ್ವ ಪಡೆದುಕೊಂಡು ಅಧಿಕೃತ ಅನುವಾದಕರಾಗಲು ಅವಕಾಶವಿರಬೇಕು. ಅವರು ಅನುವಾದ ಕಾರ್ಯಕ್ಕೆ ತಮ್ಮ ಬಾಳನ್ನು ಮುಡಿಪಾಗಿರಿಸಲು ಒಪ್ಪಿದರೆ ಅವರಿಗೆ ಅಲ್ಲಿಯ ಅನುವಾದ ಕಮ್ಮಟದಲ್ಲಿ-ಬಹು ದೊಡ್ಡ ಪ್ರಮಾಣದ ಬಹು ಭಾಷೀಯ ಅನುವಾದ ಕಮ್ಮಟದಲ್ಲಿ-ತಕ್ಕ ವೇತನದ ಕೆಲಸ ಸಿಕ್ಕುವ ವ್ಯವಸ್ಥೆಯಾಗಬೇಕು; ಅವರು ಕನ್ನಡದಿಂದ ಬೇರೆ ಭಾಷೆಗಳಿಗೆ, ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದಿಸುವ ಕೃತಿಗಳ ಪ್ರಕಟನೆಯ ವ್ಯವಸ್ಥೆಯೂ ಆಗಬೇಕು. ಕನ್ನಡದಿಂದ ಬೇರೆ ಭಾಷೆಗಳಿಗೆ, ಬೇರೆ ಭಾಷೆಗಳಿಂದ ಕನ್ನಡಕ್ಕೆ ಭಾಷಾಂತರಿತವಾಗಬೇಕಾದ ಗೌರವ ಗ್ರಂಥಗಳ ಸೂಚಿ ಮೊದಲೇ ಸಿದ್ಧವಾಗಿ ಅದರಂತೆ ಅನುವಾದ ಕಾರ್ಯದ ಆರಂಭವಾಗಬೇಕು; ಮುಂದೆ ಅದಕ್ಕೆ ಹೊಸ ಗ್ರಂಥಗಳನ್ನು ಸೇರಿಸುತ್ತ ಹೋಗಬೇಕು.

ಹಂಪಿಯೇ ಪ್ರಪಂಚದ ಭೂಮತಮ ಬಯಲು ವಸ್ತು ಪ್ರದರ್ಶನಾಲಯ, ಅಲ್ಲಿ ಎಷ್ಟು ದೊಡ್ಡ ವಸ್ತು ಸಂಗ್ರಹಾಲಯವನ್ನಾದರೂ ಕಟ್ಟಿ ಬೆಳೆಸಬಹುದು. ಪುರಾತತ್ವ ಇಲಾಖೆಯ ಕೇಂದ್ರ ಕಾರ್ಯಾಲಯವನ್ನು ಇಲ್ಲಿಗೆ ವರ್ಗಾಯಿಸಿ, ಪ್ರಪಂಚದ ಯಾವ ವಸ್ತು ಸಂಗ್ರಹಾಲಯಕ್ಕೂ ಸಮಾನವೆನಿಸಬಲ್ಲ ವಸ್ತು ಸಂಗ್ರಹಾಲಯವೊಂದನ್ನು ಕನ್ನಡ ವಿಶ್ವವಿದ್ಯಾಲಯದ ಕ್ಷೇತ್ರದಲ್ಲಿ ಸ್ಥಾಪಿಸಬಹುದು. ಅಲ್ಲದೆ, 'ಎಪಿಗ್ರಾಫಿಕಾ ಕರ್ಣಾಟಿಕಾ'ದ ಹದಿನಾರು ಸಂಪುಟಗಳು ಪುನರ್ಮುದ್ರಿತವಾಗುತ್ತಿರುವಂತೆಯೇ 'ಕರ್ನಾಟಕ ಇನ್‌ಸ್ಕ್ರಿಪ್‌ಷನ್ಸ್'ದ ಆರು ಸಂಪುಟಗಳಲ್ಲಿಯೂ, 'ಸೌಥ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್' ಮಾಲಿಕೆಯಲ್ಲಿಯೂ ಸೇರದೆ ಉಳಿದ ಉತ್ತರ ಕರ್ನಾಟಕ-ಹೈದರಾಬಾದು ಕರ್ನಾಟಕದ ಎಲ್ಲ ಜಿಲ್ಲೆಗಳ ಎಲ್ಲ ಶಾಸನಗಳನ್ನೂ, ಈ ಜಿಲ್ಲೆಗಳ ಗಡಿಗಳಿಗೆ ಹೊಂದಿಕೊಂಡಿರುವ ಬೇರೆ ರಾಜ್ಯಗಳ ಜಿಲ್ಲೆಗಳ ಕನ್ನಡ ಶಾಸನಗಳನ್ನೂ ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸುವ ಮಹತ್ಕಾರ್ಯವೂ ಇಲ್ಲಿ ನಡೆದು, ಕಾಲಕ್ರಮದಲ್ಲಿ ಕರ್ನಾಟಕದ ಸಮಗ್ರ ರಾಜಕೀಯ-ಸಾಂಸ್ಕೃತಿಕ-ಸಾಮಾಜಿಕ ಇತಿಹಾಸವು ಹಲವು ಸಂಪುಟಗಳಲ್ಲಿ ಹೊರಬೀಳಬೇಕು.



ಇಲ್ಲಿ ಉಭಯ ಸಂಗೀತ ಮಾರ್ಗಗಳ, ಭಾರತೀಯ ಶಿಲ್ಪ ಶೈಲಿಗಳ, ನೃತ್ಯ ಪರಂಪರೆಗಳ, ಚಿತ್ರಕಲಾ ಸಂಪ್ರದಾಯಗಳ, ನಾಟಕ-ಗಮಕ-ಕೀರ್ತನಾದಿ ಸಮುದಾಯ-ಸಂಸ್ಕರಣ-ಸಮರ್ಥ ಕಲೆಗಳ, ಜಾನಪದ ಜಗತ್ತಿನ ಅಧ್ಯಯನ, ಸಂಶೋಧನ, ಪ್ರಯೋಗಗಳಿಗೆ ಎಲ್ಲ ಅವಕಾಶಗಳೂ ಇರಬೇಕು.

ಒಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯ ಕನ್ನಡ ಚೈತ್ಯ ಪುರುಷನ ಮಸ್ತಕವೂ ಆಗಬೇಕು; ಹೃದಯವೂ ಆಗಬೇಕು; ಕಾಣುವ ಕಣ್ಣು, ಮಾಡುವ ಕೈ, ಬಿತ್ತರಿಸುವ ಬಾಯಿಯಾಗಬೇಕು.

೧೨. ಜಿ. ನಾರಾಯಣ ಅವರು ಮಂಡಿಸಿ ಸರಕಾರವು ಇದಾಗಲೇ ಅಂಗೀಕರಿಸಿದೆಯೆಂದು ಹೇಳಲಾಗಿರುವ 'ಕನ್ನಡ ಸಾಹಿತ್ಯ ಪ್ರಸಾರ ನಿಗಮ'ದ ಯೋಜನೆಯನ್ನು ಕೂಡಲೇ ಕೈಗೆತ್ತಿಕೊಳ್ಳಬೇಕು. ಪುಸ್ತಕ ಪ್ರಕಾಶನ ಹಾಗೂ ಪ್ರಸಾರ ಎರಡನ್ನೂ ಏಕಕಾಲಕ್ಕೆ ಸಾಧಿಸುತ್ತ ಹೋಗಬೇಕು. ವಿಶ್ವ ಕನ್ನಡ ಮೇಳಕ್ಕಾಗಿ ಪ್ರಕಟಿಸಿದಂತೆ ಕನ್ನಡದ ಪ್ರಾಚೀನ-ಅರ್ವಾಚೀನ ಸಾಹಿತ್ಯಗಳ ಕೃತಿರತ್ನಗಳನ್ನೂ, ಸಂಗ್ರಹಗಳನ್ನೂ, ಸಂಕಲನಗಳನ್ನೂ ಸುಲಭ ಬೆಲೆಗೆ ಪ್ರಕಟಿಸುವುದು, ಅವು ಎಲ್ಲರಿಗೆ ಆಯಾಸವಿಲ್ಲದೆ ದೊರೆಯುವಂತೆ ತಾಲ್ಲೂಕು ಮಟ್ಟದವರೆಗೆ ಮಾರಾಟ ಮಳಿಗೆಗಳನ್ನು ತೆರೆಯುವುದು—ಈ ದ್ವಿಮುಖ ಕಾರ್ಯಾಚರಣೆಯಿಂದ ನಮ್ಮ ಸಾಹಿತ್ಯದಲ್ಲಿ ಸಾರವತ್ತಾಗಿರುವುದೆಲ್ಲ ಶ್ರೀಸಾಮಾನ್ಯರಿಗೆ ಮುಟ್ಟುವಂತೆ ಮಾಡುತ್ತ, ತನ್ಮೂಲಕ ಅವರ ಬುದ್ಧಿ ಭಾವಗಳಿಗೆ ಬೆಳಕಿನ ಜಳಕ ಮಾಡಿಸುತ್ತ, ಜೊತೆ ಜೊತೆಗೆ ಕನ್ನಡ ಬರಹಗಾರರಿಗೆ ಬೇಕಾಗಿರುವ ಪ್ರೋತ್ಸಾಹವನ್ನೂ ಒದಗಿಸುತ್ತ, ಲೇಖಕರೇ ಪ್ರಕಟಿಸುವ ಸತ್ಕೃತಿಗಳ ಸಗಟು ಖರೀದಿಯ ಮುಖಾಂತರ, ಸಂಚಾರೀ ಗ್ರಂಥ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಯ ಮೂಲಕ ಈ ನಿಗಮ ಕನ್ನಡದ ಮುನ್ನಡೆಗೆ ಪ್ರಬಲ ಪ್ರೇರಣೆಯನ್ನು ನೀಡಬಲ್ಲದು.

ಪುಸ್ತಕ ಪ್ರಕಟನೋದ್ಯಮವು ನಾಡಿಗೆ ಅರಿವಿನ ಅರವಟ್ಟಿಗೆ; ಲೇಖಕ, ಮಾರಾಟಗಾರ, ವಾಚನಾಲಯಾಧಿಕಾರಿ ಇತ್ಯಾದಿ ಅನೇಕರಿಗೆ ಉದ್ಯೋಗವಕಾಶವನ್ನು ನೀಡುವ ನಂದಿನಿ; ಮತ್ತು ಕಡಮೆ ಬೆಲೆಗೆ ಪುಸ್ತಕಗಳನ್ನೂ ಒದಗಿಸಿದರೆ ವಾಚಕರಿಗೆ ಕಲ್ಪತರು. ಇಂಥ ಉದ್ಯಮ ಖಾಸಗಿ ಪ್ರಕಾಶಕರ ಒಂಟಿ ಹಿಡಿತಕ್ಕೆ ಒಳಗಾಗಿ ಒದ್ದಾಡುತ್ತಿರುವುದು ಶೋಚನೀಯ. ಲೇಖಕರೇ ಪ್ರಕಾಶಕರಾಗಬಯಸಿದರೆ ಅವರಿಗೆ ಚಿಕ್ಕ ಉದ್ಯಮಗಳಿಗೆ ದೊರೆಯುವ ಸಾಲ, ಕಚ್ಚಾಮಾಲು ಇತ್ಯಾದಿ ಎಲ್ಲವೂ ಕಡಿಮೆ ಬಡ್ಡಿ ಬೆಲೆಗಳಿಗೆ ದೊರೆಯಬೇಕು.

೧೩. ಈ ನಿಗಮದ ಉದ್ದೇಶ ಈಡೇರಲು ಕನಿಷ್ಠ ಐದು ಹಳ್ಳಿಗಳಿಗೊಂದರಂತೆ ಐದು ಸಾವಿರ ಕನ್ನಡ ವಾಚನಾಲಯಗಳ ಜಾಲವೊಂದನ್ನು ಸೃಷ್ಟಿಸಬೇಕು. ಯಾಕೆಂದರೆ ಯಾವುದೇ ಪುಸ್ತಕದ ಐದು ಸಾವಿರ ಪ್ರತಿಗಳು ಪ್ರಕಟವಾದರೆ ಅದರ ಕ್ರಯ ಗಣನೀಯ ಪ್ರಮಾಣದಲ್ಲಿ ಕಡಮೆಯಾಗುತ್ತದೆ. ಪ್ರತಿ ವರ್ಷ ಒಂದು

ಸಾವಿರ ರೂಪಾಯಿಗಳ ಕನ್ನಡ ಪುಸ್ತಕಗಳನ್ನಾದರೂ ಇವು ಕೊಳ್ಳುವಂತೆ ಇವುಗಳು ಹಣಕಾಸಿನ ಸಹಾಯ ಪಡೆಯಬೇಕು. ಈಗಲೀಗ ಸ್ಥಾಪಿತವಾಗಿರುವ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯತಿಗಳು ಈ ವಾಚನಾಲಯ ಚಳುವಳಿಯ ಹೊಣೆ-ಹೊರೆ ಹೊರಬೇಕು. ಕೊಳ್ಳಲು ಯೋಗ್ಯವಾದ ಪುಸ್ತಕಗಳ ಯಾದಿಯೊಂದು ಪ್ರತಿ ವರ್ಷ ತಜ್ಞರಿಂದ ಸಿದ್ಧವಾಗಬೇಕು. ಅದರಲ್ಲಿ ಪ್ರತಿ ಜಿಲ್ಲೆಯ ಲೇಖಕರ ಉತ್ತಮ ಕೃತಿಗಳ ಸೇರ್ಪಡೆಯಾಗಬೇಕು. ಇಂಥ ಪುಸ್ತಕಗಳನ್ನೇ ಈ ವಾಚನಾಲಯಗಳಿಗಾಗಿ ಕೊಂಡು ಒದಗಿಸುವ ವ್ಯವಸ್ಥೆಯಾಗಬೇಕು.

೧೪. ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು, ವಯಸ್ಕರ ಶಿಕ್ಷಣ ಯೋಜನೆಯನ್ನು ನೂರಕ್ಕೆ ನೂರರಷ್ಟು ಯಶಸ್ವಿಗೊಳಿಸಬೇಕು. ಶೈಕ್ಷಣಿಕ ರಂಗದಲ್ಲಿ ಹೊಸ ವಿಷಮತೆಗಳನ್ನು ಹುಟ್ಟುಹಾಕಿರುವ ಕೇಂದ್ರ ಸರ್ಕಾರದ ಮಾದರಿ ಶಾಲೆಗಳ ಯೋಜನೆಯನ್ನು ವಿರೋಧಿಸಬೇಕು ; ಮತ್ತು ಇನ್ನು ಮುಂದೆ ಒಂದೇ ಒಂದು ಇಂಗ್ಲಿಷ್ ಮಾಧ್ಯಮದ ಶಾಲೆಗೂ ಅನುಮತಿ ನೀಡಕೂಡದು.

೧೫. ಈ ನಾಡಿನ ಎಲ್ಲ ಜಲಾಶಯಗಳಿಗೆ, ಹೊಸ ವಿಶ್ವವಿದ್ಯಾಲಯಗಳಿಗೆ, ಮಹಾ ಯೋಜನೆಗಳಿಗೆ, ಮುಖ್ಯ ನಗರಗಳು ಮೊದಲ್ಗೊಂಡು ಹಳ್ಳಿ ಹಳ್ಳಿಗಳ ಹಾದಿ ಬೀದಿಗಳಿಗೆ ಕನ್ನಡ ನಾಡಿನ ಮಹಾಪುರುಷರ, ಮಹಾ ಮಹಿಳೆಯರ, ಮಹಾಕವಿಗಳ ಹೆಸರುಗಳನ್ನಿಟ್ಟು ಈ ನಾಡಿನಲ್ಲೆಲ್ಲ ಕನ್ನಡ ವಾತಾವರಣ ಹುಟ್ಟುವಂತೆ ಮಾಡಬೇಕು. ತನ್ಮೂಲಕ ಕನ್ನಡಿಗರಲ್ಲಿ ಕನ್ನಡಪ್ರಜ್ಞೆ, ಕನ್ನಡಶೀಲ, ಕನ್ನಡ ಸ್ವಭಾವ ಕೊನರಿ ಕುಸುಮಿಸುವಂತೆ ಮಾಡಬೇಕು.

ಇವೆಲ್ಲವನ್ನೂ ನಮ್ಮ ಸರ್ಕಾರ ಕ್ರಮಕ್ರಮವಾಗಿ ಮಾಡಿ ತೋರಿಸುವುದೇ ? ಈಗ ನಡೆದಿರುವಂತೆ ಆಡಳಿತ-ಯಂತ್ರ-ತುಕ್ಕು ಹಿಡಿದಿರುವ ಯಂತ್ರ-ಉರುಳಿದರೆ ಇದು ಸಂದೇಹಾಸ್ಪದವೇ ! ಕುಂಟು ನೆಪಗಳನ್ನು ಸೃಷ್ಟಿಸುವುದರಲ್ಲಿ, ಅರ್ಥಾತ್ ಕೊಕ್ಕೆ ಹಾಕುವುದರಲ್ಲಿ ಆಡಳಿತಗಾರರು ನಿಸ್ಸೀಮರು ; ಆ ಕುಂಟು ನೆಪಗಳನ್ನೇ ಮುಂದೆ ಮಾಡಿ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ, ಶಿಕ್ಷಣರಂಗಗಳ ಕನ್ನಡೀಕರಣವನ್ನು ಮುಂದೆ ಮುಂದೆ ದೂಡುತ್ತ ಹೋಗುವುದರಲ್ಲಿ ರಾಜಕಾರಣಿಗಳು ನಿಪುಣರು ; ಎಲ್ಲವನ್ನೂ ತಾಳಿಕೊಂಡು, ಇದ್ದಂತೆ ಬಾಳಿಕೊಂಡು ಹೋಗುವುದರಲ್ಲಿ ಕನ್ನಡಿಗರು ಅಪ್ರತಿಮರು ! ಬೆರಳಚ್ಚುಗಳ ಕೊರತೆ, ಬೆರಳಿಣಿಕೆಯ ಸರಕಾರೀ ನೌಕರರ ತೊಂದರೆ ಇತ್ಯಾದಿ ಕ್ಷುಲ್ಲಕ ನೆಪಗಳನ್ನು ಮುಂದೆ ಮಾಡಿ ಆಡಳಿತದ ಕನ್ನಡೀಕರಣವನ್ನು, ಪಠ್ಯಪುಸ್ತಕಗಳ ಕೊರತೆ, ಪಾರಿಭಾಷಿಕ ಪದಗಳ ಕೊರತೆ, ಪ್ರಾಧ್ಯಾಪಕರ ತೊಂದರೆ ಇತ್ಯಾದಿ ಕ್ಷುದ್ರ ಕಾರಣಗಳನ್ನು ಮುಂದೆ ಮಾಡಿ ಶಿಕ್ಷಣದ ಕನ್ನಡೀಕರಣವನ್ನು, ಇಂಥವೇ ಕಾರಣಗಳನ್ನು ಮುಂದೆ ಮಾಡಿ ನ್ಯಾಯಾಲಯಗಳ ಕನ್ನಡೀಕರಣವನ್ನು ಮುಂದೆ ಮುಂದೆ ತಳ್ಳುತ್ತ ಬಂದುದಾಯಿತು. ಇನ್ನು ಈ ಆಟ ಸಾಗದೆಂಬುದನ್ನು ನಮ್ಮ ಸರಕಾರಕ್ಕೆ ನಾವು ಮನಗಾಣಿಸಿಕೊಡಬೇಕು.



ಕನ್ನಡಿಗರೂ ಇನ್ನು ಎಚ್ಚತ್ತು ಆಡಳಿತದ ಕಾರ್ಯಾಲಯ, ನ್ಯಾಯಾಲಯ, ವಿದ್ಯಾಲಯಗಳು ಇರುವುದು ಕೆಲವು ಅಧಿಕಾರಿಗಳ, ಕೆಲವು ನ್ಯಾಯಾಧೀಶರ, ಕೆಲವು ಅಧ್ಯಾಪಕ-ಪ್ರಾಧ್ಯಾಪಕರ ಸುಖ-ಸೌಕರ್ಯಗಳಿಗಾಗಿ ಅಲ್ಲ, ನೂರಕ್ಕೆ ಎಂಬತ್ತರಷ್ಟಿರುವ ರೈತರಿಗಾಗಿ, ಕಾರ್ಮಿಕರಿಗಾಗಿ, ಕಸಬುದಾರರಿಗಾಗಿ, ದಲಿತ-ದುರ್ಬಲರಿಗಾಗಿ ಎಂಬುದನ್ನು ತಾವೇ ಆರಿಸಿಕಳಿಸಿದ ಶಾಸಕರ, ಅಮಾತ್ಯರ ಗಮನಕ್ಕೆ ತಂದು, ಕನ್ನಡನಾಡಿನ ಕನ್ನಡೀಕರಣವನ್ನು ಸಾಧಿಸಿಕೊಳ್ಳಬೇಕು. ಇಷ್ಟಕ್ಕೂ ಸರಕಾರ ಮಣಿಯದಿದ್ದರೆ ಮುಂದೇನು ಮಾಡಬೇಕು ? ಕನ್ನಡಕ್ಕಾಗಿಯೇ ಪ್ರಾದೇಶಿಕ ಪಕ್ಷವೊಂದನ್ನು ಕಟ್ಟಿಕೊಳ್ಳಬೇಕೆಂದು ಕೆಲವರು ಮುಂದೆ ಬಂದಿದ್ದಾರೆ. ಅವರಿಗೆ ಜಯ ದೊರೆತರೆ ಸಂತೋಷವೇ. .

ಆದರೆ, ಇದಕ್ಕಿಂತ ಸುಲಭವಾದ ಮಾರ್ಗವನ್ನು ಪ್ರಾತಃಸ್ಮರಣೀಯರಾದ ಎಂ.ಆರ್. ಶ್ರೀನಿವಾಸಮೂರ್ತಿಗಳವರು ತೋರಿಸಿದ್ದಾರೆ—ತಮ್ಮ ಸಮ್ಮೇಳನಾಧ್ಯಕ್ಷ ಭಾಷಣದಲ್ಲಿ—"ಮುಂದೆ ಯಾವ ರಾಜಕೀಯ ಪಟುವೆ ಆಗಲಿ, ನಿಮ್ಮ ಓಟುಗಳಿಗಾಗಿ ನಿಮ್ಮ ಬಳಿಗೆ ಬಂದಾಗ ಅವರಿಗೆ ಕನ್ನಡ ಸಾಹಿತ್ಯವೇನಾದರೂ ತಿಳಿದಿದೆಯೆ ಎಂಬುದನ್ನು ಮೊದಲು ಪರೀಕ್ಷೆ ಮಾಡಿ; ಕನ್ನಡ ಪುಸ್ತಕಗಳ ಭಂಡಾರವನ್ನೇನಾದರೂ ಮನೆಯಲ್ಲಿಟ್ಟುಕೊಂಡಿದ್ದಾರೆಯೋ ಎಂದು ಕೇಳಿ ತಿಳಿದುಕೊಳ್ಳಿ. ಇಬ್ಬರು ಕನ್ನಡ ಕವಿಗಳ ವಿಚಾರವೂ ಅವರಿಗೆ ತಿಳಿದಿಲ್ಲದಿದ್ದರೆ ಅವರಿಗೆ ಬಹಿಷ್ಕಾರ ಹಾಕಿ; ಹತ್ತಿರ ಸೇರಿಸಬೇಡಿರಿ."

ಇನ್ನೂ ಒಂದು ಅಪಾಯವನ್ನು ಎತ್ತಿ ತೋರಿಸಿದ್ದಾರೆ. ಆಚಾರ್ಯ ಎಂ. ಆರ್. ಶ್ರೀ. ಅವರು—"ರಾಷ್ಟ್ರಮಟ್ಟದ ಪಕ್ಷಗಳಿಗೆ ನಿಷ್ಠರಾದವರು ತಮ್ಮ ರಾಜ್ಯದ ಹಿತಕ್ಕಾಗಿ ತಮಗಿರುವ ನಿಷ್ಠೆಯನ್ನು ರಾಷ್ಟ್ರಮಟ್ಟದಲ್ಲಿ ಕಡೆಗಣಿಸಬೇಕಾದ ಸಂದರ್ಭಗಳು ಸಾಧ್ಯವೆಂಬುದೀಗ ಸಿದ್ಧವಾಗಿದೆ." ವಿಜಯನಗರದ ಉಕ್ಕಿನ ಕಾರಖಾನೆಯ ಅಡಿಗಲ್ಲು, ಕಾಸರಗೋಡಿನ ಸಮಸ್ಯೆಗೊದಗಿದ ಜಿಲ್ಲಾ ರಚನೆಯ ಬಡಿಗಲ್ಲುಗಳು ಇದನ್ನು ಮಾತಿಲ್ಲದೆಯೇ ಮನವರಿಕೆ ಮಾಡಿಕೊಡುತ್ತಿವೆ. ಆದುದರಿಂದ, ಯಾವುದೇ ಪಕ್ಷದ ಯಾವುದೇ ಹುರಿಯಾಳುವೂ ಆರಿಸಿ ಬರಲು ಕನ್ನಡನಿಷ್ಠೆ, ಕನ್ನಡ ಸೇವೆ, ಕನ್ನಡಿಗರ ಸೇವೆ ಅತ್ಯಗತ್ಯವಾಗುವಂತೆ, ಏಕೈಕ ಅರ್ಹತೆಯಾಗುವಂತೆ ಜಾಗೃತ ಕನ್ನಡಿಗರು ಕನ್ನಡ ಪರಿಸರವನ್ನು ನಿರ್ಮಿಸಬೇಕು. ಅವರಲ್ಲಿ ಈ ಜಾಗೃತಿಯನ್ನು ಹುಟ್ಟಿಸಲು ನಮ್ಮ ಸಾಹಿತಿಗಳು, ಕಲಾವಿದರು, ಕನ್ನಡ ಹೋರಾಟಗಾರರು ಶಕ್ತಿಮೀರಿ ಪ್ರಯತ್ನಿಸಿದರೆ ಕನ್ನಡ ವಿರೋಧಿಗಳು ನಿಂತರೆ ಅವರನ್ನು ಸೋಲಿಸುವಷ್ಟು, ಕನ್ನಡದ ಕಟ್ಟಾಳುಗಳು ನಿಂತರೆ ಅವರು ನಿರಾಯಾಸವಾಗಿ ಆರಿಸಿ ಬರುವಷ್ಟು ಕನ್ನಡ ಮತದಾರರು ಜಾಗೃತರಾಗುವರು.

ಇಂದು ಕನ್ನಡ ಹೋರಾಟದ ಶಕ್ತಿಗಳು ವಿಭಕ್ತವಾಗಿವೆ; ಅಂತೆಯೇ ದುರ್ಬಲವಾಗಿವೆ. ನಮ್ಮ ಮುಂದಿರುವ ಕನ್ನಡ ಹೋರಾಟದ ಅಗಾಧತೆಯನ್ನು

ನೆನೆದಾಗ ಕನ್ನಡಕ್ಕಾಗಿ ಹೋರಾಡುತ್ತಿರುವ ಶಕ್ತಿಗಳೆಲ್ಲ ತಂತಮ್ಮ ವೈಯಕ್ತಿಕ ಮಹತ್ವಾಕಾಂಕ್ಷೆಗಳನ್ನು ಬದಿಗಿರಿಸಿ ಒಂದು 'ಕನ್ನಡ ಹೋರಾಟ ಒಕ್ಕೂಟ'ವನ್ನು ಕಟ್ಟಿಕೊಳ್ಳಲೇಬೇಕು. ಇಲ್ಲದಿದ್ದರೆ ಈ ವಿಭಕ್ತ ಶಕ್ತಿಗಳು ನಡೆಸುವ ಸಣ್ಣಪುಟ್ಟ ಹೋರಾಟಗಳಿಂದ ಕನ್ನಡದ ಚಿಕ್ಕಪುಟ್ಟ ಕಾರ್ಯಗಳು ಆಗಬಹುದಾಗಲಿ, ಮಹತ್ಕಾರ್ಯಗಳು ಮುಗಿಲ ಮಲ್ಲಿಗೆಯೇ ಸರಿ! ಈಗ ಬೇಕಾಗಿರುವುದು ಕನ್ನಡಕ್ಕಾಗಿ ಕೊನೆಯ ಹೋರಾಟ; ಅದಕ್ಕೆ ಬೇಕಾಗಿರುವುದು ಕನ್ನಡ ಹೋರಾಟಗಾರರ ಒಕ್ಕೂಟ!

ಈ ನಾಡಿನಲ್ಲಿ ಹುಟ್ಟಿ ಬೆಳೆದವರೆಲ್ಲ, ಇಲ್ಲಿ ಕನಿಷ್ಠ ಹದಿನೈದು ವರ್ಷಗಳಿಂದ ಇದ್ದು ಕನ್ನಡವನ್ನು ಓದಲೂ ಬರೆಯಲೂ, ಕನ್ನಡದಲ್ಲಿ ಮಾತನಾಡಲೂ ಕಲಿತುಕೊಂಡವರೆಲ್ಲ ಕನ್ನಡಿಗರೆಂದೇ ಗಣಿಸಲ್ಪಡಬೇಕೆಂಬುದು ಡಾ|| ಮಹಿಷಿ ಸಮಿತಿಯ ಸಿಫಾರಸು. ಈ ವ್ಯಾಖ್ಯೆಗೆ ಹೊರಗಾಗಿ ಉಳಿಯುವವರು ಕನ್ನಡಿಗರಲ್ಲ, ಕರ್ನಾಟಕದ ಫಲಾನುಭವಿಗಳಾಗಿ ಉಳಿಯುತ್ತಾರೆ. ಅವರೂ ಕನ್ನಡ ಓದು ಬರಹ ಕಲಿತುಬಿಟ್ಟರೆ ಈ ವಿಶಾಲಾರ್ಥದಲ್ಲಿ ಅವರೂ ಕನ್ನಡಿಗರಾಗಿ ಬಿಡುತ್ತಾರೆ. ಹಾಗೆ ಮಾಡಲು ಅವರನ್ನು ಒಲಿಸಿಕೊಳ್ಳುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ. ಪ್ರತಿಯೊಬ್ಬ ಕನ್ನಡಿಗನೂ ಕನ್ನಡ ಸಾಹಿತ್ಯ ಪರಿಷತ್ತಿನ ಅಮೃತನಿಧಿಗೆ ಕನಿಷ್ಠ ಒಂದು ರೂಪಾಯಿ ನೀಡಬೇಕೆಂದು ಬೀದರ ಸಮ್ಮೇಳನಾಧ್ಯಕ್ಷರಾದ ಡಾ|| ಹಾ. ಮಾ. ನಾಯಕರು ಹೇಳಿದ್ದಾರೆ. ಅದನ್ನು ಅನುಮೋದಿಸುತ್ತ, ಪ್ರತಿಯೊಬ್ಬ ಕನ್ನಡಿಗನೂ ಕನ್ನಡ ಬಾರದ ಒಬ್ಬನಿಗೆ ಕನ್ನಡ ಕಲಿಸಲು ಕಂಕಣ ಕಟ್ಟಬೇಕೆಂದು ಕೋರುತ್ತೇನೆ. ಅಮೃತ ನಿಧಿಗೆ ಕಾಣಿಕೆ ಕನ್ನಡ ಸಾಹಿತ್ಯ ಪರಿಷತ್ತಿದ ಸಾಧನೆಗೆ ನೀಡಿದ ಕಾಣಿಕೆ.

ಬೇಗ ಕನ್ನಡ ಕಲಿತು ನೀವೂ ಕನ್ನಡಿಗರಾಗಿ, ಕನ್ನಡದ ಹಿರಿ ಹೊನಲಿನಲ್ಲಿ ಒಂದಾಗಿ ಹರಿಯಿರೆಂದು ಕನ್ನಡೇತರರಿಗೆ ಬುದ್ಧಿ ಹೇಳುವುದನ್ನು ಬಿಟ್ಟು, ಕನ್ನಡಕ್ಕಾಗಿ ಕೈಯೆತ್ತುವ ಕನ್ನಡಿಗರನ್ನು ದುರಾಗ್ರಹಿಗಳೆಂಬ ಹಲವರನ್ನು, ಕನ್ನಡಿಗರ ಚಂದಾ ಹಣದಿಂದಲೇ ಕೊಬ್ಬಿ ಕನ್ನಡ ಹೋರಾಟದ ಬಗ್ಗೆ ಗೇಲಿ ಮಾಡುವ ಕೆಲವು ಪತ್ರಿಕೆಗಳನ್ನು ಭಾತೃವಾತ್ಸಲ್ಯದಿಂದಲೇ ಕಿವಿ ಹಿಂಡಿ ದಾರಿಗೆ ತರಬೇಕಿದೆ. ಕನ್ನಡಕ್ಕಾಗಿ ಹೋರಾಡುವುದು ದೇಶದ್ರೋಹ, ಹಿಂದಿ ಕಲಿಯದಿರುವುದು ದೇಶದ್ರೋಹ, ಸಂಸ್ಕೃತ ಕಲಿಯದಿರುವುದು ಧರ್ಮದ್ರೋಹವೆಂದು ವಾದಿಸುವವರಿಗೆ ನನ್ನ ಉತ್ತರ ಸಿದ್ಧ: ಶ್ರೀ ಸಾಮಾನ್ಯರ ನೀರಿಳಿಯದ ಗಂಟಲಲ್ಲಿ ಕಡುಬು ತುರುಕಲು ಹೊರಟಿರುವ ನೀವು ದೇಶದ್ರೋಹಿಗಳು! ದೇಶರಕ್ಷಣೆಯ ಸಂದರ್ಭ ಬಂದಾಗ ಎಂದಿನಂತೆ ಆಗಲೂ ಕನ್ನಡವೀರರು ತಮ್ಮ ರಕ್ತ ತರ್ಪಣವನ್ನು ಕೊಡಲು ಧಾವಿಸುವರೆಂಬುದನ್ನು ಮರೆಯದಿರಿ; ಸರ್ವಧರ್ಮ ಸಮಭಾವ, ಸರ್ವಭಾಷಾ ಸಹಿಷ್ಣುತೆಗಳು ಕನ್ನಡಿಗರ ಹುಟ್ಟುಗುಣಗಳೆಂಬುದನ್ನು ಮರೆಯದಿರಿ! ನಮ್ಮ ಕನ್ನಡತನವನ್ನು ಬಲಿಕೊಟ್ಟು ನಿಮ್ಮಿಂದ ದೇಶಭಕ್ತರೆಂಬ ಮೆಚ್ಚೋಲೆ ಪಡೆಯಲು ಈ ನೆಲ ನಮಗೆ



ಜನ್ಮನಿತ್ತಿಲ್ಲ! ಈ ನೆಲಕ್ಕೆ ನಿಷ್ಠರಾಗಿ ಇದ್ದುಕೊಂಡೇ ಸಮಗ್ರ ರಾಷ್ಟ್ರವು ಅಜೇಯವೂ, ಅಭೇದ್ಯವೂ, ಅಖಂಡವೂ ಆಗಿ ಉಳಿಯುವಂತೆ ಹೋರಾಡುವೆವು ನಾವು. ನಮಗೆ ಉಪಾಯ ವೇದಾಂತ ಹೇಳಲು ಬರಬೇಡಿರಿ. ಸಮಸ್ತ ಭಾರತಕ್ಕೆ, ಸಮಸ್ತ ಪ್ರಪಂಚಕ್ಕೆ ಹಾಸಲೂ, ಹೊದೆಯಲೂ, ಉಡಲೂ, ಇಡಲೂ ಸಾಕಾಗುವಷ್ಟು ವೇದಾಂತ-ಸಿದ್ಧಾಂತಗಳನ್ನು ಕೊಟ್ಟವರು ನಮ್ಮ ಹಿರಿಯರು ಎಂಬುದನ್ನು ಮರೆಯದಿರಿ!

ಕನ್ನಡೇತರರನ್ನು, ಭಾಷಿಕ ಅಲ್ಪ ಸಂಖ್ಯಾತರನ್ನು ಒಲಿದು ಒಲಿಸಿಕೊಳ್ಳೋಣ. ಅವರವರ ತಾಯ್ನುಡಿಗಳ ಎಲ್ಲ ಬೆಳವಣಿಗೆಗೆ ಎಲ್ಲ ಅವಕಾಶ ಸೌಕರ್ಯಗಳನ್ನಿತ್ತು, ಅವರು ಮನೆಯಲ್ಲಿ ತೆಲುಗು, ತಮಿಳು, ಉರ್ದೂ, ಮರಾಠಿಗಳವರಾಗಿ, ಹೊರಗೆ ಕನ್ನಡಿಗರಲ್ಲಿ ಕನ್ನಡಿಗರಾಗಿ ಒಂದಾಗಿ ಮುಂದಾಗುವಂತೆ ಅವರಿಗೆ ಚೆನ್ನಾಗಿ ಕನ್ನಡ ಕಲಿಸೋಣ; ಅವರಲ್ಲಿ ಮಾಸ್ತಿ, ಬೇಂದ್ರೆ, ಕಸ್ತೂರಿ, ಕೈಲಾಸಂ, ನಿಸ್ಸಾರ ಅಹಮದ್, ಅಕಬರ ಆಲಿ, ಸನದಿಯಂಥವರ ಸಂಖ್ಯೆ ಸಾವಿರ ಮಡಿ ಹೆಚ್ಚುವಂತೆ ಪ್ರಯತ್ನಿಸೋಣ. ತ್ರಿಭಾಷಾಸೂತ್ರ ಹುಟ್ಟಿದ ದಿನವೇ ಸತ್ತಿದೆ—ಹಿಂದೀ ರಾಜ್ಯಗಳಲ್ಲಿ! ಅದನ್ನು ಬದುಕಿಸುವ ಪ್ರಯತ್ನವು ಹಿಂದೀ ರಾಜ್ಯಗಳಲ್ಲಿ ಇತರ ಭಾರತೀಯ ಭಾಷೆಗಳಲ್ಲಿ ಒಂದನ್ನು ಕಡ್ಡಾಯ ಮಾಡುವುದರ ಮೂಲಕ ಈಗಲಾದರೂ ಪ್ರಾರಂಭವಾಗಲಿ. ಅದುವರೆಗೆ, ಇಲ್ಲಿ ಕನ್ನಡವೊಂದೇ ಕಡ್ಡಾಯವಾದ ಭಾಷೆಯಾಗಿ, ತಮಗೆ ಇಷ್ಟವಿರುವ ಇನ್ನೆರಡು ಭಾಷೆಗಳನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವನ್ನು ಕಲಿಯುವವರಿಗೆ ಕೊಡೋಣ. ಗೋಕಾಕ ವರದಿಯನ್ನು ಆಧರಿಸಿ ಹೊರಟ ಸರಕಾರದ ಆಜ್ಞೆ ನೂರಕ್ಕೆ ನೂರರಷ್ಟು ಅನುಷ್ಠಾನಗೊಂಡರೂ ಸರಿಯೇ.

## ಕನ್ನಡ ಸಾಹಿತ್ಯದ ಸುವರ್ಣಯುಗ

ಸಮಗ್ರ ಕನ್ನಡ ಸಾಹಿತ್ಯದ ಸಿಂಹಾವಲೋಕನವನ್ನು ಅಧ್ಯಕ್ಷ ಭಾಷಣಕ್ಕಿರುವ ಪರಿಮಿತ ಕಾಲಾವಕಾಶ ಕಾರಣವಾಗಿ ಕೈಬಿಡಲೇಬೇಕು ನಾನು. ಹೊಸ ಕನ್ನಡ ಸಾಹಿತ್ಯದ ಹರಹು, ಹಬ್ಬುಗೆ, ಹೊಲಬು, ಹುರುಳು-ತಿರುಳುಗಳ ಮೇಲೆ ಹಕ್ಕಿನೋಟವೊಂದನ್ನು ಹರಿಸುವುದೂ ಸಾಧ್ಯವಿಲ್ಲ. ಅದರ ವಿಸ್ತಾರ, ವೈಪುಲ್ಯ, ವೈವಿಧ್ಯಗಳು ಒಂದು ವಿವಿಧೋದ್ದೇಶದ ಉಪನ್ಯಾಸದಲ್ಲಿ ಅಡಕವಾಗುವಂಥವಲ್ಲ. ಈ ಹೊಸ ಬೆಳೆಯ ಹೆಚ್ಚಳವನ್ನರಿತುಕೊಳ್ಳಲು ಹಿಂದಿದ್ದ ಸ್ಥಿತಿಯನ್ನು ಸ್ಮರಿಸಿಕೊಳ್ಳೋಣ. ಇದೇ ನಗರದಲ್ಲಿ ೫೯ರಷ್ಟು ಹಿಂದೆ ಜರುಗಿದ ೧೪ನೆಯ ಕನ್ನಡ ಸಮ್ಮೇಳನಾಧ್ಯಕ್ಷಪೀಠದಿಂದ ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರು ಸರಿಯಾಗಿಯೇ ಸಾರಿದರು: ...."ಹಿಂದಿನ ಸಾಹಿತ್ಯವು ಎಷ್ಟೇ ಉತ್ತಮ ಭಾಗಗಳನ್ನು ಒಳಗೊಂಡಿದ್ದರೂ, ನಮ್ಮ ರಕ್ತದಲ್ಲಿ ಕೂಡಿ ಬಂದು ಎಷ್ಟೇ ನಮ್ಮ ಅಭಿಪ್ರಾಯಗಳಿಗೆ ಒಗ್ಗಿ ಬಂದಿದ್ದರೂ ಅದು ಪುರಾತನ ಪ್ರಪಂಚಕ್ಕೆ ಸೇರಿದುದು. ಅಲ್ಲಿ ಹುಟ್ಟಿದುದು, ಬೆಳೆದುದು. ನೂತನ ಪ್ರಪಂಚದಲ್ಲಿ ಹುಟ್ಟಿ ಬೆಳೆಯುತ್ತಿರುವ ನಮಗೆ

ಬೇಕಾದ ರುಚಿಗಳನ್ನೆಲ್ಲ, ಸಂಸ್ಕಾರಗಳನ್ನೆಲ್ಲ ಅದು ಕೊಡಲಾರದು. ಯಾವ ವೃಕ್ಷದಲ್ಲಿ ಯಾವ ಫಲವನ್ನು ಹುಡುಕುವುದು ? ಈ ನೂತನ ಪ್ರಪಂಚಕ್ಕೆ, ಈ ನೂತನ ಸಮಾಜದ ಅಭಿಲಾಷೆಗಳು, ರುಚಿಗಳು, ಜೀವನ ವ್ಯಾಪಾರಗಳು ಇವುಗಳಿಗೆ ಅನುಕೂಲಿಸುವಂತಹ ಹೊಸ ಸಾಹಿತ್ಯವನ್ನು ನಿರ್ಮಾಣ ಮಾಡಿದಲ್ಲದೆ ಕನ್ನಡ ಭಾಷೆಯ ಸೇವೆಗಾಗಲಿ, ಕನ್ನಡ ದೇಶದ ಏಳಿಗೆಗಾಗಲಿ ನಾವು, ಈ ಪರಿಷತ್ತು, ಸಾಕಾದಷ್ಟು ಶ್ರದ್ಧೆಯನ್ನು ವಹಿಸಿ, ಋಣವನ್ನು ತೀರಿಸಿದಂತಾಯಿತೆಂದು ನಾನು ಹೇಳಲಾರೆನು."

ಹೀಗೆ ಸಾರಿ ಈ ಹೊಸ ಸಾಹಿತ್ಯ ಎಂತಿರಬೇಕೆಂಬುದನ್ನು ನಿತಾಂತ ಮನೋಹರವಾಗಿ ವಿವರಿಸಿದದರು. ಈಗ, ಸುಮಾರು ಆರು ದಶಕಗಳ ತರುವಾಯ, ಅವರ ಜನ್ಮ ಶತಮಾನೋತ್ಸವದ ಸವಿ ನೆನಪಿಗಾಗಿಯೇ ಪ್ರಕಟವಾಗಿರುವ 'ಶ್ರೀನಿಧಿ'ಯ ಪ್ರಸ್ತಾವನೆಯಲ್ಲಿ ಶ್ರೇಷ್ಠ ಕವಿಗಳೂ, ಶ್ರೇಷ್ಠ ವಿಮರ್ಶಕರೂ ಆಗಿರುವ ಡಾ|| ಜಿ. ಎಸ್. ಶಿವರುದ್ರಪ್ಪನವರು ಬರೆದಿರುವುದನ್ನು ನೋಡೋಣ : "ಆಧುನಿಕ ಸಾಹಿತ್ಯ ಹಿಂದೆಂದೂ ಕಾಣದ ಸಮೃದ್ಧಿಯನ್ನೂ, ವೈವಿಧ್ಯವನ್ನೂ ಕಂಡಿದೆ. ಸುಮಾರು ಒಂದೂವರೆ ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿರುವ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಿಜವಾದ ಅರ್ಥದಲ್ಲಿ ಸುವರ್ಣಯುಗವೆಂದು ಕರೆಯಬಹುದಾದ ಕಾಲವೆಂದರೆ ನಿಸ್ಸಂದೇಹವಾಗಿಯೂ ಕಳೆದ ಆರೇಳು ದಶಕಗಳ ಹೊಸಗನ್ನಡ ಸಾಹಿತ್ಯದ ಕಾಲವೇ ಎಂದು ನನ್ನ ತಿಳುವಳಿಕೆ. ಯಾಕೆಂದರೆ ಹಿಂದೆ ಎಂದೂ ಹೀಗೆ ಏಕಕಾಲಕ್ಕೆ ಈ ಎತ್ತರದ ಇಷ್ಟೊಂದು ಸಾಹಿತಿಗಳು—ಪಂಜೆ, ಪೈ, ಶ್ರೀ, ಕೈಲಾಸಂ, ಡಿ.ವಿ.ಜಿ., ಎ.ಆರ್.ಕೃ., ಮಾಸ್ತಿ, ಬೇಂದ್ರೆ, ಕುವೆಂಪು, ಕಾರಂತ, ವೀ.ಸೀ., ಶ್ರೀರಂಗ, ಪು.ತಿ.ನ., ಡಿ.ಎಲ್.ಎನ್., ತೀ.ನಂ.ಶ್ರೀ., ಅ.ನ.ಕೃ., ಗೋಕಾಕ ಮತ್ತು ಇನ್ನೂ ಹಲವರು—ಇದ್ದುದಾಗಲಿ, ಈ ವೈವಿಧ್ಯಮಯವಾದ ಸಾಹಿತ್ಯ ನಿರ್ಮಿತಿಗೆ ತೊಡಗಿ ಸಾಹಿತ್ಯವನ್ನು ಬಹು ಮುಖವಾಗಿ ಶ್ರೀಮಂತಗೊಳಿಸಿದ್ದಾಗಲಿ ಕಂಡು ಬರುವುದಿಲ್ಲ."

ಈ ನಾಮ-ಸೂಚಿಗೆ ಸೇರಬೇಕಾದ ಇನ್ನೂ ಹಲವರನ್ನು ನೆನೆದಾಗ, ನಾಲ್ಕು ಜ್ಞಾನಪೀಠ ಪ್ರಶಸ್ತಿಗಳನ್ನೂ, ಒಂದು ಕಬೀರ ಪ್ರಶಸ್ತಿಯನ್ನೂ, ಹಲವು ರಾಷ್ಟ್ರ ಮಟ್ಟದ ಪುರಸ್ಕಾರಗಳನ್ನೂ ಕನ್ನಡ ಸಾಹಿತಿಗಳು ಪಡೆದಿರುವುದನ್ನು ಸ್ಮರಿಸಿಕೊಂಡಾಗ, ನೋಬೆಲ್ ಪುರಸ್ಕಾರಕ್ಕೂ ಅರ್ಹವಾದ ಕೃತಿಗಳಿವೆ ಕನ್ನಡದಲ್ಲಿ ಎಂಬುದನ್ನು ಪರಿಭಾವಿಸಿದಾಗ ಈ ಅಭಿಪ್ರಾಯ—ಸಮೃದ್ಧಿ ವೈವಿಧ್ಯಗಳನ್ನೇ ಗಮನಿಸಿ ವ್ಯಕ್ತಗೊಂಡ ಅಭಿಪ್ರಾಯ-ಅಸಾಧುವೇನೂ ಅಲ್ಲವೆಂದೆನಿಸುತ್ತದೆ. ಇದನ್ನು ಪುಷ್ಟೀಕರಿಸುವಂತೆ ಹೋದ ವರ್ಷ ಅಕ್ಟೋಬರ್ ೨೫ರಿಂದ ೨೭ರವರೆಗೆ ಮುಂಬೈಯಲ್ಲಿ ಜರುಗಿದ ಅರವತ್ತನೆಯ ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಶ್ರೀ ವಿಶ್ರಾಮ ಬೇಡೇಕರ್ ಅವರು ಹೀಗೆ ಹೇಳಿದರೆಂದು ವರದಿಯಾಗಿದೆ:



[೧೭-೧೧-೧೯೮೭ರ ಸಂಯುಕ್ತ ಕರ್ನಾಟಕದಲ್ಲಿ] "ಮರಾಠಿ ಸಾಹಿತ್ಯ ಸಂಸ್ಕೃತಿಯ ಹಿರಿಮೆಯ ಬಗೆಗೆ ನಾವು ಅಭಿಮಾನ ಪಡುತ್ತೇವೆ. ಆದರೆ ಈವರೆಗೆ ಕೇವಲ ಒಬ್ಬ ಮರಾಠಿ ಸಾಹಿತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಕನ್ನಡದಲ್ಲಿ ನಾಲ್ವರಿಗೆ, ಗುಜರಾತಿಯಲ್ಲಿ ಇಬ್ಬರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಆ ಭಾಷೆಗಳ ಸಾಹಿತ್ಯ ಬಹು ಮುಂದೆ ಹೋಗಿದೆ."

ಗುಣಕ್ಕೆ ಮತ್ಸರವಿಲ್ಲವೆಂಬುದಕ್ಕೆ ಇನ್ನೊಂದು ಉದಾಹರಣೆಯೆನ್ನಿಸಿಕೊಂಡ ಶ್ರೀ ವಿಶ್ರಾಮ ಬೇಡೇಕರರಿಗೆ ಧನ್ಯವಾದಗಳು. ಸಂಶೋಧನೆ, ಗ್ರಂಥ ಸಂಪಾದನೆ, ವಿಮರ್ಶೆ, ಶಾಸ್ತ್ರ ಸಾಹಿತ್ಯ, ವಿಜ್ಞಾನ, ಮಾನವಿಕ ವಿಜ್ಞಾನ ಇತ್ಯಾದಿ ಸೃಜನೇತರ ಕ್ಷೇತ್ರಗಳ ಕ್ಷಿತಿಜಗಳನ್ನು ವಿಸ್ತರಿಸಿದವರನ್ನೂ, ಅತ್ಯುನ್ನತಿಗೆ ಅತಿ ಸಮೀಪದಲ್ಲಿರುವ ಸೃಜನಶೀಲ ಸಾಹಿತಿಗಳನ್ನೂ ಗಣನೆಗೆ ತೆಗೆದುಕೊಂಡರಂತೂ ಈಗಿನ ಕನ್ನಡ ಸಾಹಿತ್ಯ ಬಹು ಮುಂದೆ ಹೋಗಿದೆಯೆಂಬ ಶ್ರೀ ಬೇಡೇಕರರ ಸದಭಿಪ್ರಾಯ ಇನ್ನೂ ದೃಢಪಡುತ್ತದೆ. ಇಂಥ ಅಪಾರ ಸಾಹಿತ್ಯರಾಶಿಯ ಮೌಲ್ಯಾಂಕನ ಸಾಧ್ಯವೆ ಒಂದು ಅಧ್ಯಕ್ಷ ಭಾಷಣದಲ್ಲಿ ?

ಇಷ್ಟು ಮಾತ್ರ ಹೇಳಬಲ್ಲೆ : ಸೇವಾ ಜೀವನದಲ್ಲಿ ಸುಮಾರಾಗಿ, ನಿವೃತ್ತ ಜೀವನದಲ್ಲಿ ವಿಶೇಷವಾಗಿ ಆಧುನಿಕ ಕನ್ನಡ ಸಾಹಿತ್ಯದ ಉತ್ತಮ ಕೃತಿಗಳನ್ನು-ಅವು ಯಾವ ಹಣೆಪಟ್ಟಿಯನ್ನೇ ಹಚ್ಚಿಕೊಂಡಿರಲಿ-ಸಮಾನ ಆಸಕ್ತಿಯಿಂದ ಓದಿ ಆನಂದಿಸಿದ್ದೇನೆ. ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ, ಸಮನ್ವಯ, ಬಂಡಾಯ, ದಲಿತ ಇತ್ಯಾದಿ ಆಂದೋಲನಗಳ ಆಶಯಗಳನ್ನೂ, ಪ್ರೇರಣೆಗಳನ್ನೂ, ಧೋರಣೆಗಳನ್ನೂ ಯಾವ ಪೂರ್ವಾಗ್ರಹಕ್ಕೂ ಒಳಗಾಗದೆ ಅರಿತುಕೊಳ್ಳಲು ಪ್ರಯತ್ನಿಸಿದ್ದೇನೆ. ಎಲ್ಲರ ಉದ್ದೇಶ ಆಶಯಗಳೂ ಅವರವರ ಕೃತಿಗಳಲ್ಲಿ ಇಡಿಯಾಗಿ ಈಡೇರಿವೆಯೆಂದಾಗಲಿ, ಎಲ್ಲರ ಎಲ್ಲ ಕೃತಿಗಳೂ ಶ್ರೇಷ್ಠತೆಯ ಒರೆಗಲ್ಲಿಗೆ ನಿಲ್ಲಬಲ್ಲುವೆಂದಾಗಲಿ ಹೇಳಲಾಗುವುದಿಲ್ಲ. ಒಂದೊಂದು ಆಂದೋಲನವೂ ಕೆಲವು ಅತ್ಯುತ್ತಮ ಕೃತಿಗಳನ್ನೂ, ಅನೇಕ ಸಾಧಾರಣ ಕೃತಿಗಳನ್ನೂ ಕೊಟ್ಟಿದೆ. ಇದು ಸಹಜ. ಇದು ಅನಿವಾರ್ಯ. ಜೇಡರದಾಸಿಮಯ್ಯನೆಂದಂತೆ "ಹುಣಸೆಯ ಹೂವೆಲ್ಲ ಕಾಯಾಗುವುದಿಲ್ಲ." ಆದರೆ ಅವುಗಳಲ್ಲಿ ಕೆಲವಾದರೂ ಕಾಯಾಗಿ ಹಣ್ಣಾಗಬೇಕಾದರೆ ಹುಣಸೆಮರ ಹೊರಲಾರದಷ್ಟು ಹೂ ಬಿಡಲೇ ಬೇಕು. ಈ ದೃಷ್ಟಿಯಿಂದ ಅಲ್ಪ ಸಂಖ್ಯೆಯ ಅಸಾಧಾರಣ ಕೃತಿಗಳ ಉದಯಕ್ಕೆ ಬಹುಸಂಖ್ಯೆಯ ಸಾಧಾರಣ ಕೃತಿಗಳ ಜನನ ಅಪರಿಹಾರ್ಯವೆಂದೇ ಹೇಳಬೇಕು.

ಹಳೆಯ ಪರಿಭಾಷೆಯಲ್ಲಿಯೇ ಹೇಳುವುದಾದರೆ, ನವೋದಯವು ಭಾವಕ್ಕೆ, ಕಲ್ಪನೆಗೆ, ನಾದಕ್ಕೆ, ಆದರ್ಶವಾದಕ್ಕೆ ಹೆಚ್ಚು ಒತ್ತು ಕೊಟ್ಟಿದೆಯೆಂದೂ, ನವ್ಯವು ಬುದ್ಧಿಗೆ, ರೂಪಕ್ಕೆ, ಭಾಷೆಗೆ, ವಾಸ್ತವತೆಗೆ ಹೆಚ್ಚು ಒತ್ತು ಕೊಟ್ಟಿದೆಯೆಂದೂ ಹೇಳಬಹುದಾಗಿದೆ. ಆದರೆ, ಭಾವೋತ್ಕಟತೆಯ ಜೊತೆಜೊತೆಗೆ ಚಿಂತನಪರತೆಯನ್ನೂ

ಭಾಷೆ ರೂಪಗಳಲ್ಲಿ ಪ್ರಯೋಗಶೀಲತೆಯನ್ನೂ ದುಡಿಸಿಕೊಂಡ ನವೋದಯ ಕೃತಿಗಳಾಗಲಿ, ಬೌದ್ಧಿಕತೆಯ ಜೊತೆಜೊತೆಗೆ ಭಾವೋತ್ಕರ್ಷವನ್ನೂ, ಕಲ್ಪಕತೆಯನ್ನೂ, ನಾದಶಕ್ತಿಯನ್ನೂ ಬಳಸಿಕೊಂಡ ನವ್ಯಕೃತಿಗಳಾಗಲಿ ಹುಟ್ಟಿಯೇ ಇಲ್ಲವೆಂದು ಹೇಳಲಾಗದು. ಹುಟ್ಟಿವೆ ; ಹುಟ್ಟಿ ಆಯಾ ಅಂದೋಲನಗಳನ್ನು ಇನ್ನಷ್ಟು ಸಾರ್ಥಕಗೊಳಿಸಿವೆ. ಇವುಗಳಲ್ಲಿ ಯಾವುದೊಂದನ್ನೂ ಕಡೆಗಣಿಸಿದರೂ ಅಷ್ಟರಮಟ್ಟಿಗೆ ಆ ಕೃತಿ ಅಪೂರ್ಣವಾಗುವುದೆಂಬ ಅರಿವು ಮೂಡಿಸಿವೆ. ಎಲ್ಲವನ್ನೂ ಜೀರ್ಣಿಸಿಕೊಂಡು ತನ್ನದನ್ನಾಗಿ ಮಾಡಿಕೊಳ್ಳುವ, ಏಕರೂಪವಾಗಿಸಿಕೊಳ್ಳುವ ಅಗಸ್ತ್ಯಶಕ್ತಿ ಕೃತಿಕಾರನಿಗೆ ಬಂದಾಗಲೇ ಅವರ ಕೃತಿ ಅನನ್ಯತೆಯೊಡನೆ ಬೆಳಗುತ್ತದೆ.

ಆಚಾರ್ಯ 'ಶ್ರೀ' ಅವರು ತಮ್ಮ ಉಪರಿ ನಿರ್ದಿಷ್ಟ ಅಧ್ಯಕ್ಷ ಭಾಷಣದಲ್ಲಿ ಇನ್ನೆರಡು ಮಹತ್ವದ'ಮಾತುಗಳನ್ನು ಹೇಳಿ ಹೋಗಿದ್ದಾರೆ : 'ಹಿಂದುಳಿದಿರುವ ಜನಸಾಮಾನ್ಯದ ಮುಸುಕು ಮುಚ್ಚಿರುವ ಜ್ಞಾನವನ್ನೂ, ಆತ್ಮಶಕ್ತಿಯನ್ನೂ ಬಿಡುಗಡೆ ಮಾಡಿದರೆ, ಎಷ್ಟು ಸಾಹಿತ್ಯ ಸಂಪತ್ತು ಹೊರಕ್ಕೆ ಹೊಮ್ಮುವುದೋ ನಾವು ಬಲ್ಲೆವೆ ?" ಎಂಬುದೊಂದು : "ಸಾಹಿತ್ಯ, ಮಾನವ ಜೀವನದ ಪುನರ್ನಿರ್ಮಾಣ ಕಾರ್ಯದಲ್ಲಿ ಬದ್ಧಕಂಕಣನಾಗಿರುವ ವೀರನ ಕೈಯ ಖಡ್ಗವೂ ಅಹುದೆಂದು ತಿಳಿದಿರುವೆವು ", ಎಂಬುದು ಇನ್ನೊಂದು, ಅವರ ಈ ಎರಡು ಆಸೆಗಳೂ ಇಂದು ದಲಿತ ಹಾಗೂ ಬಂಡಾಯ ಸಾಹಿತ್ಯಾಂದೋಲನಗಳ ರೂಪದಲ್ಲಿ ಈಡೇರಿವೆಯೆಂದು ನನಗೆನಿಸುತ್ತದೆ. ಈ ಎರಡೂ ಆಂದೋಲನಗಳ ಧ್ಯೇಯವಾಕ್ಯಗಳನ್ನೋದಿದಾಗ ಈ ಅನಿಸಿಕೆ ಹುಟ್ಟಿದೆ. ಇದು ಎಷ್ಟರಮಟ್ಟಿಗೆ ಸರಿಯೆಂಬುದನ್ನು ನಾನೇ ಹೇಳಲಾರೆ.

ಇಷ್ಟು ಮಾತ್ರ ನಿಜ : ಪ್ರಗತಿಶೀಲ, ಬಂಡಾಯ ಮತ್ತು ದಲಿತ ಚಳುವಳಿಗಳಿಂದ ವಾಸ್ತವಲೋಕ, ಕಾವ್ಯಲೋಕ, ಲೋಕಸತ್ಯ—ಕಾವ್ಯಸತ್ಯಗಳು ಬೇರೆ ಬೇರೆ ಎಂಬುದು ಬಯಲಾಗಿ,ಸಾಹಿತಿಗಳು ಹಸ್ತಿದಂತದ ಗೋಪುರಗಳಿಂದ ಕೆಳಗಿಳಿದು, ವ್ಯಕ್ತಿ-ಕೇಂದ್ರಿತ ನೆಲೆಗಳಿಂದ ಹೊರಗೆ ಬಂದು, ಸಾಮಾಜಿಕ ಹೊಣೆಗಾರಿಕೆಯನ್ನು ಹೊರಲು, ಸಮಾಜದಲ್ಲಿ ಆರೋಗ್ಯಕರವೂ ಆಮೂಲಾಗ್ರವೂ ಆದ ಬದಲಾವಣೆಗಳನ್ನು ತರಲು ಸಿದ್ಧರಾಗುವಂತಾಯಿತು. ಭಾವಪರ, ಚಿಂತನಪರ ಕೃತಿಗಳ ಜೊತೆಜೊತೆಗೆ ಜನಪರ ಕೃತಿಗಳೂ ಬರತೊಡಗಿ ಆಧುನಿಕ ಕನ್ನಡ ಸಾಹಿತ್ಯಕ್ಕೆ ಇನ್ನೂ ಹೆಚ್ಚಿನ ಸಮೃದ್ಧಿ-ವೈವಿಧ್ಯಗಳು, ಜೀವಕಳೆ-ಜೀವನ ಕಲೆಗಳು ದೊರೆಯುವಂತಾಯಿತು. 'ನೂರು ಮರ; ನೂರು ಸ್ವರ 'ವೆಂಬುದು ನಿಜವಾಗಿದೆಯಾದರೂ ಅವು 'ಒಂದಕ್ಕೊಂದು ಅತಿ ಮಧುರ'ವೆಂದೇ ಹೇಳಲಾಗದು. ಆ ಸ್ವರಗಳಲ್ಲಿ ಭಾವದ ಅನುಭಾವದ ಮಧುರ ಸ್ವರಗಳೂ ಇವೆ ; ಚಿಂತನದ ಚಮತ್ಕಾರದ ಸ್ವರಗಳೂ ಇವೆ ; ಜನಪರವಾದ ಅಬ್ಬರದ ಸ್ವರಗಳೂ ಇವೆ. ಇವು ಮೂರೂ ಮುಪ್ಪುರಿಗೊಂಡು ಹೊಸ ಜಗದ ಹೊಸ ಯುಗದ ಪ್ರಾಮಾಣಿಕ ಸ್ವರವಾದರೆ ಎಷ್ಟು ಚೆನ್ನ !



ಸಂತಸದ ಸಂಗತಿಯೆಂದರೆ ಆತ್ಮಸಮರ್ಥನೆಗಾಗಿ ಅನ್ಯದೂಷಣೆ. ಅವಹೇಳನಗಳು ಇಲ್ಲವಾಗಿ ಒಂದು ಬಗೆಯ ರಾಜಿಯ ವಾತಾವರಣ, ಸಹಜೀವನದ ವಾತಾವರಣ ನಿರ್ಮಿತವಾದಂತಿದೆ; ಪರಿಕಲ್ಪನಾತ್ಮಕ ವಿವರಗಳೇನೇ ಇರಲಿ, ಸೈದ್ಧಾಂತಿಕ ವಿಭಿನ್ನತೆಗಳೇನೇ ಇರಲಿ, ನಿರೂಪಣ ಸರಣಿಗಳೇನೇ ಇರಲಿ, ಪ್ರತಿಪಾದಿತ ವಸ್ತು ಮೌಲ್ಯಗಳೇನೇ ಇರಲಿ—ಸಾರವತ್ತಾದುದು ಎಲ್ಲಿಯೇ ಇದ್ದರೂ ಅದನ್ನು ಗುರುತಿಸಿ ಗೌರವಿಸುವ ಬುದ್ಧಿ ಬೆಳೆಯುತ್ತಿರುವಂತಿದೆ ; ನವೋದಯದ ಕೆಲವರು ನವ್ಯದಿಂದ ಪ್ರಭಾವಿತರಾಗಿಯೂ ಸಂಪೂರ್ಣವಾಗಿ ನವ್ಯರಾಗದೆ ಸಮನ್ವಯ ಮಾರ್ಗವೊಂದನ್ನು ಕಂಡು ಕೊಂಡುದೂ ಇದೆ ; ನವ್ಯದವರು ಕೆಲವರು ಮತ್ತೆ ನಾದಲೋಲರಾಗಿ ನಲ್ವಾಡುಗಳನ್ನು ಬರೆದುದೂ ಇದೆ ; ಜನಪರ ಸಾಹಿತಿಗಳಲ್ಲಿ ಸಿ. ವೀರಣ್ಣನಂಥವರು, "ಇಡಿಯ ಸಾಮಾಜಿಕ ಸಂದರ್ಭದಲ್ಲಿ ಹೋರಾಟ ತನ್ನಂತೆಯೇ ತುಳಿತಕ್ಕೊಳಗಾದವರ ನಡುವಿನ ಸಂಬಂಧದಲ್ಲಿದೆಯೆಂಬುದನ್ನು ದಲಿತ ಹೋರಾಟಗಾರರು ಗುರುತಿಸಿಕೊಳ್ಳದೆ ಹೋದರೆ, ಎರಡೂ ಕಡೆಯ ಉಳ್ಳವರಿಗೆ ಅವರು ಉಪಯೋಗವಾಗುವ ಅಪಾಯವಿದೆ. ಜಾತಿಯ ಆಧಾರದ ಮೇಲೆ ಹೋರಾಟ ಸಾಗಿಸುವುದಕ್ಕೆ ಹೋದರೆ ಆಗುವ ಅಪಾಯ ಇದು. ಜಾತಿ ಶೋಷಣೆಯ ಅನೇಕ ಅಂಗಗಳಂತೆಯೇ ಒಂದು ಪ್ರಮುಖ ಅಂಗವೆಂಬುದು ನಿಜ. ಆದರೆ ಅದನ್ನು ಗುರುತಿಸಿಕೊಂಡೇ, ಆ ನೆಲೆಯನ್ನು ಕತ್ತರಿಸಲು ಎಲ್ಲಿಂದ ಆರಂಭಿಸಬೇಕೆಂಬುದನ್ನು ತಿಳಿಯದಿದ್ದರೆ, ದೈವವಾದವನ್ನು ತುಳಿಯಲು ತರ್ಕದ ನೆಲೆಯಲ್ಲೇ ನಿಂತ ನಿರೀಶ್ವರವಾದಿಗಳು ವಿಫಲರಾದಂತೆ ಈ ಚಳುವಳಿಯೂ ಸೋಲುತ್ತದೆ " ಎಂದು ವಸ್ತುಸ್ಥಿತಿಯನ್ನು ತೆರೆದು ತೋರಿಸಿರುವುದೂ ಇದೆ ; ಮೊದಲಿನಿಂದಲೂ ವಿಚಾರಕ್ರಾಂತಿಗೆ ಮೊದಲ ಮನ್ನಣೆಯನ್ನಿತ್ತ ರಾಷ್ಟ್ರಕವಿ ಕುವೆಂಪು ಅವರು ತಮ್ಮ ಕೊನೆಯ ಸಂದೇಶವಾಗಿ, "ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ" ಎಂಬ ಪಂಚಮಂತ್ರಗಳನ್ನೂ, 'ಮನುಷ್ಯಜಾತಿ ತಾನೊಂದೆ ವಲಂ' ಎಂಬ ಸೂತ್ರದ ಸಂಪೂರ್ಣ ಸ್ವೀಕಾರ, ವರ್ಣಾಶ್ರಮ ಧರ್ಮದ ಧಿಕ್ಕಾರ, ಜಾತಿ ಪದ್ಧತಿಯ ನಿರ್ಮೂಲನ, ಮತದ ನಿರಾಕರಣ ಹಾಗೂ ಅಧ್ಯಾತ್ಮದ ಅಂಗೀಕಾರ, ವಿಶ್ವಮಾನವನ ನಿರ್ಮಾಣ, ಸ್ವಮತಿಯೊಪ್ಪುವ ಮತವನ್ನೂ ಸ್ವೀಕರಿಸುವ ಸ್ವಾತಂತ್ರ್ಯ, ಏಕೈಕ ಪರಮ ಪೂಜ್ಯ ಗ್ರಂಥ ಪರಿಕಲ್ಪನೆಯ ನಿರಾಕರಣಗಳೆಂಬ ಸಪ್ತ ಸೂತ್ರಗಳನ್ನು ಸಾರಿದುದೂ ಇದೆ. ಇವೆಲ್ಲವುಗಳ ಅಂತರ್ಮಂಥನ, ಅಂತರ್‌ಪರಾಗೀಕರಣ ಎಲ್ಲೆಡೆಗಳಲ್ಲಿಯೂ ನಡೆದು ನೂತನ ಮಾರ್ಗವೊಂದು ನಿರ್ಮಾಣಗೊಳ್ಳುತ್ತ ನಡೆದಿರುವಂತೆ ಭಾಸವಾಗುತ್ತಿದೆ. ಆದರೆ ಅದರ ಆಕಾರ ಇನ್ನೂ ಅಸ್ಪಷ್ಟ. ಇಂದಿನ ದಾರಿಗಳ ಕೂಡುದಾರಿ ಅದಾಗುವುದೋ, ಬೇರೆ ದಾರಿಯೇ ಆಗುವುದೋ ಕಾದುನೋಡಬೇಕೆಂದು ಕೈಕಟ್ಟಿ ಕುಳಿತುಕೊಳ್ಳದೆ ಅದರ ಬಗ್ಗೆ ಈಗಲೇ ಅರ್ಥಪೂರ್ಣ ಜಿಜ್ಞಾಸೆ-ಚರ್ಚೆಗಳು ಪ್ರಾರಂಭವಾಗಬೇಕು. ಈಗಲೇ, ಇಲ್ಲಿಯೇ ಅದು ಪ್ರಾರಂಭವಾದರೆ ಸಂತೋಷ.

ಭಾರತೀಯ ಸಾಹಿತ್ಯ, ಕನ್ನಡ ಸಾಹಿತ್ಯ ಮುಂದೆ ಯಾವ ದಾರಿ ಹಿಡಿಯ ಬಲ್ಲುದೆಂಬುದರ ಬಗ್ಗೆ ಭವಿಷ್ಯ ಹೇಳಬಲ್ಲವರಾರು ? ಆದರೆ, ಮುಂದಿನ ಮಾರ್ಗದ ಆಯ್ಕೆಗೆ ನೆರವಾಗಬಲ್ಲ ಮುಂಗೆಲಸಗಳಾವುವೆಂಬುದನ್ನು ವಿಚಾರಿಸುವುದು ಸಾಧ್ಯ. ಮೊದಲನೆಯದಾಗಿ, ಈ ರಾಷ್ಟ್ರದ ರಾಜ್ಯಾಂಗ ವ್ಯವಸ್ಥೆಯಲ್ಲಿ, ತದುತ್ಪಾದಿತ ರಾಜಕೀಯ ವ್ಯವಸ್ಥೆಯಲ್ಲಿ ಈಗ ಅಗತ್ಯವಾಗಿ ಆಗಬೇಕಾದ ಮಾರ್ಪಾಟುಗಳ ಬಗ್ಗೆ ಮುಕ್ತ ಮನಸ್ಸಿನ ಚರ್ಚೆ ನಡೆಯಬೇಕು. ರಾಷ್ಟ್ರ ವಿಭಜನೆಯು ಹೆತ್ತ ಹಿಂಸಾ ಕಾಂಡ, ಶರಣಾರ್ಥಿಗಳ ಸಮಸ್ಯೆ, ದೇಶೀಯ ಸಂಸ್ಥಾನಗಳ ಸಮಸ್ಯೆ—ಇತ್ಯಾದಿಗಳು ಮುತ್ತಿ, ಮಿದುಳನ್ನು ಕಿತ್ತು ತಿನ್ನುತ್ತಲಿದ್ದಾಗ ಸಂವಿಧಾನದ ಶಿಲ್ಪದಲ್ಲಿ ಸಹಜ ವಾಗಿಯೇ ಸರ್ವಶಕ್ತ ಕೇಂದ್ರ ಪ್ರಭುತ್ವದ ಸ್ಥಾಪನೆಗೆ ಪ್ರಾಥಮಿಕತೆ ದೊರೆಯಿತು. ಈಗಲೂ ಆ ಪ್ರಾಥಮಿಕತೆಗೆ ಚ್ಯುತಿ ಬರಕೂಡದು. ಬಲಿಷ್ಠ, ಅವಿಭಾಜ್ಯ ಹಾಗೂ ಅಜೇಯ ಭಾರತ ನಿರ್ಮಾಣವೇ ಭಾರತೀಯರೆಲ್ಲರ ಚರಮಗಮ್ಯ. ಆದರೆ ರಾಜ್ಯ ಗಳನ್ನು ದುರ್ಬಲಗೊಳಿಸಿ ಕೇಂದ್ರ ಬಲಾಢ್ಯವಾಗುವುದೆಂಬ ಭ್ರಮೆ ಹೋಗಬೇಕು ; ಇದು ಅಂಗಾಂಗಗಳನ್ನು ದುರ್ಬಲಗೊಳಿಸಿ ಅಂಗ ವಜ್ರಾಂಗವಾಗುವುದೆಂದು ವಾದಿಸಿ ದಂತೆ. ಸ್ವಾಯತ್ತ ರಾಜ್ಯಗಳೇ ಶಕ್ತಿಶಾಲಿ ಭಾರತದ ನಿರ್ಮಾಣಕ್ಕೆ ಮೂಲಾಧಾರ ವೆಂಬುದು ಈಗಲಾದರೂ ಅಂಗೀಕೃತವಾಗಬೇಕು. ಸರಕಾರಿಯಾ ಆಯೋಗ ಈ ದಿಶೆಯಲ್ಲಿ ಸೂಕ್ತ ಮಾರ್ಪಾಟುಗಳನ್ನು ಸೂಚಿಸುವುದೆಂದು ನಂಬಿದ್ದೇನೆ. ನನ್ನ ಮಟ್ಟಿಗೆ ಈ ಮಾರ್ಪಾಟುಗಳು ಬಹಳಿಲ್ಲ : ಸಬಲ ಕೇಂದ್ರವನ್ನು ದುರ್ಬಲಗೊಳಿಸು ದಂತೆ ಸ್ವಾಯತ್ತ ರಾಜ್ಯಗಳು ರೂಪಿತವಾಗಬೇಕು; ಹೊಸ ಹೊಸ ರಾಜ್ಯಗಳ ಬೇಡಿಕೆ ಯನ್ನು ನಿರ್ದಾಕ್ಷಿಣ್ಯವಾಗಿ ನಿರಾಕರಿಸಬೇಕು ; ಈಗಿರುವ ಗಡಿ ವಿವಾದಗಳನ್ನು, ನದೀ ನೀರಿನ ವಿವಾದಗಳನ್ನು ಮುತ್ಸದ್ದಿತನದಿಂದ ಬೇಗ ನಿವಾರಿಸಿ ಇವುಗಳ ಮೇಲೆ ಕೊನೆಯ ತೆರೆ ಎಳೆಯಬೇಕು ; ಇವುಗಳನ್ನೇ ರಾಜಕೀಯ ಚದುರಂಗದಾಟ ದಲ್ಲಿ ದಾಳಗಳನ್ನಾಗಿ ಬಳಸಿಕೊಳ್ಳುವುದು ನಿಲ್ಲಬೇಕು ; ಎರಡು ಸಲಕ್ಕಿಂತ ಹೆಚ್ಚು ಯಾರೂ ಪ್ರಧಾನಿಯಾಗಲಿ, ರಾಷ್ಟ್ರಪತಿಯಾಗಲಿ, ಮುಖ್ಯ ಮಂತ್ರಿಯಾಗಲಿ ಆಗ ಕೂಡದು ; ನಮ್ಮ ರಾಜ್ಯಪಾಲರ ಅಧಿಕಾರದ ಚೌಕಟ್ಟು ನಮ್ಮ ರಾಜ್ಯಪಾಲರ ರಾಯಭಾರಿಗಳ, ಚುನಾವಣಾ ಆಯುಕ್ತರ, ಪರಮೋಚ್ಚನ್ಯಾಯಾಲಯದ ನ್ಯಾಯ ಮೂರ್ತಿಗಳ, ಕೇಂದ್ರ ಲೋಕ ಸೇವಾ ಆಯೋಗದ ಸದಸ್ಯರ ನೇಮಕಾತಿಗಳಿಗೆ ಲೋಕಸಭೆಯ ಅನುಮತಿ ಅಗತ್ಯವಾಗ ಬೇಕು ; ನೂರಕ್ಕೆ ಮೂವತ್ತು ಮೂರರಷ್ಟು ಮತ ಪಡೆದವರೂ ಆರಿಸಿ ಬರಬಲ್ಲ ಈಗಿನ ಚುನಾವಣಾ ವ್ಯವಸ್ಥೆ ಹೋಗಿ ಫ್ರಾನ್ಸಿನಲ್ಲಿರುವ ಮಾದರಿಯನ್ನು, ತದ್ರೂಪಿ ಇತರ ಮಾದರಿಗಳನ್ನು ಆಧರಿಸಿ ನಿಚ್ಚಳ ಬಹುಮತ ಪಡೆದವರೇ ಆರಿಸಿ ಬರುವಂತೆ ಚುನಾವಣಾ ಕಾನೂನಿನಲ್ಲಿ ತಿದ್ದುಪಡಿಯಾಗಬೇಕು ; ರಾಜ್ಯಗಳು ಕಳಿಸುವ ಹೊಸ



ಶಾಸನಗಳಿಗೆ ಆರು ತಿಂಗಳುಗಳೊಳಗಾಗಿ ರಾಷ್ಟ್ರಪತಿಗಳ ಅಂಕಿತ ದೊರೆಯದಿದ್ದರೆ ಅವು ಅಂಗೀಕೃತವಾದಂತೆಯೇ ಎಂದು ಭಾವಿಸಬೇಕು. ಜಾತಿ ಆಧಾರಿತ ರಾಜಕೀಯ ಪಕ್ಷಗಳನ್ನು ನಿಷೇಧಿಸಬೇಕು ; ರಾಜ್ಯ ಸಭೆಗೆ ಸರ್ವಪಕ್ಷೀಯ ಸಮಿತಿಯೊಂದರ ಮುಖಾಂತರ ಸಮುನ್ನತ ಸ್ಥಾನಗಳಲ್ಲಿ ಇರುವವರ ಮೇಲಿನ ಭ್ರಷ್ಟಾಚಾರದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸುವ, ಕೇಂದ್ರ–ರಾಜ್ಯಗಳ ಸಂಬಂಧಗಳನ್ನು ಸುಗಮಗೊಳಿಸುವ, ಇಂಥವೇ ಇನ್ನಿತರ ಅಧಿಕಾರಗಳನ್ನು ಕೊಟ್ಟು ಅದಕ್ಕೆ ಎಲ್ಲ ರಾಜ್ಯಗಳಿಂದಲೂ ಸಮಾನ ಸಂಖ್ಯೆಯ ಸದಸ್ಯರು ಆರಿಸಿ ಹೋಗುವ ಏರ್ಪಾಟು ಆಗಬೇಕು ; ಪೂರ್ವ ಪಾಕಿಸ್ತಾನ ಸಿಡಿದು ಬೇರೆಯಾಗುವುದಕ್ಕೆ ಅವರ ಮೇಲೆ ಬಲ ವಂತವಾಗಿ ಉರ್ದೂ ಭಾಷೆಯನ್ನು ಹೇರಿದುದೂ ಕಾರಣವಾಯಿತೆಂಬುದನ್ನು ಮರೆಯದೆ ಹಿಂದಿಯೇತರರ ಮೇಲೆ ಹಿಂದೀ ಹೇರಿಕೆಯ ಹವಣಿಕೆ, ಹೆಣಗಾಟಗಳನ್ನು ಬಿಟ್ಟುಕೊಟ್ಟು ಈ ದೇಶದ ಎಲ್ಲ ಭಾಷೆಗಳಿಗೂ ಸಮಾನ ಗೌರವ, ಸಮಾನ ವಿಕಾಸಾವಕಾಶಗಳನ್ನು ನೀಡಬೇಕು ; 'ಹಿಂದಿಯು ಸಮಾನರಲ್ಲಿ ಮೊದಲಿಗ' ಎಂಬ ದಾರಿಯಲ್ಲಿ ಮುಂದುವರೆಯಬೇಕು ; ದೇಶಕ್ಕೆಲ್ಲ ಒಂದೇ ಸಿವಿಲ್‌ಕೋಡ್ ಇರಬೇಕು; ಕುಟುಂಬ ಯೋಜನೆ ಕಡ್ಡಾಯವಾಗಬೇಕು ; ರಾಜಕೀಯ ಪಕ್ಷಗಳ ಆದಾಯ–ವ್ಯಯ ವಿವರಗಳು ಆಡಿಟ್ ವ್ಯವಸ್ಥೆಗೆ ಒಳಪಡಬೇಕು ; ತನ್ನ ಆಂತರಿಕ ಚುನಾವಣೆ ಗಳನ್ನು ಸಕಾಲಕ್ಕೆ ನಡೆಸದ ರಾಜಕೀಯ ಪಕ್ಷಗಳಿಗೆ ಸಾರ್ವತ್ರಿಕ ಚುನಾವಣೆಗಳಲ್ಲಿ ಸ್ಪರ್ಧಿಸುವ ಅಸ್ಪದವಿರಕೂಡದು.

ಯಾರು ಏನೇ ಹೇಳಲಿ, ನಮ್ಮ ಇಂದಿನ ಆರ್ಥಿಕ ವ್ಯವಸ್ಥೆ ಕೇಂದ್ರೀಕೃತ ಉತ್ಪಾದನಾ ಪದ್ಧತಿಯನ್ನು ಪುರಸ್ಕರಿಸುತ್ತಿರುವ ವ್ಯವಸ್ಥೆ ; ನೂರಕ್ಕೆ ಹತ್ತರಷ್ಟು ಜನರ ಬೊಜ್ಜು ಬೆಳೆಸುತ್ತಿರುವ ವ್ಯವಸ್ಥೆ ; ಬಡವರು ಇನ್ನಷ್ಟು ಬಡವರಾಗುತ್ತ, ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುತ್ತ ಹೋಗುತ್ತಿರುವುದನ್ನು ಕಣ್ಣಾರೆ ಕಂಡೂ ಅದನ್ನು ಸರಿಪಡಿಸಲಾಗದೆ, ತಡೆಯಲಾಗದೆ ತಡಬಡಿಸುತ್ತಿರುವ ವ್ಯವಸ್ಥೆ; ಗ್ರಾಮಾಭಿಮುಖಿಯಾಗದೆ ನಗರಾಭಿಮುಖಿಯಾದ ವ್ಯವಸ್ಥೆ. ಇದಕ್ಕೆ ಒಂದೆರಡು ನಿದರ್ಶನಗಳು. ಕೇಂದ್ರ ಸರ್ಕಾರವೇ ಪ್ರಕಟಿಸಿರುವ 'ಶಿಕ್ಷಣದ ಸವಾಲು' ಎಂಬ ಕೈಪಿಡಿಯಲ್ಲಿ ಒಪ್ಪಿಕೊಂಡಿರುವಂತೆ ನೂರಕ್ಕೆ ನಲವತ್ತರಷ್ಟು ಪ್ರಾಥಮಿಕ ಶಾಲೆಗ ಳಿಗೆ ಕಟ್ಟಡಗಳಿಲ್ಲ; ನೂರಕ್ಕೆ ೩೫ರಷ್ಟು ಶಾಲೆಗಳು ಒಬ್ಬ ಶಿಕ್ಷಕರನ್ನು ಮಾತ್ರ ಪಡೆದಿವೆ ; ನೂರಕ್ಕೆ ೬೦ರಷ್ಟು ಶಾಲೆಗಳಿಗೆ ಕುಡಿಯುವ ನೀರಿನ ಪೂರೈಕೆಯಿಲ್ಲ ; ನೂರಕ್ಕೆ ೪೦ರಷ್ಟು ಶಾಲೆಗಳಿಗೆ ಕಪ್ಪು ಹಲಗೆಗಳಿಲ್ಲ! ಹೀಗಿದ್ದೂ ಶ್ರೀಸಾಮಾನ್ಯರ ತುಚ್ಛೀಕರಣ ಪ್ರತೀಕಗಳಾದ ಮಾದರಿ ಶಾಲೆಗಳ ಯೋಜನೆ, ಬೇಡಿದವರಿಗೊಂದು ಶುಲ್ಕಾಧಾರಿತ ಮೆಡಿಕಲ್–ಇಂಜಿನಿಯರಿಂಗ್ ಕಾಲೇಜುಗಳು, ಅನಗತ್ಯ ವಿಶ್ವ ವಿದ್ಯಾಲಯಗಳು ! ಪಂಜಾಬಿನ ಕೋಟಸುಕಿಯಾದಲ್ಲಿ ಕೇವಲ ೪೦ ಸಾವಿರ ರೂಪಾಯಿಗಳಿಗೆ ಒಂದು ಮಿನಿ ಸ್ಟೇಡಿಯಂ ಕಟ್ಟಿರುವರಂತೆ. ಈ ಲೆಕ್ಕದಿಂದ ಈ

ದೇಶದ ಎಲ್ಲ ತಾಲ್ಲೂಕುಗಳಲ್ಲಿ ಐದು ಸಾವಿರ ಮಿನಿ ಸ್ಟೇಡಿಯಂಗಳನ್ನು ಕಟ್ಟಲು ಬೇಕಾದ ಹಣ ಕೇವಲ ೨೦ ಕೋಟಿ ರೂಪಾಯಿಗಳು. ಕುಡಿಯುವ ನೀರಿಲ್ಲದ ಈ ದೇಶದ ಎರಡು ಲಕ್ಷ ಹಳ್ಳಿಗಳಿಗೆ ಒಂದೊಂದು ಕುಡಿಯುವ ನೀರಿನ ಭಾವಿಯನ್ನು ಕೊಡಲು ಬೇಕಾಗುವ ಹಣ ೭೦೦ ಕೋಟಿ ರೂಪಾಯಿಗಳು. ಏಷ್ಯಾಡ್‌ದಿಂದ ಸಾರ್ಕ್‌ದವರೆಗೆ ಆಡಂಬರದ ಪ್ರದರ್ಶನಗಳನ್ನು ಬಿಟ್ಟಿದ್ದರೆ ಇವೆರಡನ್ನೂ ಮಾಡಿ ಮುಗಿಸಬಹುದಿತ್ತು: ಇನ್ನೂ ಹಲವು ಮೂಲರಚನೆ [Infrastructure]ಯ ಯೋಜನೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯಗತಗೊಳಿಸಬಹುದಿತ್ತು. ಇನ್ನಾದರೂ ದಿಲ್ಲಿಯ ದೇವತೆಗಳಿಗೆ ಹಳ್ಳಿಗಳು ಕಾಣಿಸಲಿ!

ಇನ್ನೊಂದು ಉದಾಹರಣೆ: ನಮ್ಮ ಏಳನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಸಿದ್ಧವಿರುವ ನೀರಾವರಿ ಯೋಜನೆಗಳ ಪೂರ್ಣ ಪ್ರಯೋಜನ ಪಡೆಯಲಾಗದೆ ಈ ದೇಶಕ್ಕೆ ವರ್ಷವೊಂದಕ್ಕೆ ಆರು ಸಹಸ್ರ ಕೋಟಿ ರೂಪಾಯಿಗಳ ನಷ್ಟ ಸಂಭವಿಸಲಿದೆಯೆಂದೂ, ಇದರಿಂದ ಕನಿಷ್ಠ ಎರಡು ಮೂರು ಕೋಟಿ ಭಾರತೀಯರಿಗೆ ದೊರೆಯಬಹುದಾಗಿದ್ದ ಉದ್ಯೋಗಾವಕಾಶಗಳು ತಪ್ಪುವವೆಂದೂ ನಮ್ಮ ಹೆಮ್ಮೆಯ ಅರ್ಥಶಾಸ್ತ್ರಜ್ಞ ಡಾ|| ಡಿ. ಎಂ. ನಂಜುಂಡಪ್ಪನವರು ಅಂದಾಜು ಮಾಡಿದ್ದಾರೆ. ಇದಕ್ಕೆ ಬೇಕಾಗುವ ಹಣ ಹಾಕಿ ಪೂರ್ಣ ಪ್ರಯೋಜನ ಪಡೆದರೆ ಗ್ರಾಮಭಾರತದಲ್ಲಿ ಪ್ರತಿ ವರ್ಷ ಆರು ಸಹಸ್ರ ಕೋಟಿಯಷ್ಟು ಸಂಪತ್ತಿನ ಸೃಷ್ಟಿಯಾಗುವುದು; ಎರಡು ಮೂರು ಕೋಟಿ ಗ್ರಾಮೀಣ ಬಾಂಧವರಿಗೆ ಕೆಲಸ ಸಿಕ್ಕುವುದು. ಇದನ್ನು ಬಿಟ್ಟು ಅಂಚೆ ತಂತಿಗಳ ದರಗಳನ್ನು, ಆಹಾರ ಸಾಮಗ್ರಿಗಳ ಬೆಲೆಗಳನ್ನು ಹೆಚ್ಚಿಸುತ್ತ, ದರಗಳು, ಬೆಲೆಗಳು ಹೆಚ್ಚಾಡುವೆಂದು ಸಂಬಳ, ವೇತನಗಳನ್ನು ಹೆಚ್ಚಿಸುತ್ತ, ಹೆಚ್ಚಿದ ಸಂಬಳದ ಹಣವನ್ನು ಲಾಭಬಡಕ ವರ್ತಕರ ಕಳ್ಳ ಹಣ ಹಮ್ಮಾಣಿಗಳಿಗೆ ಹರಿಸುತ್ತ, ಚುನಾವಣೆಗಳಿಗೆ ಅವರ ಹಣವನ್ನೇ ಪಡೆದು ಪ್ರತ್ಯುಪಕಾರಾರ್ಥ ಅವರನ್ನು ರಕ್ಷಿಸುತ್ತ ನಾವು ಎಲ್ಲಿಗೆ ಹೋಗಿ ಮುಟ್ಟುವೆವೋ ಆ ಭಾರತ ಭಾಗ್ಯ ವಿಧಾತನೇ ಬಲ್ಲ!

ಕೇಂದ್ರೀಕೃತ ಉತ್ಪಾದನಾಧಾರಿತ ಅರ್ಥವ್ಯವಸ್ಥೆಯನ್ನು ಬಂಡವಾಳಶಾಹೀ ರಾಷ್ಟ್ರಗಳೇ ಅನುಸರಿಸಲಿ, ಸಮಾಜವಾದೀ-ಸಾಮ್ಯವಾದೀ ರಾಷ್ಟ್ರಗಳೇ ಅವಲಂಬಿಸಲಿ, ಆಗುವ ಪರಿಣಾಮ ಒಂದೇ. ಬಹು ಜನರ ಜುಟ್ಟು ಕೆಲವೇ ಜನರ ಕೈಯಲ್ಲಿ! ರಾಜಸತ್ತೆಗೆ ಆರ್ಥಿಕ ಸತ್ತೆಯೂ ಸೇರಿ ಬಿಟ್ಟರೆ ಶ್ರೀಸಾಮಾನ್ಯರಿಗೆ ಗಾಢತರ ಗುಲಾಮಗಿರಿ ದೊರೆಯುವುದಾಗಲಿ ವ್ಯಕ್ತಿತ್ವದ ಅನಿರ್ಬಂಧ ವಿಕಾಸವಲ್ಲ, ಸ್ವಜನ ವಿಲಾಸವಲ್ಲ, ಜೀವನೋಲ್ಲಾಸವಲ್ಲ. ರಾಜಕೀಯ ವ್ಯವಸ್ಥೆಯಂತೆ ಆರ್ಥಿಕ ವ್ಯವಸ್ಥೆಯಲ್ಲಿಯೂ ಪ್ರಜಾಸತ್ತಾತ್ಮಕ ವಿಕೇಂದ್ರಣವೊಂದೇ ಎಲ್ಲ ಅನಿಷ್ಟಗಳ ನಿವಾರಣೋಪಾಯ. ಇದು ಸೈದ್ಧಾಂತಿಕವಾಗಿ ಅಂಗೀಕೃತವಾದರೆ ವಿಕೇಂದ್ರಿಕೃತ ಉತ್ಪಾದನಾ ವ್ಯವಸ್ಥೆಗೆ ತಕ್ಕ ಸಮರ್ಪಕ ತಂತ್ರಜ್ಞಾನವನ್ನು, ಗ್ರಾಮಾಂತರ



ಪ್ರದೇಶಗಳಿಗೆ ಹೊಂದಿಕೊಳ್ಳುವ ತಂತ್ರಜ್ಞಾನವನ್ನೂ ಜೊತೆಜೊತೆಗೆ ರೂಪಿಸಿ ಪ್ರಚುರ ಪಡಿಸಬಹುದು. ಆ ಬಗ್ಗೆ ಅನ್ವೇಷಣೆ ಆರಂಭವಾಗಿದೆ; ಇದು ಬಹಳಷ್ಟು ಬೆಳೆಯಬೇಕು.

ಇವೆಲ್ಲ ಸಾಹಿತ್ಯ ಸಮ್ಮೇಳನದ ವೇದಿಕೆಯಿಂದ ಪ್ರತಿಪಾದಿತವಾಗಲು ತಕ್ಕ ವಿಷಯಗಳೆ? ಯಾಕಲ್ಲ? ನಮ್ಮ ಜೀವನ ವಿಧಾನವನ್ನೇ ನಿಯಂತ್ರಿಸುವ ರಾಜಕೀಯ ಆರ್ಥಿಕ ವ್ಯವಸ್ಥೆಗಳಲ್ಲಿರುವ ಅಂತರ್ವಿರೋಧಗಳೇ, ವಿಷಮತೆಗಳೇ, ಅನ್ಯಾಯಗಳೇ ಕಾರಣವಾಗಿ ನಮ್ಮ ಸ್ವಾತಂತ್ರ್ಯ 'ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು' ಕೊಡದೆ ಹೋಗಿ, ಸ್ವಾತಂತ್ರ್ಯದ ಉಲ್ಲಾಸ ನಿರಾಶೆಯಾಗಿ, ನಿರಾಶೆ ಅಹಿಂಸಾತ್ಮಕ ಪ್ರತಿಭಟನೆಯಾಗಿ ಪುಟಿದು, ಅಹಿಂಸಾತ್ಮಕ ಪ್ರತಿಭಟನೆಯೂ ಪಟ್ಟಭದ್ರ ಹಿತಾಸಕ್ತ- ರಕ್ಷಿತ ಶೋಷಣೆಯ ಕೋಟೆಗೆ ತಾಗಿ ಪುಡಿ ಪುಡಿಯಾಗಿ, ಈಗ ಹಿಂಸಾರಭಸಮತಿತ್ವಕ್ಕೆ ಶರಣು ಹೋಗುತ್ತಿರುವಾಗ ಈ ವ್ಯವಸ್ಥೆಗಳನ್ನು—ಅಲ್ಲ, ಅವ್ಯವಸ್ಥೆಗಳನ್ನು—ಇಂದಿನ ಆಶೋತ್ತರಗಳಿಗೆ ತಕ್ಕಂತೆ ಪುನರ್-ರೂಪಿಸಿಕೊಳ್ಳದೆ ಅದೆಂಥ ಹೊಸಬಾಳನ್ನು ಕಾಣಬಲ್ಲೆವು ನಾವು? ಹೊಸ ಬಾಳಿಲ್ಲದೆ ಅದೆಂಥ ಹೊಸ ಸಾಹಿತ್ಯ ಹುಟ್ಟೀತು?

ಇದನ್ನರಿತ ಗಾಂಧೀಜಿಯವರು "ಭೌತಿಕ ಜೀವನದ ಉತ್ಪಾದನಾ ವಿಧಾನವೇ ಸಾಮಾಜಿಕ, ರಾಜಕೀಯ, ಬೌದ್ಧಿಕ ಜೀವನ ವಿಧಾನವನ್ನು ಒಟ್ಟಾರೆಯಾಗಿ ರೂಪಿಸುತ್ತದೆ; ಮನುಷ್ಯರ ಪ್ರಜ್ಞೆ ಅವರ ಇರುವಿಕೆಯನ್ನು ನಿರ್ಧರಿಸುವುದಿಲ್ಲ; ಅದಕ್ಕೆ ಬದಲಾಗಿ ಅವರ ಸಾಮಾಜಿಕ ಇರುವಿಕೆ ಅವರ ಪ್ರಜ್ಞೆಯನ್ನು ನಿರ್ಧರಿಸುತ್ತದೆ" ಎಂದು ಮಾರ್ಕ್ಸ್‌ನಂತೆ ನಂಬದಿದ್ದರೂ ರಾಜಕೀಯ- ಆರ್ಥಿಕ ಸಮಾನತೆಗೆ ಆದ್ಯತೆಯನ್ನಿತ್ತರು. ಇಬ್ಬರೂ ನೀಡುವ ಕಾರಣಗಳೇನೇ ಇರಲಿ, ನಂಬಿದ ಗುರಿ ಒಂದೇ: ಆರ್ಥಿಕ ಸಮಾನತೆ, ಅದರ ಜೊತೆ ಜೊತೆಗೆ ಸಾಮಾಜಿಕ ಸಮಾನತೆ-ನಿಜವಾದ ಪ್ರಜಾತಂತ್ರೀಯ ವ್ಯವಸ್ಥೆ.

ಇದು ಗಾಂಧೀಜಿ ಇತ್ತ ಎಚ್ಚರಿಕೆ: "ಅಹಿಂಸಾತ್ಮಕ ಸ್ವತಂತ್ರ ಸಮಾಜಕ್ಕೆ ಆರ್ಥಿಕ ಸಮತೆ ಅಗತ್ಯ ಕೀಲಕ....ಒಂದು ಕಡೆ ರಾಷ್ಟ್ರದ ಸಂಪತ್ತನ್ನೆಲ್ಲ ಮುಷ್ಟಿಯಲ್ಲಿ ಹಿಡಿದಿರುವ ಹತ್ತಾರು ಶ್ರೀಮಂತರನ್ನು ಆ ಶಿಖರದಿಂದ ಕೆಳಕ್ಕೆ ಇಳಿಸುವುದು; ಮತ್ತೊಂದು ಕಡೆ ಅರೆಹೊಟ್ಟೆಯಿಂದ ನರಳಿ ಅಗಾಧಕೂಪದಲ್ಲಿ ಬಿದ್ದಿರುವ ಕೋಟ್ಯಾಂತರ ಬಡ ದುಡಿಮೆಗಾರರನ್ನು ಮೇಲಕ್ಕೆ ಎತ್ತುವುದು—ಇದು ಸಮತೆಯ ಅರ್ಥ. ತಿಂದು ತೇಗುವ ಹಣವಂತನಿಗೂ ಹಸಿದು ಕಂಗಾಲಾಗಿರುವ ಬಡವನಿಗೂ ಇಷ್ಟು ದೊಡ್ಡ ಅಂತರ ಇರುವತನಕ ಅಹಿಂಸಾತ್ಮಕ ಸ್ವರಾಜ್ಯ ಸಾಧ್ಯವೇ ಇಲ್ಲ. ಸ್ವತಂತ್ರ ಭಾರತದಲ್ಲಿ ಹೊಸದೆಹಲಿಯ ಅರಮನೆಗಳಿಗೂ ಬಡಬಗ್ಗರ ಮುರುಕು ಗುಡಿಸಲುಗಳಿಗೂ ಇರುವ ಈ ದಾರುಣವಾದ ಅಂತರ ಒಂದು ದಿನವಾದರೂ ಇರಲಾರದು. ಆಗ ಇಬ್ಬರೂ ತಮ್ಮ ತಮ್ಮ ಬದುಕಿಗಾಗಿ ಸಮಾನ ಅಧಿಕಾರ ಪಡೆದಾರು

ಸಿರಿವಂತರು ತಮ್ಮ ಧನ ಬಲವನ್ನು ಲೋಕಹಿತಕ್ಕಾಗಿ ತಾವಾಗಿ ತ್ಯಾಗ ಮಾಡಿ
ಅರ್ಪಿಸದಿದ್ದರೆ ರಕ್ತಮಯ ವಿಧ್ವಂಸಕ ಕ್ರಾಂತಿ ಎಂದಾದರೊಂದು ದಿನ ಬಂದೇ
ಬಂದೀತು ; ತಪ್ಪಿದ್ದಲ್ಲ !"

ಭಾರತಕ್ಕೆ ಸ್ವಾತಂತ್ರ್ಯ ಬರುವ ಪೂರ್ವದಲ್ಲಿಯೇ ಈ ಭಯಸೂಚಕ ಘಂಟೆ
ಯನ್ನು ಬಾರಿಸಿ ಹೋದರು ಬಾಪೂಜಿಯವರು. ಆದರೆ ಹೊಸದೆಹಲಿಯ ಅರಮನೆ
ಗಳಿಗೂ, ಬಡಬಗ್ಗರ ಮುರುಕು ಗುಡಿಸಲುಗಳಿಗೂ ಹಿಂದೆ ಇದ್ದ ದಾರುಣವಾದ
ಅಂತರ ಸ್ವಾತಂತ್ರ್ಯ ಬಂದು ನಾಲ್ಕು ದಶಕಗಳು ಮುಗಿದಿದ್ದರೂ ಇನ್ನಷ್ಟು ಲಾಂಛ
ನಾಸ್ಪದವೆನಿಸುವಷ್ಟು ಹೆಚ್ಚಿದೆಯಾಗಲಿ ಎಳ್ಳಷ್ಟೂ ಕಡಮೆಯಾಗಿಲ್ಲ ; ಆಗುವು
ದೆಂದಿದ್ದ ಬಾಪೂಜಿಯವರ ಭವಿಷ್ಯ ನಿಜವಾಗಲಿಲ್ಲ. ಯಾಕೆಂದರೆ ಸ್ವಾತಂತ್ರ್ಯೋ
ತ್ತರ ಭಾರತದ ಅಧಿಕಾರ ಸೂತ್ರಗಳನ್ನು ಹಿಡಿದವರು ರಕ್ಷಣಾರಂಗದಂಥ ಒಂದೆರಡು
ಅನಿವಾರ್ಯರಂಗಗಳನ್ನು ಬಿಟ್ಟು ಉಳಿದ ಎಲ್ಲೆಡೆಗಳಲ್ಲಿ ವಿಕೇಂದ್ರೀಕರಣಾಧಾರಿತ
ಉತ್ಪಾದನಾ ವಿಧಾನವನ್ನು ಅನುಸರಿಸಲಿಲ್ಲ. ಆಗಿರುವ ಅನಾಹುತ ಊಹಾತೀತ.
ಭೀಕರ ಬಡತನ, ನಿರುದ್ಯೋಗ, ನಿರಕ್ಷರತೆ, ರೋಗರುಜಿನಗಳ ಜೊತೆಗೆ ಅರಣ್ಯ
ನಾಶ, ನೀರು ಗಾಳಿಗಳ ಕಶ್ಮಲೀಕರಣ, ಪರಿಸರ ಮಾಲಿನ್ಯ—ಇನ್ನೂ ಏನೇನೋ !
ಬಾಪೂಜಿಯವರ ಇನ್ನೊಂದು ಭವಿಷ್ಯ—ರಕ್ತಮಯ ವಿಧ್ವಂಸಕ ಕ್ರಾಂತಿಯ
ಭವಿಷ್ಯ—ನಿಜವಾಗುವುದೆ ? ಆಗದಿರಲಿ ! ಅಧಿಕಾರದಲ್ಲಿರುವವರಿಗೆ ಅದನ್ನು
ತಪ್ಪಿಸುವ ಬುದ್ಧಿ ಬರಲಿ !

ಇನ್ನುಳಿದುದು ಸಾಮಾಜಿಕ ವ್ಯವಸ್ಥೆ. ಇದು ಬುದ್ಧ ಹೇಳಿದಂತೆ 'ಬಹುಜನ
ಹಿತಾಯ' ಆಗಿರಬೇಕು ; ಬಸವಣ್ಣ ಹೇಳಿದಂತೆ 'ಸಕಲ ಜೀವಾತ್ಮರಿಗೆ ಲೇಸನೇ'
ನೀಡುವುದಾಗಿರಬೇಕು ; ಗಾಂಧೀಜಿ ಹೇಳಿದಂತೆ 'ಕೊನೆಯ ಮಾನವರ-ಅಂತ್ಯ
ಜನರ-ಹಿತ ಸಾಧಿಸುವುದಾಗಿರಬೇಕು ; ಡಾ|| ಅಂಬೇಡಕರರು ಹೇಳಿದಂತೆ ದಲಿತ
ಹಿತ ಸಾಧಿಸುವುದೂ ಆಗಿರಬೇಕು. ಇದಕ್ಕೆ ತಕ್ಕಂತೆ ಇಂದಿನ ಸಂದರ್ಭದಲ್ಲಿ ಹಿತ
ವೇನೆಂಬುದರ ಬಗ್ಗೆ ನಮ್ಮ ತಿಳಿವಳಿಕೆ ನಿಚ್ಚಳವಾದುದಾಗಿರಬೇಕು. ಕನ್ನಡ
ಕುಲೋತ್ತುಂಗ ನೃಪತುಂಗ (ಶ್ರೀವಿಜಯ ?)ನೇ 'ಹಿತಮಿದು, ಅಹಿತ ಪ್ರಕಾರ
ಮಿದು' ಎಂಬುದನ್ನು ಕ್ರಾಂತದರ್ಶಿಯಾದ ಕವಿ ತಿಳಿಸಿಕೊಡಬೇಕೆಂದು ಹೇಳಿ
ಹೋಗಿದ್ದಾನೆ. ಆದುದರಿಂದ ಇಂದು ನಮ್ಮನ್ನು ನಾವೇ ಕೇಳಿಕೊಳ್ಳೋಣ :
'ಹಿತವೆಂದರೇನು ?'

ಹಿಂದೆ ಹುಟ್ಟಿನಿಂದಲೇ ಶ್ರೇಷ್ಠರೆನ್ನಿಸಿಕೊಂಡಿದ್ದವರ, ಈಗಲೂ ಹಾಗೆನ್ನಿಸಿ
ಕೊಳ್ಳಲು ಭಗೀರಥ ಪ್ರಯತ್ನ ಮಾಡುತ್ತಿರುವವರ, ಸೇವೆಯನ್ನು ಶ್ರದ್ಧೆಯಿಂದ
ಮಾಡುವುದರಲ್ಲಿಯೇ ಕನಿಷ್ಠರ ಹಿತ ನಿಹಿತವಾಗಿದೆಯೆಂದೋ, ರಾಜಮಹಾರಾಜರ
ಯುದ್ಧಲಾಲಸೆಯ ಯಜ್ಞಕುಂಡಕ್ಕೆ ತಮ್ಮ ರಕ್ತದ ತುಪ್ಪವನ್ನು ಸುರಿಯುವುದ
ರಲ್ಲಿಯೇ ಯೋಧರ, ನಾಡವರ ಹಿತ ಅವಿತಿದೆಯೆಂದೋ, ಸಾಮಂತರ, ಶ್ರೀಮಂತರ,



ಇನ್ನುಳಿದ ಸುಲಿಗೆಗಾರರ ಸುಖಕ್ಕಾಗಿ ಸತತ ಶ್ರಮಿಸುವುದರಲ್ಲಿಯೇ ಸೇವಾಜೀವಿಗಳ
ಹಿತ ಅಡಗಿದೆಯೆಂದೋ, ಭೂಮಿದಾರರ ಗೇಣಿದಾರರಾಗಿ, ಉಳ್ಳವರ ಜೀತದಾಳು
ಗಳಾಗಿ, ಮುಟ್ಟಲು ಯೋಗ್ಯರಲ್ಲದಿದ್ದರೂ ಬಿಟ್ಟಿಗೆ ಯೋಗ್ಯರೆನಿಸಿದ್ದ ದಲಿತರಾಗಿ,
ಒಡೆಯ ಕೊಟ್ಟಷ್ಟರಿಂದಲೇ ತುಷ್ಟರಾಗಿ ಅರೆಹೊಟ್ಟೆ ಬರಿಮೈಗಳಿಂದಲೂ ದುಡಿವ
ಗಣಿಗಿರಣಿಗಳ ದುಡಿಮೆಗಾರರಾಗಿ ಬದುಕುವುದರಲ್ಲಿಯೇ ಅವರವರ ಹಿತ ಮಡಗಿದೆ
ಯೆಂದೋ-ದೇವರ ಸಾಕ್ಷಿಯಾಗಿ ಸಾರಿ, ಧರ್ಮದ ಹೆಸರಿನಲ್ಲಿ ಸಾಧಿಸಿ, ರೂಢಿಯ
ಹೆಸರಿನಲ್ಲಿ ಗಿಟ್ಟಿಸಿ, ಬಹುಜನರ ಆಶೋತ್ತರಗಳ ಸ್ಮಶಾನದ ಮೇಲೆ ಪಟ್ಟಭದ್ರ ಹಿತಗಳ
ಪ್ರಮದವನವನ್ನು ಬೆಳೆಸಿ, ಉರಿಯುವ ಗಾಯಕ್ಕೆ ಉಪ್ಪೆರಚಿದಂತೆ, 'ಸರ್ವೇ ಜನಾಃ
ಸುಖಿನೋ ಭವಂತು' ಎಂಬ ಮಂತ್ರದ ಯಾಂತ್ರಿಕ ಪಠನ ಮಾಡಿ, ಮಂಕು
ಬೂದಿಯ ಪ್ರಸಾದವನ್ನೂ, ಮರುಳುಗೊಳಿಸುವ ತೀರ್ಥವನ್ನೂ ವಿತರಿಸಿ ಇದೇ
'ಹಿತ' ಶಬ್ದಕ್ಕಿರುವ ಅರ್ಥವೆಂದು ವಾದಿಸಿ ಸಾಧಿಸಬಹುದಾಗಿದ್ದಿತಾದರೂ ಇಂದು
ಈ ಅರ್ಥವನ್ನು ಆಧರಿಸಿ ಮುಂದುವರೆಯಲಾದೀತೆ ?

ತಮಗೆ ಹಿತವೆನಿಸಿದುದು ಅನ್ಯರಿಗೆ ಅಹಿತವೆನಿಸಬಹುದೆಂಬ, ತಮಗೆ ಅಹಿತ
ವೆನಿಸಿದುದು ಅನ್ಯರಿಗೆ ಹಿತವೆನಿಸಬಹುದೆಂಬ ಅರಿವು ಬರುವುದೇ ಆಳವಾಗಿ ಬೇರು
ಬಿಟ್ಟಿರುವ ಪಟ್ಟಭದ್ರ ಹಿತಾಸಕ್ತರಿಗೆ ? ಯಾರಿಗೆ ಅಹಿತವಾದರೇನು, ತಮ್ಮ ಹಿತ
ಸಾಧಿಸಿದರೆ ಸಾಕೆಂಬ ಸ್ವಾರ್ಥಪರಾಯಣತೆ, ಎಲ್ಲರ ಹಿತಗಳ ನಿರ್ಣಯಾಧಿಕಾರ
ತಮ್ಮ ಗುತ್ತಿಗೆಯೆಂಬ ದುರಹಂಕಾರ, ಹಿತ ಜನ್ಮಾವಲಂಬಿ, ಜಾತ್ಯಾವಲಂಬಿ,
ಕರ್ಮಾವಲಂಬಿ, ಪುಣ್ಯಾವಲಂಬಿ, ಅದೃಷ್ಟಾವಲಂಬಿಯೆಂಬ ವಿಸಂಗತ ವಿತಂಡ
ವಾದ, ತಾವು ಉಳಿದವರನ್ನು ಅದೆಷ್ಟೇ ಅವಹೇಳನ ಮಾಡಲಿ, ತುಚ್ಛೀಕರಿಸಲಿ—
ಅವರು ಒಂದು ತಿವಿಯುವ ಮಾತನ್ನು ತಮಗಾಡಿದರೂ ಸಾಕು, ಅವರಿಗೆ 'ಭಾರತ
ಬಿಟ್ಟು ತೊಲಗಿರಿ !' ಎಂದು 'ಹುಕುಂ' ಕೊಡುವ ಅಧಿಕಾರ ತಮಗಿದೆಯೆಂದು
ತಿಳಿಯುವ ಭಾವನಾತ್ಮಕ ಅಪರಿಕ್ವತೆ-ಇತ್ಯಾದಿಗಳು ಇನ್ನೂ ಬದುಕಿರಬೇಕೆಂದು
ಬಯಸುವವರು ಭ್ರಮಾಲೋಕದಲ್ಲಿರುವರೆಂದೇ ಹೇಳಬೇಕು. ಅನ್ಯರಿಗೆ ಅಹಿತ
ಕಾರಕವಾಗದ ಸ್ವಹಿತ ಶೋಧನೆ, ಸ್ವಹಿತ ನಿರ್ಣಯಾಧಿಕಾರಗಳು ಇಂದು ಸರ್ವರ
ಹಕ್ಕುಗಳಾಗಿವೆ. ಜಾತಿ ಗೀತಿಗಳ ಮಾತು ಹಾಗಿರಲಿ, ವ್ಯಕ್ತಿ ವ್ಯಕ್ತಿಗೂ ಈ
ಸ್ವಹಿತ ನಿರ್ಣಯಾಧಿಕಾರ ಜನ್ಮ ಸಿದ್ಧ ಹಕ್ಕು. ಯಾಕೆಂದರೆ ಪ್ರತಿಯೊಬ್ಬ
ವ್ಯಕಿಯೂ ಒಂದರ್ಥದಲ್ಲಿ ಅದ್ವಿತೀಯ. "ಯಾವ ಕಾಲದ ಶಾಸ್ತ್ರವೇನು ಹೇಳಿದ
ರೇನು ?" ಇಂದು ಆತ ತನಗಿರುವ ಪ್ರತ್ಯೇಕವೂ, ಅನನ್ಯವೂ ಆದ ವ್ಯಕ್ತಿತ್ವ
ಕಾರಣವಾಗಿ ಸಮಾನ ಗೌರವಕ್ಕೆ, ಸಮಾನಾವಕಾಶಕ್ಕೆ, ಸಮಾನ ಹಕ್ಕುಗಳಿಗೆ
ಪಾತ್ರ.

ಒಟ್ಟಾರೆ ಹೇಳುವುದಾದರೆ, ವ್ಯಕ್ತಿಯ ಸ್ವಂತವಿಕಾಸಕ್ಕೆ, ಸ್ವಹಿತಸಾಧನೆಗೆ
ಪೂರ್ಣಾವಕಾಶವಿತ್ತೇ ಸಾಮುದಾಯಿಕ ಹಿತಸಾಮಂಜಸ್ಯವನ್ನು ಸಾಧಿಸಬಲ್ಲ

ವಿಕೇಂದ್ರಿಕೃತ, ಗ್ರಾಮಸ್ವರಾಜ್ಯನಿಷ್ಠ ರಾಜಕೀಯ ವ್ಯವಸ್ಥೆ, ಜನಾಭಿಮುಖಿಯಾದ ಆರ್ಥಿಕ ವ್ಯವಸ್ಥೆ, ಹಾಗೂ ಸಮಾನತೆಯ ಭದ್ರ ಬುನಾದಿಯ ಮೇಲೆ ಕಟ್ಟಿದ ಸಾಮಾಜಿಕ ವ್ಯವಸ್ಥೆಗಳನ್ನೊಳಗೊಂಡ ಸಮಷ್ಟಿ ವ್ಯವಸ್ಥೆಯೊಂದನ್ನು ರೂಪಿಸುವುದೇ ಗುರಿಗಳಲ್ಲಿ ಗುರಿ. ಈ ಗುರಿಯನ್ನು ನಿಲುಕಿಸುವಲ್ಲಿ ಸಾಹಿತಿಯಾದವನು ಯಾವ ಪಾತ್ರ ವಹಿಸಬಲ್ಲ ?

ಈ ಪ್ರಶ್ನೆಗೂ ಉತ್ತರ ಅವರವರ ಹಿತಾಸಕ್ತಿಗಳಿಗೆ ಅನುಗುಣವಾಗಿಯೇ ಹೊರಡುತ್ತದೆ. ಇದು ಸಹಜ, ಸ್ವಾಭಾವಿಕ. ಹೊಟ್ಟೆ ತುಂಬಿದವರಿಗೆ ಮನಸ್ಸಿನ ವಿವಿಧ ಸ್ತರಗಳ ವಿಚಿತ್ರಗಳ ಚಿತ್ರಣವೇ ಮುಖ್ಯವೆನಿಸಿದರೆ ಹೊಟ್ಟೆ ಹಸಿದಿರುವವರಿಗೆ ದೇವರೂ ರೊಟ್ಟಿಯ ರೂಪದಲ್ಲಿಯೇ ತೋರುವುದು ಅಗತ್ಯವೆನಿಸಬಹುದು; ಅವಿವಾಹಿತರಿಗೆ, ವಿಷಮವಿವಾಹ ಪೀಡಿತರಿಗೆ ಕಾಮದ ಸಮಸ್ಯೆ ಪ್ರಮುಖವೆನಿಸಿದರೆ ವಿವಾಹಜರ್ಜರಿತರಿಗೆ ವಿವಾಹ-ವಿಚ್ಛೇದನ ಸೌಕರ್ಯವೇ ಮಹತ್ವದ್ದೆನಿಸಬಹುದು ವಿರಾಮವಿಪುಲರಿಗೆ ಮನೋರಂಜನವೇ ಪರಮ ಪ್ರಯೋಜನವೆನಿಸಿದರೆ ಬಿಡುವಿಲ್ಲದೆ ದುಡಿದೂ ಕಡುಬಡವರಾಗಿಯೇ ಉಳಿದಿರುವವರಿಗೆ ಆರ್ಥಿಕ ಸಮಾನತೆಗಾಗಿ ಸಂಘರ್ಷವೇ ಪ್ರಿಯವೆನಿಸಬಹುದು. ತರುಣರಿಗೆ ಪ್ರಣಯ ಪ್ರಿಯವೆನಿಸಿದರೆ ವೃದ್ಧರಿಗೆ ಆಧ್ಯಾತ್ಮ ಪ್ರಿಯವೆನಿಸಬಹುದು ; ಉಳ್ಳವರಿಗೆ ವಂದಿ ಮಾಗಧರ ಪರಾಕುಗಳೇ ಪ್ರಿಯವೆನಿಸಿದರೆ ಹುಟ್ಟು ಕಾರಣವಾಗಿ ಹೀನಸ್ಥಿತಿಯಲ್ಲಿರುವವರಿಗೆ ಸಮಾನತೆ ಸ್ವತಂತ್ರತೆಗಳೇ ಪರಮಾದರಣೀಯವೆನಿಸಬಹುದು.

ಹೀಗಾಗಿ, ಸಾಹಿತಿಗಳಿಂದ, ಅವರ ನಿರ್ಮಿತಿಗಳಿಂದ, ಕೃತಿಗಳಿಂದ ಅವರವರ ನಿರೀಕ್ಷೆಗಳು ಅವರವರ ಅಭೀಪ್ಸೆಗಳಿಗೆ ಅನುಗುಣವಾಗಿ ಆಕಾರ ಪಡೆಯುವುವು. ವಿಭಿನ್ನ ರುಚಿಗಳ, ವಿಭಿನ್ನ ವರ್ಗಗಳ ಈ ವಿಭಿನ್ನ ಆಸೆ ಅಭೀಪ್ಸೆಗಳಲ್ಲಿ ಸಮುಚಿತ ಸಂತುಲನವನ್ನು ನೆಲೆಗೊಳಿಸಬಲ್ಲ ಸಮಷ್ಟಿಹಿತದ ಸ್ವರೂಪವನ್ನು ಕಂಡುಹಿಡಿಯುವ ಕಾರ್ಯದಲ್ಲಿ ಸಾಹಿತಿಯೂ ಪಾಲು ವಹಿಸಲೇಬೇಕು. ಸುಸ್ಥಿರ ಸಂತುಲನವನ್ನು ಸಾಧಿಸಲಾಗದಿದ್ದರೂ ಸಂಚಲನಶೀಲ ಸಂತುಲನ [moving equilibrium] ವನ್ನು ಸಾಧಿಸುವುದು ಅಸಾಧ್ಯವೇನೂ ಅಲ್ಲ. ಸಮಷ್ಟಿಯ ಬುದ್ಧಿಶಕ್ತಿಗೆ ಅಸಾಧ್ಯವಾದುದೂ ಉಂಟೆ ?

ಆದುದರಿಂದ ಈ ಕಾರ್ಯ ಈಗ ಅಗತ್ಯವಾಗಿ ನಡೆಯಲೇಬೇಕು. ಸಮಕಾಲೀನ ಸಂವೇದನೆಗಳಿಗೆ, ಒತ್ತಡಗಳಿಗೆ, ಆಶೋತ್ತರಗಳಿಗೆ ಸ್ಪಂದಿಸುವ ಹೃದಯವನ್ನು ಪಡೆದ ಸಾಹಿತಿ ಈ ಕಾರ್ಯದಲ್ಲಿ ಮಹತ್ವದ ಪಾತ್ರ ವಹಿಸಬಲ್ಲ. ಸಾಮಾಜಿಕ ಸಂಘರ್ಷಗಳ, ಆರ್ಥಿಕ ವಿಷಮತೆಗಳ, ಶೋಷಣೆಯ ಸರ್ಪದ ಸಹಸ್ರ ಹೆಡೆಗಳ, ಬಡತನದ ಬೇರುಗಳ, ಮೌಢ್ಯದ ಮೂಲಗಳ, ಅಸ್ಪೃಶ್ಯತೆಯ ಭಾವನೆಯ ಬುಡಗಳ, ನಿರಕ್ಷರತೆ ನಿರುದ್ಯೋಗಗಳ ಕಾರಣಗಳ ಶೋಧನೆ ವಿಶ್ಲೇಷಣೆಗಳಿಂದ ಸಂಚಲನಶೀಲ ಸಂತುಲನಾಧಾರಿತ ಸಮಷ್ಟಿ ವ್ಯವಸ್ಥೆಯ ರೂಪರೇಖೆಗಳನ್ನು ನಿರ್ಧರಿಸುವಲ್ಲಿ



ಸಾಹಿತಿಗಳು ಪ್ರಧಾನ ಪಾತ್ರ ವಹಿಸಿದರೆ ಅವರು ನಿಜವಾಗಿಯೂ ಲೋಕದ ಪ್ರಚ್ಛನ್ನ ಶಾಸನಕಾರರಾಗುತ್ತಾರೆ. ಆಗಬೇಕು.

ಇಂಥ ಸಮಷ್ಟಿ ವ್ಯವಸ್ಥೆಯೊಂದನ್ನು ರೂಪಿಸಲು ಮುಂದಾದಾಗ ಸ್ಥಾಪಿತ ವ್ಯವಸ್ಥೆಯ ವಿರುದ್ಧ ಹೋರಾಟ ಅನಿವಾರ್ಯವಾಗುತ್ತದೆ. ಸ್ಥಾಪಿತ ವ್ಯವಸ್ಥೆ ಎಂದರೇನು? ದೇವ, ಧರ್ಮ, ಜಾತಿ, ಪಕ್ಷ, ವಿಚಾರ ಪ್ರಣಾಲಿ, ಆಚಾರ ಸಂಹಿತೆ-ಇತ್ಯಾದಿ ಯಾವುದೇ ಹೆಸರಿನಲ್ಲಿ, ಖಾಕಿ-ಕಾವಿ-ಖಾದಿ ಇತ್ಯಾದಿ ಯಾವುದೇ ವೇಷದಲ್ಲಿ, ಮಠ-ಮಂದಿರ-ಮಸೀದಿ-ಇಗರ್ಜಿ-ಗುರುದ್ವಾರ-ಕಾರ್ಯಾಲಯ, ಕಾರಾಗಾರ, ಇತ್ಯಾದಿ ಯಾವುದೇ ಸ್ಥಳದಲ್ಲಿ, ದಾನ, ದಕ್ಷಿಣೆ, ಗೇಣಿ, ಕಾಣಿಕೆ, ಲಂಚ, ಮಾಮೂಲು ಇತ್ಯಾದಿ ಯಾವುದೇ ರೂಪದಲ್ಲಿ ವ್ಯವಸ್ಥಿತವಾಗಿ ಅಜ್ಞರ, ದುರ್ಬಲರ ಶೋಷಣೆ ನಡೆಯುತ್ತಿದ್ದರೆ ಅವೆಲ್ಲ ಸ್ಥಾಪಿತ ವ್ಯವಸ್ಥೆಯ ವ್ಯಾಖ್ಯೆಯ ವ್ಯಾಪ್ತಿಯಲ್ಲಿ ಬರುವುವೆಂದು ನಾನು ನಂಬಿದ್ದೇನೆ. ನಮ್ಮ ಜನತೆಯ ಜೀವ, ಜೀವಾಳಕ್ಕೆ ಜಿಗಣೆಯಂತೆ ಅಂಟಿಕೊಂಡು, ಕತ್ತರಿಸಿದಷ್ಟೂ ಚಿಗುರೊಡೆಯುವ ಜಾತಿ ವ್ಯವಸ್ಥೆ, ಸರಕಾರವು ಕೋಟಿ-ಕೋಟಿ ಜನರಿಂದ ಕರ-ಕಂದಾಯ. ಸಣ್ಣ ಉಳಿತಾಯ-ಶುಲ್ಕ-ಸಾಲಗಳ ರೂಪದಲ್ಲಿ ಸಂಗ್ರಹಿಸುವ ರಾಜ್ಯಾದಾಯದಲ್ಲಿ ಸಿಂಹಪಾಲನ್ನು ಕಬಳಿಸಿ ಇನ್ನೂ ಸಾಲದೆಂದು ಭೋರಿಡುವ ಆಡಳಿತ ವ್ಯವಸ್ಥೆ, ರಮಲ-ಜ್ಯೋತಿಷ್ಯ-ಶಕುನ-ಕ್ಷೇತ್ರ-ತೀರ್ಥ-ಪವಾಡ ಇತ್ಯಾದಿ ನಾನಾ ರೂಪಗಳಲ್ಲಿ ಮುಗ್ಧ ಜನಸಾಮಾನ್ಯರನ್ನು ಹಾಡುಹಗಲೇ ದೋಚುವ ಪುರೋಹಿತ ವ್ಯವಸ್ಥೆ; ಉಣ್ಣುವ ಆಹಾರ ಪದಾರ್ಥಗಳಲ್ಲಿ ಕಸ-ಕಡ್ಡಿ-ಕಲ್ಲುಗಳನ್ನು ಕೂಡಿಸಿ ನಿರ್ಭಯವಾಗಿ ಮಾರಿ ಲೆಕ್ಕಕ್ಕೆ ಸಿಕ್ಕದಷ್ಟು ಸಂಪಾದಿಸಿ ಹೂಂಕರಿಸುತ್ತಿರುವ ವ್ಯಾಪಾರ ವ್ಯವಸ್ಥೆ, ನೀರಿನಂತೆ ಹಣ ವೆಚ್ಚ ಮಾಡದಿದ್ದರೆ ನಿಮ್ಮ ಕಾಯಿಲೆ ಕಸಾಲೆಗಳು ವಾಸಿಯಾಗವೆಂಬ ವೈದ್ಯಕೀಯ ವ್ಯವಸ್ಥೆ, ನ್ಯಾಯವನ್ನು ಕೊಳ್ಳುವ ಶಕ್ತಿಯಿಲ್ಲದ ದುರ್ಬಲರ ಪಾಲಿಗೆ ನ್ಯಾಯವಿಲ್ಲವೆಂಬಂತಿರುವ ನ್ಯಾಯವ್ಯವಸ್ಥೆ, ಶುಲ್ಕ ತೆರುವ ಸಾಮರ್ಥ್ಯವಿಲ್ಲದಿದ್ದರೆ ಸೀಟು ಸಿಕ್ಕದೆಂಬ ಶಿಕ್ಷಣ ವ್ಯವಸ್ಥೆ, ಕಲಿಸುವ ಶಿಕ್ಷಕರಿಗಿಂತ ಪಂಚತಾರಾ ಹೋಟೆಲುಗಳಲ್ಲಿ ಆಡುವ ಬಾಣಸಿಗಳಿಗೆ ದುಪ್ಪಟ್ಟು, ಮುಪ್ಪಟ್ಟು ಸಂಬಳ ಕೊಡುವ ವೇತನ ವ್ಯವಸ್ಥೆ, ಮದುವೆಯ ಮಾರುಕಟ್ಟೆಯಲ್ಲಿ ವರರ ಹರಾಜು ಮಾಡುವ ವಿವಾಹ ವ್ಯವಸ್ಥೆ-ಎಷ್ಟೊಂದು ಅನಿಷ್ಟ ವ್ಯವಸ್ಥೆಗಳು ! ಈ ದೇಶದಲ್ಲಿ ಇವೆಲ್ಲವನ್ನೂ ತೊಡೆದು ಹಾಕದೆ ಹೊಸ ಸಮಾಜವನ್ನು ಕಟ್ಟುವೆವು ಎಂಬುದು ಹೆಗ್ಗಣವನಿಟ್ಟು ನೆಲಗಟ್ಟು ಕಟ್ಟಿದ ಹಾಗೆಯೇ! ಹೊಸ ಸಮಾಜ ಹುಟ್ಟದೆ ಹೊಸಬಾಳು, ಅದರಿಂದ ಹೊಸ ಸಾಹಿತ್ಯ ಹುಟ್ಟುವುದೆಂಬುದು ಬರಿಯ ಭ್ರಮೆ.

ಇವೆಲ್ಲವನ್ನೂ ಇನ್ನೂ ಎಷ್ಟು ದಿನ ಸಹಿಸಿಕೊಂಡಿರುವುದು ? ಯುಗಯುಗಗಳಿಂದ ರಾಜರಿಗೆ, ಗುರುಗಳೆಂಬವರಿಗೆ, ಅರ್ಚಕರಿಗೆ, ಪುರೋಹಿತರಿಗೆ, ಬಲವುಳ್ಳವರಿಗೆ, ಧನವುಳ್ಳವರಿಗೆ ಬಾಗಿ ಬಾಗಿ ಬೆನ್ನೇ ಬಾಗಿ, ಬೇಡುವ ಬಾಯಿ, ಒಡ್ಡಿದ ಕೈ

ಯಾಗಿ ಆಳು ಬಾಳು ಬಾಳುತ್ತ ಬಂದಿರುವ ಭಾರತದ ಬಡ ಜನರಿಗೆ ಇವರನ್ನು ಪ್ರತಿಭಟಿಸಿ ನಿಲ್ಲುವ ಕೆಚ್ಚಿಲ್ಲದಿದ್ದರೆ ಕ್ಷಮ್ಯವೇ! ಆದರೆ ಸಂವೇದನಾಶೀಲರಾದ ಸಾಹಿತಿಗಳೂ ಮೂಕ ಪ್ರೇಕ್ಷಕರಾಗಿ ಉಳಿದರೆ ಹೇಗೆ? ಇವರೊಡನೆ ರಾಜಿಮಾಡಿಕೊಂಡು ತಾವೂ ಮೋಜು ಮಾಡಬೇಕೆನ್ನುವವರು ಈ ದೇಶದ ಹೊಸ ಹುಟ್ಟಿನ ಹರಿಕಾರರು ಹೇಗಾದಾರು? ಈ ಸ್ಥಾಪಿತ ವ್ಯವಸ್ಥೆಗಳೀಗ ತಮ್ಮ ಉಳಿವಿಗಾಗಿ ಏನೆಲ್ಲ ಪ್ರಯತ್ನಗಳನ್ನೂ ಮಾಡುತ್ತಿವೆ. ಅವುಗಳಿಗೆ ನಾವೀಗ ಶರಣಾಗತರಾದೆವೋ ಒಂದೊಂದಾಗಿ ಈ ಬಂಧನಗಳು ಬಿಗಿಗೊಳ್ಳುತ್ತ ನಾವು ಉಸಿರಾಡಿಸುವುದೂ ಕಷ್ಟವಾದೀತು-ಸ್ವಾತಂತ್ರ್ಯ, ಸಮತೆ, ಸಮಾನಾವಕಾಶಗಳ ವಿಷಯ ಗಗನಕುಸುಮ ಪರಿಮಳವಾದೀತು! ಎಚ್ಚರೆಚ್ಚರ-ಬರಹಗಾರ!

ಇನ್ನೂ ವಿದ್ಯಾರ್ಥಿಯಾಗಿದ್ದಾಗಲೇ-ನಾಲ್ಕು ದಶಕಗಳಿಗೂ ಆಚೆ-ಕಾವ್ಯಾನಂದ ಕನಲಿ ನುಡಿದಿದ್ದ-ಕೆರಳಿ ನುಡಿದಿದ್ದ:

"ನೆನಪಿಡು ಸಮಾಜವೇ-ನಿನ್ನ ನಿರ್ಲಕ್ಷ್ಯತನ
ಕೊನೆಗಾಣಲೇಬೇಕು-ಸಾಗದಿನ್ನು;
ಇದ್ದುದನು ಎಂತೆಂತೊ ಉಳಿಸಿ ಬಾಳುವ ಹೊಂಚು
ಇನ್ನು ನಡೆಯದು-ಇದಕೆ ಬೇಗ ಶರಣೆನ್ನು!
ಬಂಡಾಯ ಗುಡುಗುತಿದೆ ಮೂಕತೆಯ ಮೋಡದಲಿ
ಪ್ರತಿಭಟನೆ ಪುಟಿಯುತಿದೆ ಅಸ್ಥಿ ಪಂಜರದಿ;
ಸೇಡು ಸಿಡಿದೇಳುತಿದೆ ಸಾಯುತಿಹ ಜನಮನವಿ
ಕ್ರಾಂತಿ ಕಿಡಿಗೆದರುತಿದೆ ನಿನ್ನ ಮಂದಿರದಿ!
ದುಃಖಿತರ ಸುಯ್ಲಿನಲಿ ಸಿಡಿಮದ್ದು ಹಾರುತಿದೆ
ದಾರಿದ್ರ್ಯದುಮ್ಮಳದಿ ಪ್ರಳಯ ಕಾದಿಹುದು;
ಅಬಲೆಯರ ಕಣ್ಣೀರು ಕರೆಯುತಿದೆ ಬೆಂಕಿ-ಮಳೆ,
ಹಸಿದ ಹೊಟ್ಟೆಯ ಬಿಸಿಗೆ ಭೂಮಿಕಾದಿಹುದು!
ಕುರಿಗಳನು ಕಾಯ್ವುದಕೆ ತೋಳಗಳ ನಿಯಮಿಸಿದೆ
ಕುರಿ ತೋಳಗಳ ಕೊಲ್ವ ಕಾಲಬಂತು!
ದೀನತನ ಕೊನೆಗೊಮ್ಮೆ ದಾನವತ್ವವ ಮೆಟ್ಟಿ
ಮಾನವತ್ವದ ತರುವ ಕಾಲಬಂತು!"

ಆ ಕಾಲ ಇನ್ನೂ ಬಂದಿಲ್ಲ. ಇನ್ನೂ ಮುಂದ ಮುಂದಕ್ಕೆ ಓಡುತ್ತಿರುವಂತೆ ಭಾಸವಾಗುತ್ತಿದೆ. ಯಾಕೆಂದರೆ ಬಡತನವನ್ನೇ ರಾಜಕೀಯ ಭಂಡವಾಳ ಮಾಡಿಕೊಂಡವರಿಂದ ಬಡತನದ ನಿರ್ಮೂಲನ ಸಾಧ್ಯವಿಲ್ಲ; ಅಸ್ಪೃಶ್ಯತೆಯನ್ನೇ ಆಸ್ತಿಯನ್ನಾಗಿ ಮಾಡಿಕೊಂಡವರಿಂದ ಅಸ್ಪೃಶ್ಯತೆಯ ವಿಧ್ವಂಸನ ಸಾಧ್ಯವಿಲ್ಲ; ಜಾತಿ



ವ್ಯವಸ್ಥೆಯನ್ನೇ ಸುಲಿಗೆಯ ಸೂತ್ರವನ್ನಾಗಿ ಮಾಡಿಕೊಂಡವರಿಂದ ಜಾತಿ ವ್ಯವಸ್ಥೆಯ ಸಮಾಧಿ ಸಾಧ್ಯವಿಲ್ಲ; ಅಧಿಕಾರಶಾಹಿ, ಬಂಡವಾಳ ಶಾಹಿಗಳ ಆಶಯಗಳನ್ನೇ ಅರಿತೋ ಅರಿಯದೆಯೋ ಮೌಲ್ಯಗಳನ್ನಾಗಿ ಮಾಡಿಕೊಂಡವರಿಂದ ಸಾಮಾಜಿಕ ಸಾಂಸ್ಕೃತಿಕ ಕ್ರಾಂತಿ ಸಾಧ್ಯವಿಲ್ಲ! ಈಗಲಾದರೂ ಬಹುಪಾಲು ಕುರಿಗಳಂತಿರುವ ಉತ್ಪೀಡಿತ ವರ್ಗಗಳೇ, ದಲಿತ-ದುರ್ಬಲರೇ, ವಂಚಿತ-ಶೋಷಿತ ಶ್ರೀಸಾಮಾನ್ಯರೇ ಇನ್ನೂ ತಮ್ಮನ್ನು ತಿನ್ನುತ್ತಲೇ ಇರುವ ತೋಳಗಳ ಹಲ್ಲು ಮುರಿಯಲು-ಕೊಲ್ಲಲು ಅಲ್ಲ, ಹಲ್ಲು ಮುರಿಯಲು-ಮುಂದಾಗಬೇಕು! "ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲೊಡೆ ಹಾವಿನ ಸಂಗವೇ ಲೇಸು ಕಂಡಯ್ಯ", ಎಂದು ಸಾರಿದಳು ಅನುಪಮ ವ್ಯಕ್ತಿತ್ವದ ಅಕ್ಕಮಹಾದೇವಿ. ಅಕ್ಕನ ಕ್ಷಮೆ ಕೋರಿ, "ಶೋಷಕರ ಹಲ್ಲ ಕಳೆದು ಶೋಷಕರನಾಡಿಸ ಬಲ್ಲೊಡೆ ಶೋಷಕರ ಸಂಗವೇ ಲೇಸು ಕಂಡಯ್ಯ", ಎಂದು ಹೇಳಬಹುದಲ್ಲವೆ?

ಶೋಷಕರ ಹಲ್ಲು ಕೀಳುವುದು ಹೇಗೆ? ಇದನ್ನರಿಯಲು ಅವರ ಹಲ್ಲು ಇರುವುದೆಲ್ಲಿ ಎಂಬುದನ್ನು ಮೊದಲು ಅರಿತುಕೊಳ್ಳಬೇಕು. ಆನೆಗೆ ತೋರುವ ಹಲ್ಲು ತಿನ್ನುವ ಹಲ್ಲು ಬೇರೆ ಬೇರೆ ಇರುವಂತೆ ಇವರಿಗೂ ಬೇರೆ ಬೇರೆ ಹಲ್ಲು ಇವೆ-ಕಲ್ಲು ಗುಗ್ಗರಿ ತಿಂದರೂ ಮುರಿಯದ ಹಲ್ಲು. ಇವರು ಧರಿಸುವ ಮುಖವಾಡಗಳ ಮೇಲೆ ಕಾಣುವುವು ಬರೆದ ಹಲ್ಲು, ಬೆಳೆದ ಹಲ್ಲಲ್ಲ-ತಿನ್ನುವ ಹಲ್ಲಲ್ಲ. ಇವರ ನಿಜವಾದ ಹಲ್ಲುಗಳನ್ನು ಹುಡುಕಿ ನೋವಾಗದಂತೆ ಅವುಗಳನ್ನು ಕೀಳುವ ಕೆಲಸಕ್ಕೆ ಶ್ರೀಸಾಮಾನ್ಯರನ್ನು ಸಿದ್ಧಗೊಳಿಸಬೇಕಾಗಿದೆ ಬರಹಗಾರರೀಗ. ಇದಕ್ಕಾಗಿ ಅವರು ಶೋಷಕ ದಂತ ವೈದ್ಯರಾಗಬೇಕು; ಈ ವೈದ್ಯ ವಿದ್ಯೆಯ ವಿವರಗಳನ್ನು ಬುದ್ಧ ಬಸವರ, ವಿವೇಕಾನಂದ ಗಾಂಧೀಜಿಯವರ, ಅಂಬೇಡಕರ್ ಜೆ.ಪಿ. ಲೋಹಿಯಾರ, ನಾರಾಯಣಗುರು-ಪೆರಿಯಾರ್-ಫುಳೆ ಮೊದಲಾದವರ, ಕುವೆಂಪು-ತಾರಾನಾಥ--ಹರ್ಡೇಕರ್ ಮೊದಲಾದವರ ಬರಹ-ಬೋಧೆಗಳಿಂದ ಸಂಗ್ರಹಿಸಿ, ಅವುಗಳಿಂದ ಅನ್ವಯಿಕ ದಂತ ವಿದ್ಯೆಯನ್ನು ರೂಪಿಸಿ ಅದನ್ನವರು ತುಳಿತಕ್ಕೆ, ಸುಲಿಗೆಗೆ, ಉತ್ಪೀಡನಕ್ಕೆ, ಅನ್ಯಾಯಕ್ಕೆ, ಅತ್ಯಾಚಾರಕ್ಕೆ, ಅವಹೇಳನಕ್ಕೆ ಒಳಗಾದ ಎಲ್ಲರಿಗೆ ತಿಳಿಸಿದ್ದಾದರೆ, ಕಲಿಸಿದ್ದಾದರೆ ಅವರು ಈ ಹಲ್ಲುಗಳನ್ನು ಮುರಿಯುತ್ತಾರೆ, ಇಲ್ಲದೆ ಅವುಗಳಿಗೆ ಸಿಕ್ಕದೆ ಪಾರಾಗುತ್ತಾರೆ. ಈ ಹಲ್ಲುಗಳು ಅವರ ಮುಖದಲ್ಲಿಲ್ಲ, ಅವರು ಕಟ್ಟಿದ ಶೋಷಕ ವ್ಯವಸ್ಥೆಯಲ್ಲಿದೆ ಎಂಬುದರ ಮರೆವಾಗದಿದ್ದರೆ ಸಾಕು. ಅವರಿಗೆ ಈ ಅರಿವು ನೀಡಲು ಅತ್ಯಂತ ಪರಿಣಾಮಕಾರಿಯಾದ ಮಾರ್ಗವಾವುದು? ಅಹಿಂಸಾತ್ಮಕ ಅಂದೋಲನವಂತೂ ಬೇಕೇ ಬೇಕು. ವಚನ ಚಳುವಳಿಯಂತೆ ಜನಾಂದೋಲನವೊಂದು ನಡೆದಾಗಲೇ ಆ ಆಂದೋಲನದ ಉಪಉತ್ಪನ್ನವಾಗಿ ಜೀವಂತ-ಜ್ವಲಂತ ಸಾಹಿತ್ಯ ಹೊರಹೊಮ್ಮೀತು. ಇಂಥದೊಂದು ಸಾಮಾಜಿಕ ಕ್ರಾಂತಿಯ ಆಂದೋಲನ ಸ್ವಾತಂತ್ರ್ಯ ಸಂಪಾದನೆಯ ತರುಣದಲ್ಲಿಯೇ ಪ್ರಾರಂಭ

ವಾಗಲಿದ್ದಿತು. ನಮ್ಮ ದುರ್ದೈವದಿಂದ ನಮ್ಮ ಬಾಪೂಜಿ ಪ್ರತಿಗಾಮೀ ಶಕ್ತಿಗಳ ಪಿತೂರಿಗೆ ಬಲಿಯಾದರು ! ಇನ್ನು ಈ ಆಂದೋಲನವನ್ನು ಮುಂದೂಡುವುದು ದುಸ್ಸಾಧ್ಯವಾದುದು. ಬುಲೆಟ್-ಪ್ರೂಫ್ ಕಾರುಗಳಲ್ಲಿ, ಮ್ಯಾಗ್ನೆಟ್-ನಿಯಂತ್ರಿತ ಮನೆಗಳಲ್ಲಿ ಭದ್ರವಾಗಿರುವೆವೆಂಬ ಸೂರೆಗಾರರು ವಜ್ರಪಂಜರದಲ್ಲಿದ್ದೂ ಅಹಿಂಗೆ ಆಹುತಿಯಾದ ಪರೀಕ್ಷಿತರಾಜನನ್ನು ಮರೆಯಕೂಡದು. ಈ ಅಂದೋಲನವನ್ನು ಒಡಕು ಬಿತ್ತಿ ವಿಫಲಗೊಳಿಸಬೇಕೆಂಬ, ಹಣ ಹೆಂಡಗಳ ಹೊಳೆ ಹರಿಸಿ ನಿರ್ಜೀವಗೊಳಿಸಬೇಕೆಂಬ, ಅಪಪ್ರಚಾರ, ಅಧಿಕಾರ ಬಲ, ಕಪಟ ಕಾರಸ್ಥಾನಗಳಿಂದ ಮೃತಗೊಳಿಸಬೇಕೆಂಬ ಯಾವ ಪ್ರಯತ್ನಗಳೂ ಫಲಕಾರಿಯಾಗವಿನ್ನು-ಎಲ್ಲ ಉತ್ಪೀಡಿತರು ಒಂದಾದರೆ, ಒಂದು ಹೊಸ ಸಮಾಜ ದರ್ಶನದೊಡನೆ ಮುಂದಾದರೆ, ಅಹಿಂಸೆಯೇ ಅವರ ಉಸಿರಾದರೆ, ಅಂತ್ಯೋದಯ ಅವರ ಗುರಿಯಾದರೆ.

ಅವರನ್ನು ಈ ಮಹಾಮಣಿಹಕ್ಕೆ, ಮಹಾಸಾಹಸಕ್ಕೆ ಸಿದ್ಧಗೊಳಿಸಬಲ್ಲ ಸಾಹಿತ್ಯ ಎಂತಿರಬೇಕು ? ಇದಕ್ಕೆ ಉತ್ತರವಾಗಿ ಬಸವಣ್ಣನವರ ಈ ಸೂಳ್ನುಡಿಯನ್ನು ತಮ್ಮ ಅವಗಾಹನೆಗೆ ತರಬಯಸುವೆ:

"ಹತ್ತು ಸಾವಿರ ಗೀತವ ಹಾಡಿ ಅರ್ಥವಿಟ್ಟಲ್ಲಿ ಫಲವೇನು,
ಮುಟ್ಟುವ ತೆರನನರಿಯದನ್ನಕ್ಕ ?"

ಓದುಗರಿಗೆ ಮುಟ್ಟುವ ತೆರನನರಿಯುವುದು ಮುಖ್ಯ ಬರಹಗಾರನಿಗೆ. ಜನತಾಂದೋಲನಕ್ಕಂತೂ ಈ ಮುಟ್ಟುವ ತೆರನನರಿತು ಬರೆಯಬಲ್ಲವರೇ ಬೇಕು. ಮುಂಬರುವ ದಿನಗಳಲ್ಲಿ ಆರ್ಥಿಕಹಿತ ರಾಜಕೀಯ ಹಿತ, ಆರ್ಥಿಕಹಿತ ಸಾಮಾಜಿಕ ಹಿತಗಳ ಸಮೀಕೃತ ಸಮನ್ವಿತ ಪರಿಕಲ್ಪನೆಯನ್ನು ರೂಪಿಸಿಕೊಂಡು ಅದನ್ನು ಉತ್ಪೀಡಿತರಿಗೆ ಮುಟ್ಟುವ ತೆರದಲ್ಲಿ, ಅವರನ್ನು ತಟ್ಟುವ ತೆರದಲ್ಲಿ ಬರೆಯಬಲ್ಲ ಬರಹಗಾರರ ಅಗತ್ಯ ಹೆಚ್ಚೀತೆಂದು ನಾನು ನಂಬಿದ್ದೇನೆ. ಇಂಥವರಿಗೆ ಇದೋ ಆಹ್ವಾನ ! ಬಂಡಾಯಕ್ಕೆ ಬೆಲೆ ಬರುವುದು ಇಲ್ಲಿ; ಲೇಖನಿ ಖಡ್ಗವಾಗಿ ಕತ್ತರಿಸಬೇಕಾಗಿರುವುದು ಈ ವಿಷಮ ವ್ಯವಸ್ಥೆಯನ್ನು ; ಪ್ರಗತಿಶೀಲತೆ ಒಡಮೂಡಬೇಕಾಗಿರುವುದು ಈ ಸಮಷ್ಟಿ ಹಿತದ ಸ್ವರೂಪ ನಿರ್ಣಯದಲ್ಲಿ; ನವ್ಯ ನವೋನವವಾಗುವುದು ಈ ಸಾಮುದಾಯಿಕ ಆಂದೋಲನಕ್ಕೆ ಸ್ಫೂರ್ತಿ ನೀಡುವಲ್ಲಿ ; ನವೋದಯ ಜನೋದಯವಾಗುವುದು ಜನಯುಗ ನಿರ್ಮಾಣದಲ್ಲಿ. ರಾಜರಿಗೆ ರಾಜಾನ್ನವಾದ, ದೇವರಿಗೆ ದೇವಾನ್ನವಾದ, ಪಂಡಿತ ಪುರೋಹಿತರಿಗೆ ಪರಮಾನ್ನವಾದ ಸಾಹಿತ್ಯ ಬೇಕಾದಷ್ಟು ಬಂದಿದೆ ನಮ್ಮ ನುಡಿಯಲ್ಲಿ ; ಈಗ ರೈತರಿಗೆ ರೊಟ್ಟಿ-ಚಟ್ನಿಯಾಗಬಲ್ಲ ಸಾಹಿತ್ಯ, ದುಡಿವರಿಗೆ ದಲಿತರಿಗೆ ಅನ್ನಸಾರು ಆಗಬಲ್ಲ ಸಾಹಿತ್ಯ ಧಾರಾಳವಾಗಿ ಬರಲಿ !



## ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ನಾಡು ಚರಗ ಚೆಲ್ಲಿದಂತೆ ಚೆದುರಿ ಚೆಲ್ಲಾಪಿಲ್ಲಿಯಾಗಿದ್ದಾಗಲೂ ಕನ್ನಡಕುಲದ ಕಮನೀಯ ಕಲ್ಪನೆಯನ್ನು ವಿದ್ಯಾವರ್ಧಕ ಸಂಘದೊಡನೆ ಎಲ್ಲ ಭಾಗಗಳ ಕನ್ನಡಿಗರ ಮುಂದೆ ಮನೋಜ್ಞವಾಗಿ ಮಂಡಿಸಿ, ಕನ್ನಡಿಗರ ಸಾಂಸ್ಕೃತಿಕ ಏಕೀಕರಣಕ್ಕೆ ಬುನಾದಿಯನ್ನು ಹಾಕಿ, ಕನ್ನಡ ನುಡಿ ತಲೆ ಎತ್ತಲು, ಹೊಸಗನ್ನಡ ಸಾಹಿತ್ಯ ಹುಲುಸಾಗಿ ಬೆಳೆಯಲು ಕಳೆದ ಏಳು ದಶಕಗಳಿಂದಲೂ ಸಾಕಷ್ಟು ಶ್ರಮಿಸುತ್ತ ಬಂದಿರುವ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಮೂಲೋದ್ದೇಶಗಳಲ್ಲಿ ಕೆಲವು ಈಡೇರಿದ ಸಂತೃಪ್ತಿಯೊಡನೆ, ನಿರಂತರವಾಗಿ ಮುಂದುವರಿಯಬೇಕಾದ ಇನ್ನುಳಿದ ಉದ್ದೇಶಗಳನ್ನು ಮುಂದುವರಿಸಿಕೊಂಡು ನಡೆದಿದೆ, ಧನಬಲ ಜನಬಲಗಳನ್ನು ಗಳಿಸಿಕೊಳ್ಳುತ್ತ ನಡೆದಿದೆ. ಸಂತೋಷವೇ.

ಆದರೆ ವ್ಯಕ್ತಿ, ಸಂಘ, ಸಂಸ್ಥೆ, ನಾಡು, ರಾಷ್ಟ್ರಗಳ ಬೆಳವಣಿಗೆಗೆ, ಅರ್ಥಪೂರ್ಣ ಅಭಿವೃದ್ಧಿಗೆ ಜನಬಲ ಧನಬಲಗಳಷ್ಟೇ ಸಾಲವು ; ಅವುಗಳೊಡನೆ ನೈತಿಕ ಬಲವೂ ಬೇಕೆಂಬುದು ಪರಿಷತ್ತಿನ ಭವಿತವ್ಯವದ ಬಗ್ಗೆ ನಿಷ್ಪಕ್ಷಪಾತವಾಗಿ ಚಿಂತಿಸುವವರ ನ್ಯಾಯವಾದ ನಿಲುವಾಗಿದೆ. ಕನ್ನಡ ಸರಸ್ವತಿಯ ಈ ಪವಿತ್ರ ಮಂದಿರ ಪವಿತ್ರವಾಗಿಯೇ ಉಳಿಯಬೇಕೆಂಬುದು ಅವರ ಆಸೆ. ಈ ಆಸೆ ಈಡೇರಬೇಕು. ಪರಿಷತ್ತಿನ ಘನತೆ ಗೌರವಗಳಿಗೆ ಧಕ್ಕೆ ಬರದ ರೀತಿಯಲ್ಲಿ ಈಡೇರಬೇಕು. ಪದಾಧಿಕಾರಿಗಳು, ಪರಿಷತ್ತು ಒಂದೇ ಅಲ್ಲ. ಪದಾಧಿಕಾರಿಗಳು ಬರುತ್ತಾರೆ, ಹೋಗುತ್ತಾರೆ, ಆದರೆ ಪರಿಷತ್ತು ಕೊನೆಯವರೆಗೆ ಉಳಿಯಬೇಕಾದುದು, ಉಳಿಯಬೇಕು. ನೈತಿಕ ನೆಲಗಟ್ಟಿನ ಮೇಲೆ ಪರಿಷತ್ತು ಪ್ರಚಂಡ ಶಕ್ತಿಯಾಗಿ ಬೆಳೆಯುವಂತೆ ಪರಿಷತ್ತಿನ ಪದಾಧಿಕಾರಿಗಳೂ ಸರ್ವಕನ್ನಡಿಗರೂ ಧ್ಯೇಯರತಿಯೊಡನೆ ದುಡಿಯಬೇಕು. ಅದರ ಅಂಗರಚನೆಯಲ್ಲಿ ಇನ್ನೂ ಮಾರ್ಪಾಟುಗಳು ಅಗತ್ಯವೆನಿಸಿದರೆ ಮುಕ್ತ ಮನಸ್ಸಿನ ಚರ್ಚೆ ನಡೆಸಿ ತೀರ್ಮಾನಿಸಿಕೊಳ್ಳಬೇಕು. ಈ ಮಾರ್ಪಾಟುಗಳಲ್ಲಿ ಪರಿಷತ್ತಿನ ಚುನಾವಣಾಧಿಕಾರಿಗಳನ್ನು ಸರಕಾರವೇ ನೇಮಿಸಬೇಕೆಂಬುದು ಬಹಳ ಮುಖ್ಯವಾದುದು. ಪರಿಷತ್ತು ಪ್ರಜಾಸತ್ತಾತ್ಮಕ ಸಂಸ್ಥೆಯಾಗಿ ಉಳಿದೂ ಅದಕ್ಕೆ ಹೊರಗುಳಿವ ಹಿರಿಯ ಸಾಹಿತಿಗಳೆಲ್ಲರ ಸಲಹೆ ಸಿಕ್ಕುತ್ತಿರುವಂತೆ ಏರ್ಪಾಟು ಆಗಬೇಕು ; ಎಲ್ಲ ಭಾಗಗಳ ಕನ್ನಡ ಸೇವಾಸಕ್ತರ ಸಕ್ರಿಯ ಸಹಕಾರ ಅದಕ್ಕೆ ದೊರೆಯುವ ಹಾಗೆ ವ್ಯವಸ್ಥೆಯಾಗಬೇಕು ; ಜಿಲ್ಲಾ ಪರಿಷತ್ತುಗಳ ಶಕ್ತಿ, ಕಾರ್ಯ, ಕ್ಷಮತೆಗಳು ಹೆಚ್ಚಬೇಕು.

ಯಾಕೆಂದರೆ ಪರಿಷತ್ತು ಹೊರಬೇಕಾದ ಹೊಣೆಗಳು ಹೆಚ್ಚುತ್ತಿವೆ. 'ಕನ್ನಡ ಕುಲ'ವೆಂಬುದು ಕೇವಲ ಕವಿಗಳ ಕಲ್ಪನೆ ಮಾತ್ರವಲ್ಲ, ಅದು ನಮ್ಮ ಸಾಂಸ್ಕೃತಿಕ ಸತ್ಯವೆಂಬುದನ್ನು ಪರಿಷತ್ತು ಪ್ರತ್ಯಕ್ಷೀಕರಿಸಿ ತೋರಿಸಬೇಕಾಗಿದೆ ; ಕನ್ನಡ ನಾಡಿನ ಗಡಿಗಳುದ್ದಕ್ಕೂ ಎಚ್ಚತ್ತ ಕೆಚ್ಚೆದೆಯ ಕನ್ನಡಿಗರ ಕೋಟೆಯನ್ನು ಕಟ್ಟಬೇಕಾಗಿದೆ ;

ಗಡಿಯಾಚೆ ಇರುವ ಕನ್ನಡಿಗರು, ಹೊರದೇಶಗಳಲ್ಲಿರುವ ಕನ್ನಡಿಗರು ತಮ್ಮ ಕನ್ನಡತನವನ್ನು ಉಳಿಸಿಕೊಳ್ಳುವುದು ಸಾಧ್ಯವಾಗುವಂತೆ ಅವರಿಗೆ ಶಕ್ಯವಿರುವ ಎಲ್ಲ ನೆರವನ್ನೂ ನೀಡಬೇಕಿದೆ; ಕನ್ನಡನಾಡಿನ ಹೊರಗೆ ಉಳಿದಿರುವ ಕಾಸರಗೋಡಿನಂಥ ಕನ್ನಡ ಭಾಗಗಳನ್ನು ಕನ್ನಡ ನಾಡಿಗೆ ಕೂಡಿಸಲು ಪ್ರಭಾವೀ ಪ್ರಯತ್ನಗಳನ್ನು ಮಾಡಬೇಕಿದೆ; ಉದಯೋನ್ಮುಖ ಕನ್ನಡ ಲೇಖಕರಿಗೆ ವಿಶೇಷ ಮಾರ್ಗದರ್ಶನ ದೊರಕಿಸಿಕೊಡುವುದಲ್ಲದೆ ಅವರ ಅರ್ಹ ಕೃತಿಗಳ ಪ್ರಕಾಶನಕ್ಕೆ ವ್ಯವಸ್ಥೆ ಮಾಡಬೇಕಿದೆ; ಬಹಳಷ್ಟು ಭರವಸೆಯನ್ನು ಹುಟ್ಟಿಸಿರುವ ಕನ್ನಡ ಲೇಖಕಿಯರಿಗೆ ವಿಶೇಷ ಪ್ರೋತ್ಸಾಹವನ್ನು ನೀಡಬೇಕಿದೆ; ಮಕ್ಕಳ ಸಾಹಿತ್ಯ ಅಕಾಡೆಮಿ, ಮಕ್ಕಳ ಸಾಹಿತ್ಯ ಪರಿಷತ್ತು, ಗಮಕಕಲಾ ಪರಿಷತ್ತು, ಕನ್ನಡ ಇತಿಹಾಸ ಅಕಾದೆಮಿಗಳು ಹುಟ್ಟಿರುವುದು ಹಿಗ್ಗಿನ ಸಂಗತಿ; ಅವುಗಳನ್ನು ಬೆಳೆಸಬೇಕಿದೆ; ಕನ್ನಡ ರಂಗಭೂಮಿಯ ಪುನರುಜ್ಜೀವನ ಪ್ರಯತ್ನ ಪ್ರಾರಂಭವಾಗಬೇಕಿದೆ; ಕನ್ನಡ ಪದವೀಧರರ, ಬೆರಳಚ್ಚುಗಾರರ, ಶೀಘ್ರಲಿಪಿಕಾರರ, ಪಂಡಿತ ವಿದ್ವಾನ್ ಪದವಿಗಳನ್ನು ಪಡೆದವರ, ಕನ್ನಡ ಜಾಣ ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಉದ್ಯೋಗಾವಕಾಶಗಳ ವಿಸ್ತರಣೆಗಾಗಿ ಹೋರಾಟನಡೆಸಬೇಕಿದೆ; ಕನ್ನಡ ಸಂಗೀತ ಸಭೆಗಳನ್ನು ಜನಪ್ರಿಯಗೊಳಿಸಬೇಕಿದೆ; ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ, ವಿಚಾರ ಸಾಹಿತ್ಯ, ಶಾಸ್ತ್ರ ಸಾಹಿತ್ಯಗಳು ವೆಗ್ಗಳವಾಗಿ ಬೆಳೆಯುವಂತೆ ಉಳುಮೆ ಮಾಡಬೇಕಿದೆ; ಹೊಸಗನ್ನಡ ಸಾಹಿತ್ಯವು ನಮಗೆ ನೀಡಿರುವ ವಿವಿಧ ಪ್ರಕಾರಗಳ ಅತ್ಯುತ್ತಮ ಭಾಗಗಳ ಸಂಕಲನಗಳನ್ನು ಪ್ರಕಟಿಸಿ ಶ್ರೀಸಾಮಾನ್ಯರೂ ಕೊಳ್ಳಬಹುದಾದ ಬೆಲೆಗೆ ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕಿದೆ; ವಾಚನಾಲಯಗಳ ಚಳುವಳಿಯನ್ನು ವ್ಯಾಪಕವಾಗಿ ನಡೆಸಬೇಕಿದೆ; ಮಹಾರಾಷ್ಟ್ರದಲ್ಲಿ ಜನಪ್ರಿಯವೂ ಬಹೂಪಯೋಗಿಯೂ ಆಗಿರುವ 'ಗ್ರಂಥಾಲಿ' ಆಂದೋಲನಕ್ಕೆ ಸಂವಾದಿಯಾದ ಸಾಹಿತ್ಯ ಪ್ರಕಟನ, ಸಾಹಿತ್ಯದಾನ ಅಭಿಯಾನವೊಂದನ್ನು ಪ್ರಾರಂಭಿಸಬೇಕಿದೆ. ಈ ಯಾದಿಯನ್ನು ವಿಸ್ತರಿಸುತ್ತಲೇ ಹೋಗಬಹುದು. ಪರಿಷತ್ತಿನ ಕಾರ್ಯಕ್ಷೇತ್ರ ಎಷ್ಟು ವಿಸ್ತಾರವಾಗುತ್ತ ನಡೆದಿದೆ, ಅದರ ಹೊಣೆಗಳು ಎಷ್ಟು ಹೆಚ್ಚಿವೆ ಎಂಬುದಕ್ಕೆ-ಸಂಕೇತ ಮಾತ್ರ ಈ ಯಾದಿ. ಇದನ್ನು ಅನುಲಕ್ಷಿಸಿ ಪರಿಷತ್ತಿನ ಶಕ್ತಿ ಸಂವರ್ಧನೆಗೆ, ಶೀಲ ಸಂವರ್ಧನೆಗೆ ಅದರ ಪದಾಧಿಕಾರಿಗಳೂ ಪ್ರಯತ್ನಿಸಬೇಕು. ಸರ್ವ ಕನ್ನಡಿಗರೂ ಸಹಕರಿಸಬೇಕು.

## ಕೊನೆಯ ಕೋರಿಕೆ

ಕನ್ನಡ ತಾಯಿಯ ಕರುಳಿನ ಕುಡಿಗಳೆ, ಕೈಯಿಟ್ಟಲ್ಲಿ ಕನ್ನಡದ ಕೆಲಸ ಕಾದು ಕುಳಿತಿದೆ. ನಿಮ್ಮನ್ನು ಕೈಮಾಡಿ ಕರೆಯುತ್ತಿದೆ. ಅದರ ಕರೆಗೆ ಕಿವುಡಾಗದಿರಿ; ಈಗ ಬದುಕಿರುವ ಕನ್ನಡಿಗರಿಗೆ ಇದೊಂದು ಭಾಗ್ಯ-ಹುಡುಕುವ ಆಯಾಸವಿಲ್ಲದೆ ತಂತಮ್ಮ ಅಭಿರುಚಿಗೆ ತಕ್ಕ ಕನ್ನಡದ ಕೆಲಸವನ್ನು ಕೈಗೆತ್ತಿಕೊಂಡು ಅದನ್ನು ಮಾಡಿ ಧನ್ಯರಾಗುವ ಭಾಗ್ಯ, "ಇದು ಭಾಗ್ಯ, ಇದು ಭಾಗ್ಯ, ಇದು ಭಾಗ್ಯ"ವೆನ್ನಿರಿ. ಕನ್ನಡದ ತಾಯಿಯ ಊಳಿಗಕ್ಕೆ ಓಡಿಬನ್ನಿರಿ. ಪ್ರತಿಯೊಬ್ಬ ಕನ್ನಡಿಗನೂ ನಮ್ಮ ಆದಿಕವಿ ಅಪೇಕ್ಷಿಸಿದಂತೆ "ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗಳ್ಗಾಗರಮಾದ" ಮಾನಿಸನಾದಾಗಲೇ ಕನ್ನಡ ತಾಯಿ ಕನ್ನಡಿಗರಿಗೆ ಗೆಲವಾಗಿ, ಭಾರತಕ್ಕೆ ಬಲವಾಗಿ, ವಿಶ್ವಕ್ಕೆ ಚೆಲುವಾಗಿ ರಾರಾಜಿಸುವಳು; ಕನ್ನಡ ಕುಲವು ಮನುಕುಲಕ್ಕೆ ಮರ್ಯಾದೆ ತರುವ ಕುಲವಾಗಿ ಬೆಳಗುವುದು. ಸ್ವದೇಶಾಭಿಮಾನ, ಸ್ವಭಾಷಾಭಿಮಾನಗಳುಳ್ಳವರ ಮುಖಮಂಡಲಗಳು ಆತ್ಮಪ್ರತ್ಯಯದ ಅಖಂಡ ತೇಜಸ್ಸಿನಿಂದ ದೇದೀಪ್ಯಮಾನವಾಗಿ ತೊಳಗಿ ಬೆಳಗುತ್ತವೆ. ಅದೇ ಹೆರವರ ನಾಡುನುಡಿಗಳನ್ನು ನಂಬಿದವರ ಮುಖಗಳು ಹೆಣಗಳಂತೆ ನಿಸ್ತೇಜವಾಗಿರುತ್ತವೆ. ಕನ್ನಡಿಗರ ವದನಗಳು ಕನ್ನಡತನದ ಸದನಗಳಾಗಿ ಕಾಂತಿಯಿಂದ ತಳತಳಿಸಲಿ! ಕನ್ನಡದ ಮೂಲಕ ಮಾನ್ಯತೆಯನ್ನು, ಉನ್ನತಿಯನ್ನು, ಧನ್ಯತೆಯನ್ನು ಪಡೆದುಕೊಳ್ಳುವ ಭಾಗ್ಯ ಕನ್ನಡಿಗರದಾಗಲಿ! ಇದು ಕನ್ನಡಿಗರೆಲ್ಲರ—ಅವರಿವರೆನ್ನದೆ ಎಲ್ಲ ಕನ್ನಡಿಗರ ಗುರಿಯಾಗಲಿ—ಎಂಬುದೇ ನೀವೇ ಕರೆದುನ್ನತಾಸನದಲ್ಲಿ ಕೂರಿಸಿರುವ ನಿಮ್ಮ ಕರುಣದ ಕಂದನ ಕೊನೆಯ ಕೋರಿಕೆ.

ಜಯಭಾರತ ಜನನಿಯ ತನುಜಾತೆ—ಜಯಹೇ ಕರ್ನಾಟಕ ಮಾತೆ

ಭಾರತವು ಸಂಕ್ಷಿಪ್ತ ಬ್ರಹ್ಮಾಂಡವಾದರೆ
ಕರ್ನಾಟಕವು ಸಂಕ್ಷಿಪ್ತ ಭಾರತ ನೋಡಾ !
ಇಲ್ಲಿ ಇಲ್ಲದುದು ಇನ್ನೆಲ್ಲಿದೆ ತೋರಾ !
ಇಲ್ಲಿಯ ಕಲ್ಲು ರನ್ನ, ಮಣ್ಣು ಹೊನ್ನು, ನೀರು ಸುಧೆ !
ಮಲೆಬಯಲುಗಳ ಬೇಟೆ, ಕರಾವಳಿಯ ನೋಟ,
ಕೊಡಗಿನ ತೋಟಗಳ ಮೇಲಾಟ,
ಗಿರಿಧಾಮಗಳ ಮಾಟ, ವನ್ಯಪ್ರಾಣಿಗಳ ಚಿನ್ನಾಟ—
ಒಂದೊಂದೂ ಸೊಗಸಿನ ಸುಗ್ಗಿ, ಸೊಬಗಿನ ಸೂರೆ !
ಕನ್ನಡನಾಡಿನಲ್ಲಿ ಜನ್ಮವ ಬೇಡಿಕೊಂಡರೆ
ಎಲ್ಲವನ್ನೂ ಬೇಡಿಕೊಂಡಂತೆ ;
ಕನ್ನಡ ಸಂಸ್ಕೃತಿಯ ಮೈಗೂಡಿಸಿಕೊಂಡರೆ
ಎಲ್ಲವನ್ನೂ ಪಡೆದುಕೊಂಡಂತೆ !
ಮತ್ತೆ ಹುಟ್ಟಿಸುವುದಾದರೆ
ನನ್ನನಿಲ್ಲಿಯೇ ಹುಟ್ಟಿಸು ತಂದೆ !
ನರನಾಗಿ ಅಲ್ಲ—ಸುರಭಿಯಾಗಿ ಹುಟ್ಟಿಸು ;
ಇಟ್ಟರೆ ಸಗಣಿಯಾಗಿ, ತಟ್ಟಿದರೆ ಬೆರಣಿಯಾಗಿ,
ತಟ್ಟದೆ ಹಾಕಿದರೆ ಗೊಬ್ಬರವಾಗಿ
ಈ ನಾಡಿನ ಕೃಷಿಋಷಿಯ ಸೇವಿಸುವಾಸೆ ನನಗೆ ;
ಸುಟ್ಟರೆ ಶ್ರೀ ವಿಭೂತಿಯಾಗಿ
ಈ ನಾಡಿನ ಹರಭಕ್ತರ ಹಣೆಗಳಲ್ಲಿ
ಶೋಭಿಸುವಾಸೆ ನನಗೆ !
ಸುರಭಿಯಾಗಿಸದಿರೆ, ಗಂಧದ ಮರವಾಗಿ ಹುಟ್ಟಿಸು ;
ಅದನ್ನು ಬೆಳೆಸಿ ತುಂಡರಿಸು ;
ಮನೆಗೊಂದು ತುಂಡು ಮುಟ್ಟಿಸು ;
ತೇಯ್ದರೆ ಶ್ರೀಗಂಧವಾಗಿ
ಈ ನಾಡಿನ ಹರಿಭಕ್ತರ ಹಣೆಗಳಲ್ಲಿ
ವಿರಾಜಿಸುವಾಸೆ ನನಗೆ !
ಇದಾಗದಿರೆ, ಬಿದಿರ ಮೆಳೆಯಾಗಿ ಹುಟ್ಟಿಸಿ
ಬಡವರ ಗುಡಿಸಲುಗಳಿಗೆ ಒದಗಿಸು ;
ಮಕ್ಕಳ ಆಟಿಗೆಗಳಾಗಿ ಮಾರ್ಪಡಿಸು ;
ಮುರಲೀ ಪ್ರಿಯರಿಗೆ ಕೊಳಲ ಮಾಡಿಕೊಂಡು—
ಸ್ವತಂತ್ರಧೀರ ಸಿದ್ಧೇಶ್ವರಾ !

—ವಚನೋದ್ಯಾನದಿಂದ